ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಐಕ್ಯರಂಗ

ಸಂಪುಟ 17 ಸಂಚಿಕೆ 50 ರೂ. 2.00 10 ಡಿಸೆಂಬರ್ 1995

4 ಕಾಶ್ಮೀರದ ಗೋಜಲಿಗೆ ಪರಿಹಾರ ಹೇಗೆ?
4 ಅನುಭವಗಳ, ಸವಾಲುಗಳ ವಿಶ್ಲೇಷಣೆ
2 ಭೂ ಹೋರಾಟದ ಒಂದು ಅನುಭವ
6 ಪುರಿಯಲ್ಲಿ ಗೋಲೀಬಾರ್
7 ಆರು ದಿನ ಅಮೇರಿಕನ್ ಯಂತ್ರ ಸ್ಥಬ್ಧ

ವಿದ್ಯುತ್ ಕಡಿತ, ಕುಡಿಯುವ ನೀರಿನ ಅವ್ಯವಸ್ಥೆ ವಿರುದ್ಧ

ಡಿಸೆಂಬರ್ 11ರಂದು ರಾಜ್ಯಾದ್ಯಂತ ಪ್ರತಿಭಟನೆಗೆ ಕರೆ

ಡಿ. 22ರಿಂದ ಜನವರಿ 21 ರಾಜ್ಯಾದ್ಯಂತ ರಾಜಕೀಯ ಪ್ರಚಾರ-ಪ್ರಕ್ಷೋಭೆ

ಸಿಪಿಐ(ಎಂ) ರಾಜ್ಯ ಸಮಿತಿ ಕರೆ

ದೇಶದ ಜನಸಾಮಾನ್ಯರ ಬದುಕನ್ನು ಬಾಧಿಸುತ್ತಿರುವ ಒಂಭತ್ತು ಬೇಡಿಕೆಗಳ ಮೇಲೆ ಡಿಸೆಂಬರ್ ೨೨ರಿಂದ ಜನವರಿ ೨೧ರವರೆಗೆ ರಾಜ್ಯಾದ್ಯಂತ ರಾಜಕೀಯ ಪ್ರಚಾರ ಕಾರ್ಯ ನಡೆಸಬೇಕು ಎಂದು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ತನ್ನ ಎಲ್ಲಾ ಘಟಕಗಳಿಗೆ ಕರೆ ನೀಡಿದೆ. ನೂರಾರು ಸಭೆಗಳು, ಜಾಥಾಗಳು, ವಾಹನ ಜಾಥಾಗಳ ಮೂಲಕ ಒಂದು ತಿಂಗಳ ಪ್ರಚಾರ-ಪ್ರಕ್ಷೋಭೆಯ ನಂತರ ಜನವರಿ ೨೨ರಂದು ಬೆಂಗಳೂರಿನಲ್ಲಿ ಒಂದು ಬೃಹತ್ ರಾಜಕೀಯ ರ‍್ಯಾಲಿ ಸಂಘಟಿಸಲು ನವಂಬರ್ ೨೫ ಹಾಗೂ ೨೬ರಂದು ಸಭೆ ಸೇರಿದ ರಾಜ್ಯ ಸಮಿತಿ ನಿರ್ಧರಿಸಿದೆ.

ಪ್ರಚಾರ-ಪ್ರಕ್ಷೋಭೆಯ ಬೇಡಿಕೆಗಳು ಹೀಗಿವೆ:

೧. ಸಾರ್ವಜನಿಕ ವಿತರಣಾ ಕೇಂದ್ರಗಳಲ್ಲಿ ೧೪ ಅವಶ್ಯಕ ವಸ್ತುಗಳನ್ನು ಒದಗಿಸಿ ಬಲಗೊಳಿಸಬೇಕು; ನ್ಯಾಯ ಬೆಲೆ ಅಂಗಡಿಗಳಲ್ಲಿ ಮಾರಾಟ ಮಾಡುವ ಆಹಾರ ಧಾನ್ಯಗಳ ದರಗಳನ್ನು ೫೦ ಶೇಕಡಾ ಕಡಿಮೆ ಮಾಡಬೇಕು

೨. ಗ್ರಾಮಾಂತರ ಪ್ರದೇಶಗಳಲ್ಲಿ ಕೆಲಸಕ್ಕಾಗಿ ಧಾನ್ಯ ಕಾರ್ಯಕ್ರಮಗಳಿಗೆ ಆಹಾರ ಧಾನ್ಯಗಳನ್ನು ಒದಗಿಸಬೇಕು

೩. ಸಾರ್ವಜನಿಕ ವಲಯದ ಉದ್ದಿಮೆಗಳ ಶೇರುಗಳನ್ನು ಖಾಸಗಿಯವರಿಗೆ ಮಾರಾಟ ಮಾಡುವುದನ್ನು, ಸಾರ್ವಜನಿಕ ವಿಭಾಗದ ಘಟಕಗಳನ್ನು ಮುಚ್ಚುವುದನ್ನು ನಿಲ್ಲಿಸಬೇಕು.

೪. ಭೂಪರಿಮಿತಿಗಿಂತ ಹೆಚ್ಚಿನ ಭೂಮಿಯನ್ನು, ಬಂಜರು ಭೂಮಿಯನ್ನು, ಭೂರಹಿತರಿಗೆ ಹಂಚಬೇಕು, ಕೃಷಿಕೂಲಿಕಾರರಿಗೆ ಒಂದು ಕೇಂದ್ರ ಕಾನೂನನ್ನು ಅಂಗೀಕರಿಸಬೇಕು, ಕೃಷಿ ಕೂಲಿಕಾರರಿಗೆ ಹೆಚ್ಚಿನ ಕೂಲಿಗಾಗಿ ಹೋರಾಟಗಳನ್ನು ನಡೆಸಬೇಕು.

೫. ವಿದ್ಯಾಭ್ಯಾಸದ ಖಾಸಗೀಕರಣವನ್ನು ವಾಣಿಜ್ಯೀಕರಣವನ್ನು ನಿಲ್ಲಿಸಬೇಕು.

೬. ಸಾರ್ವಜನಿಕ ಆರೋಗ್ಯ ವ್ಯವಸ್ಥೆಗೆ ಹೆಚ್ಚಿನ ಹಣವನ್ನು ಒದಗಿಸಬೇಕು.

೭. ಮಹಿಳೆಯರಿಗೆ ಸಮಾನ ಕೂಲಿ ಮತ್ತು ಕೆಲಸ ಮಾಡುವ ಮಹಿಳೆಯರಿಗೆ ರಕ್ಷಣೆ.

೮. ನೆರೆಬಾಧಿತ ರಾಜ್ಯಗಳಿಗೆ ಪೂರ್ಣ ಪರಿಹಾರ ಒದಗಿಸಬೇಕು, ಸಂತ್ರಸ್ತರಿಗೆ ಪುನರ್ವಸತಿ ಒದಗಿಸಬೇಕು

೯. ಚಂದ್ರಸ್ವಾಮಿಯನ್ನು ಬಂಧಿಸಬೇಕು, ಹವಾಲಾ ಕೇಸಿನಲ್ಲಿ ತಪ್ಪಿತಸ್ಥರ ಮೇಲೆ ಕೇಸ್ ಹಾಕಬೇಕು.

ಎಲ್ಲಾ ನೀತಿ ನಿಯಮಗಳನ್ನು ಸಂಪೂರ್ಣವಾಗಿ ಗಾಳಿಗೆ ತೂರಿ ಗೃಹಿಣಿಯರ, ವಿದ್ಯಾರ್ಥಿಗಳ, ಕೈಗಾರಿಕೋದ್ಯಮಿಗಳ, ವ್ಯಾಪಾರಸ್ಥರ ಹಾಗೆಯೇ ರೈತ ಸಮುದಾಯದ ಸಂಕಷ್ಟ-ತೊಂದರೆಗಳನ್ನು ನಿರ್ಲಕ್ಷಿಸಿ ಮನಬಂದಂತೆ ವಿದ್ಯುತ್ ಕಡಿತ ಮತ್ತು ಲೋಡ್ ಶೆಡ್ಡಿಂಗ್ ಮಾಡುತ್ತಿರುವ ಸರಕಾರದ ಮತ್ತು ಕೆಇಬಿಯ ನೀತಿಯನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಬಲವಾಗಿ ಖಂಡಿಸುತ್ತದೆ. ಸರಕಾರದ ಮತ್ತು ಕೆಇಬಿಯ ಈ ಅನ್ಯಾಯದ ವಿರುದ್ಧ 11.12.95ರಂದು ಕೆಇಬಿ ಕಛೇರಿಗಳ ಮುಂದೆ ಮತ ಪ್ರದರ್ಶನ ನಡೆಸಬೇಕೆಂದೂ ನವಂಬರ್ 25, 26ರಂದು ಸೇರಿದ್ದ ರಾಜ್ಯ ಸಮಿತಿ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ.

ಮಳೆಯ ಅಭಾವದ ನೆವ ಮುಂದೆ ಮಾಡಿ ಕೆಇಬಿ ಕಳೆದ ಮೂರು ತಿಂಗಳಿಂದ ಒಂದಿಲ್ಲೊಂದು ರೀತಿಯಲ್ಲಿ ವಿದ್ಯುತ್ ಕಡಿತ ಮತ್ತು ಲೋಡ್ ಶೆಡ್ಡಿಂಗ್ ಪ್ರಾರಂಭ ಮಾಡಿದೆ. ದಿನಹೋದಂತೆ ಅದು ಕೆಡುತ್ತಿದ್ದು ಜನಜೀವನವನ್ನೇ ಅಸ್ತವ್ಯಸ್ತಗೊಳಿಸಿದೆ.

ವಿದ್ಯುತ್ ಅಭಾವದಿಂದಾಗಿ ಬಿಜಾಪುರ ನಗರ ಮತ್ತು ಜಿಲ್ಲೆಯಲ್ಲಿ ವಾರಕ್ಕೊಂದು ಸಲ ಅದೂ ಒಂದೇ ಒಂದು ಗಂಟೆ ಕಾಲ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದೆ. ಇಡೀ ರಾಜ್ಯದಲ್ಲಿ ಇಂಥದ್ದೇ ಪರಿಸ್ಥಿತಿ ಉಂಟಾಗಿದೆ. ದಿನಕಳೆದಂತೆ ಈ ಹಾಹಾಕಾರ ಇನ್ನೂ ಹೆಚ್ಚು ಉಲ್ಬಣಗೊಳ್ಳಲಿದೆ. ವಿದ್ಯುತ್ತಿನ ಕಣ್ಣಾಮುಚ್ಚಾಲೆಯಿಂದಾಗಿ ಕೈಗಾರಿಕೆಗಳಿಗೆ ದೊಡ್ಡ ಪೆಟ್ಟು ಬಿದ್ದಿದೆ. ಲೋಡ್ ಶೆಡ್ಡಿಂಗ್‌ಗೆ ಯಾವ ಹಿಡಿತವೂ ಇಲ್ಲದಿರುವುದರಿಂದ ಕಾರ್ಖಾನೆಗಳು ನಡೆಯುವುದೇ ಅಸಾಧ್ಯವಾಗುತ್ತಿದೆ. ಇದೇ ಪರಿಸ್ಥಿತಿ ಮುಂದುವರೆದರೆ ಹೆಚ್ಚಿನ ಕಾರ್ಖಾನೆಗಳು ಮುಚ್ಚಲ್ಪಡಬಹುದು. ಅದರಿಂದಾಗಿ ಕೆಲಸಗಾರರು ಬೀದಿಪಾಲಾಗುತ್ತಾರೆ. ವಿದ್ಯುತ್ ಕಡಿತ ವಿದ್ಯಾರ್ಥಿಗಳ ಮೇಲೆ ಕೆಟ್ಟ ಪರಿಣಾಮ ಬೀರಿದೆ. ರಾತ್ರಿ ಅವರಿಗೆ ಅಭ್ಯಾಸ ಮಾಡಲು ಸಾಧ್ಯವಾಗುತ್ತಿಲ್ಲ. ವಿದ್ಯುತ್ ಕಡಿತ ಮತ್ತು ಮನಬಂದಂತೆ ನಡೆಯುವ ಲೋಡ್ ಶೆಡ್ಡಿಂಗ್ ಪಂಪ್‌ಸೆಟ್ ಹೊಂದಿದ ರೈತರ ಬೆನ್ನು ಮೂಳೆ ಮುರಿದಂತಾಗಿದೆ. ಹೊಲದಲ್ಲಿದ್ದ ಬೆಳೆ ಒಣಗಿ ಅವರ ವರ್ಷದ ದುಡಿಮೆಯ ಲಾಭ ಅವರಿಗೆ ದಕ್ಕದಂತಾಗಿದೆ. ಅದು ಹಿಂಗಾರಿ ಬೆಳೆಯ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಆಹಾರ ಧಾನ್ಯ, ಹತ್ತಿ, ಕಿರಾಣಿ ಬೆಳೆಗಳ ಬೆಲೆ ಹೆಚ್ಚಾಗಲು ಕಾರಣವಾಗಬಹುದಾಗಿದೆ.

ಜನವಂಚನೆ

ಹೋದ ವರ್ಷ ಈ ವರ್ಷಕ್ಕಿಂತಲೂ ಕಡಿಮೆ ಮಳೆ ಆಗಿತ್ತು. ಬೇಸಿಗೆಯಲ್ಲಿ ಮಾತ್ರ ವಿದ್ಯುತ್ತಿನ ತೊಂದರೆ ಇತ್ತು. ಸ್ವಲ್ಪ ಮಾತ್ರ ಆಗಿತ್ತಷ್ಟೇ. ಕೈಗಾರಿಕೆಗಳಿಗಾಗಲೀ, ರೈತರಿಗಾಗಲೀ, ಜನಜೀವನಕ್ಕಾಗಲೀ ಕುಡಿಯುವ ನೀರಿಗಾಗಲೀ ಹೆಚ್ಚಿನ ಪರಿಣಾಮ ಬೀರಿರಲಿಲ್ಲ. ಆದರೆ ಆಶ್ಚರ್ಯದ ಸಂಗತಿಯೆಂದರೆ ಈ ವರ್ಷ ಹೋದ ವರ್ಷದಷ್ಟು ಮಳೆಯ ಅಭಾವವಿಲ್ಲದಿದ್ದರೂ ಕೂಡಾ ಸೆಪ್ಟೆಂಬರ್ ತಿಂಗಳಿಂದಲೇ ಲೋಡ್ ಶೆಡ್ಡಿಂಗ್, ವಿದ್ಯುತ್ ಕಡಿತ ಪ್ರಾರಂಭವಾಗಿರುವುದು ಜನರಲ್ಲಿ ಆಶ್ಚರ್ಯವನ್ನುಂಟು ಮಾಡಿದೆ. ಹೋದ ವರ್ಷದ ವಿದ್ಯುತ್ ಉತ್ಪಾದನೆಗೂ ಈ ವರ್ಷದ ಉತ್ಪಾದನೆಗೂ ಎಷ್ಟು ವ್ಯತ್ಯಾಸವಿದೆಯೆಂಬುದನ್ನು ಕೆಇಬಿಯವರಾಗಲೀ, ಸರಕಾರವಾಗಲೀ ಜನರ ಮುಂದಿಡುತ್ತಿಲ್ಲ. ಹಾಗೆಯೇ ವಿದ್ಯುತ್ ಸರಬರಾಜಿನ ಅಸಮರ್ಪಕತೆ, ಸೋರಿಕೆ, ವಿದ್ಯುತ್ತಿನ ಕಳವುಗಳ ಕುರಿತು ಕಳೆದ ಕೆಲವು ವರ್ಷಗಳಿಂದಲೂ ಸಿಪಿಐ(ಎಂ) ಮತ್ತು ಇತರ ಸಂಘ ಸಂಸ್ಥೆಗಳು ನಿರಂತರವಾಗಿ ಆಕ್ಷೇಪ ವ್ಯಕ್ತ ಮಾಡುತ್ತಾ ಬಂದಿದ್ದರೂ ಕೂಡಾ ಇದರ ಕುರಿತು ಸರಕಾರ ಮತ್ತು ಕೆಇಬಿ ಯಾವ ಕ್ರಮ ಕೈಗೊಂಡಿದೆ ಎಂಬುದನ್ನು ಜನರ ಮುಂದಿಡುತ್ತಿಲ್ಲ. ವಿದ್ಯುತ್ ಅಭಾವ ರಾಜ್ಯದ ಬೆಳವಣಿಗೆಗೆ ಮಾರಕವಾಗಿದೆಯೆಂಬ ಸಂಗತಿ ತಿಳಿದೂ ಕೆಇಬಿಯವರಾಗಲೀ, ಸರಕಾರವಾಗಲೀ ವಿದ್ಯುತ್ ಅಭಾವವನ್ನು ತುಂಬಿಕೊಳ್ಳುವ ಸಲುವಾಗಿ ಯಾವ ಹೊಸ ಯೋಜನೆಗಳನ್ನು ಕೈಗೊಂಡಿದ್ದೇವೆ, ಅವುಗಳನ್ನು ಪ್ರಾರಂಭಿಸಲು ಏನು ಮಾಡಿದ್ದೇವೆ ಎಂಬ ವಿಷಯಗಳ ಕುರಿತು ಕೂಡಾ ಮೌನ ತಾಳಿವೆ. "ನನಗೆ ಸ್ನಾನ ಮಾಡಲು ಬಿಸಿ ನೀರು ಸಿಕ್ಕಿಲ್ಲ. 500 ಮೆಗಾವಾಟ್ ವಿದ್ಯುತ್ ಸೋರಿ ಹೋಗುತ್ತಿದೆ" ಎಂದು ಗೊಣಗುತ್ತಿರುವ ಮುಖ್ಯಮಂತ್ರಿ ದೇವೇಗೌಡರಾಗಲೀ, ವಿದ್ಯುತ್ ಮಂತ್ರಿ ಜೆ.ಎಚ್.ಪಟೇಲರಾಗಲೀ ಕೆಇಬಿಯ ಕಾರ್ಯವೈಖರಿ ಕುರಿತಾಗಲೀ, ವಿದ್ಯುತ್ತಿನ ದುರುಪಯೋಗದ ಕುರಿತಾಗಲೀ, ಸಾಧ್ಯತೆ ಇದ್ದಲ್ಲೆಲ್ಲಾ ಮಿನಿ ವಿದ್ಯುತ್ ಉತ್ಪಾದನೆಯ ಶಕ್ಯತೆಗಳ ಕುರಿತಾಗಲೀ ಚಕಾರ ಎತ್ತದಿರುವುದು ಮಹಾಪರಾಧ. ಜನತೆಗೆ ಮಾಡುತ್ತಿರುವ ವಂಚನೆಯೇ ಆಗಿದೆ.

ಖಾಸಗೀಕರಣಕ್ಕಾಗಿ?

ವರಾಹಿ ಜಲ ವಿದ್ಯುದಾಗಾರ 1989ರಿಂದಲೇ ವಿದ್ಯುತ್ ಉತ್ಪಾದಿಸುತ್ತಿದೆ. ಈ ವಿದ್ಯುದಾಗಾರದಲ್ಲಿ ಎರಡು ಜನರೇಟರುಗಳನ್ನು ನಿರ್ವಹಿಸಬೇಕಾಗಿತ್ತು. ಆದರೆ ಅಲ್ಲಿ ಒಂದೇ ಜನರೇಟರ್ ವಿದ್ಯುತ್ ಉತ್ಪಾದಿಸುತ್ತಿದೆ. ಎರಡನೆಯ ಜನರೇಟರನ್ನು ಇಂದಿನವರೆಗೂ ಸ್ಥಾಪಿಸಲಿಲ್ಲ. ಎರಡನೇ ಜನರೇಟರ್ ಸ್ಥಾಪಿಸಿ ವಿದ್ಯುತ್ ಉತ್ಪಾದಿಸಿದ್ದರೆ 250 ಮೆಗಾವಾಟಗಿಂತಲೂ ಹೆಚ್ಚು ವಿದ್ಯುತ್ ಸಿಗಬಹುದಾಗಿತ್ತು. ಹಾಗೆಯೇ ಕಳೆದ ಹಲವು ವರ್ಷಗಳಿಂದಲೂ ಶರಾವತಿಯ ಎರಡು ಜನರೇಟರುಗಳು ಕೆಟ್ಟು ಹೋಗಿದ್ದು ಅದರ ರಿಪೇರಿಯತ್ತ ಯಾರೂ ಗಮನ ಹರಿಸುತ್ತಿಲ್ಲ. ಶರಾವತಿ ಟೇಲ್‌ರೇಸ್ ಯೋಜನೆ ಈ ಮುಂಚೆಯೇ ಮುಗಿಯಬೇಕಾಗಿತ್ತು. ಅದು ನೆನೆಗುದಿಗೆ ಬಿದ್ದಿದೆ. ಆಲಮಟ್ಟಿಯಲ್ಲಿ ಈ ಮುಂಚೆಯೇ ವಿದ್ಯುದಾಗಾರ ಸ್ಥಾಪಿಸಬೇಕಿತ್ತು. ಸಿಂಗರೇಣಿ ಕಲ್ಲಿದ್ದಲು ಗಣಿಯಲ್ಲಿ ಕಾರ್ಮಿಕರ ಮುಷ್ಕರದಿಂದಾಗಿ ರಾಯಚೂರು ಥರ್ಮಲ್ ವಿದ್ಯುದಾಗಾರದಲ್ಲಿ ಎರಡು ಯೂನಿಟ್‌ಗಳು ಕೆಲಸ ನಿಲ್ಲಿಸಿವೆಂದಷ್ಟೇ ಕೆಇಬಿ ಮತ್ತು ಸರಕಾರದವರು ಸಮಾಧಾನ ಹೇಳುತ್ತಾರೆ. ಆದರೆ ನಿಜ ಸಂಗತಿಯೇನೆಂದರೆ ಕೆಪಿಸಿಯವರು ಕಲ್ಲಿದ್ದಲು ಸರಬರಾಜಿಗಾಗಿ

ಬೆಲೆಯೇರಿಕೆಯಿಂದಾಗಿ ಕ್ರೂರ, ಅಸಹನೀಯ ಪರಿಸ್ಥಿತಿ

ಸಂಸತ್ತಿನಲ್ಲಿ ಜನಸಾಮಾನ್ಯರ ಸಂಕಟಗಳಿಗೆ ದನಿ ನೀಡಿದ ಸಿಪಿಐ(ಎಂ) ಸದಸ್ಯರು

ಚಳಿಗಾಲದ ಅಧಿವೇಶನದ ಎರಡನೇ ದಿನವೇ ಲೋಕಸಭೆಯಲ್ಲಿ ನರಸಿಂಹರಾವ್ ಸರಕಾರ ಬೆಲೆಯೇರಿಕೆ ತಡೆಯುವಲ್ಲಿನ ತನ್ನ ವಿಫಲತೆಯಿಂದಾಗಿ ಎಡಪಕ್ಷಗಳು-ರಾಷ್ಟ್ರೀಯ ರಂಗದ ಪಕ್ಷಗಳಿಂದ ತೀವ್ರ ಟೀಕೆಗೊಳಗಾಗಬೇಕಾಗಿ ಬಂತು. 40 ನಿಮಿಷಗಳ ಚರ್ಚೆಯ ಕೊನೆಯಲ್ಲಿ ಸ್ಪೀಕರ್ ರವರು ಸರಕಾರಕ್ಕೆ ಎರಡು ದಿನಗಳೊಳಗೆ ಬೆಲೆ ಪರಿಸ್ಥಿತಿ ಬಗ್ಗೆ ಸದನದಲ್ಲಿ ಹೇಳಿಕೆ ಮಂಡಿಸಬೇಕೆಂದು ತಾಕೀತು ಮಾಡಬೇಕಾಗಿ ಬಂತು.

ಸಿಪಿಐ(ಎಂ) ಸದಸ್ಯ ನಿರ್ಮಲ್ ಕಾಂತಿ ಚಟರ್ಜಿಯವರು ಸರಕಾರದ ಮೇಲೆ ಪ್ರತಿಪಕ್ಷಗಳ ಧಾಳಿಯ ನೇತೃತ್ವ ವಹಿಸಿದ್ದರು. 1990-91ರಲ್ಲಿ ಈ ಸರಕಾರ ಅಧಿಕಾರಕ್ಕೆ ಬಂದಾಗ ಕೃಷಿ ಕೂಲಿಕಾರರ ಜೀವನ ವೆಚ್ಚ ಸೂಚ್ಯಂಕ 803 ಇತ್ತು.ಈಗ ಅದು 1600ನ್ನು ತಲುಪುತ್ತಿದೆ. ಜೀವನಾವಶ್ಯಕ ಸಾಮಗ್ರಿಗಳ ಬೆಲೆಗಳನ್ನು ಇಳಿಸುವ ಆಶ್ವಾಸನೆ ಕೊಟ್ಟು ಅಧಿಕಾರಕ್ಕೆ ಬಂದ ಸರಕಾರ ವಚನ ಪಾಲಿಸಲಿಲ್ಲ ಮಾತ್ರವೇ ಅಲ್ಲ ಬೆಲೆಗಳು ಜನಸಾಮಾನ್ಯರ ನಿಲುಕಿಗೆ ಸಿಗದಷ್ಟು ಮೇಲೇರಲು ಬಿಟ್ಟಿದೆ, ಈ ಸರಕಾರದ ಕಾಲದಲ್ಲಿ ಬೆಲೆಯೇರಿಕೆಯ ಸ್ಥಿತಿ ಉಲ್ಬಣಗೊಂಡಿದೆ' ಎಂದು ಟೀಕಿಸುತ್ತಾ ಅಂಕಿ-ಅಂಶಗಳನ್ನು ಸದನದ ಮುಂದಿಟ್ಟರು.

ಸರಕಾರ ಹಣದುಬ್ಬರವನ್ನು ತಡೆಹಿಡಿದಿದ್ದೇನೆಂದು ಹೇಳಿಕೊಳ್ಳುತ್ತಿದೆ. ಇದು ಶುದ್ಧ ಸುಳ್ಳು. ಬೆಲೆಯೇರುತ್ತಲೇ ಇದೆ. ಪರಿಸ್ಥಿತಿ ಕ್ರೂರ ಮತ್ತು ಅಸಹನೀಯವಾಗಿದೆ. ಕಳೆದ ವರ್ಷ ಸಕ್ಕರೆಯ ವಿಷಯದಲ್ಲಿ ಸರಕಾರ ಮುಗ್ಗರಿಸಿದ ಪರಿಣಾಮವಾಗಿ ಸಕ್ಕರೆ ಬೆಲೆಯೇರಿದೆ. ಯೋಜನಾ ಆಯೋಗದ ಮಧ್ಯಾವಧಿ ಪರಿಶೀಲನೆಯ ಪ್ರಕಾರ ಹೆಚ್ಚೆಚ್ಚು ಜನ ಬಡತನದ ರೇಖೆಯ ಕೆಳಗೆ ತಳ್ಳಲ್ಪಟ್ಟಿದ್ದಾರೆ. ಈ 40% ಜನರ ಸ್ಥಿತಿಯಂತೂ ಪಾತಾಳಕ್ಕಿಳಿಯುತ್ತಿದೆ ಎಂದರು. ತಕ್ಷಣ ಸರಕಾರ ತನ್ನ ಆರ್ಥಿಕ ನೀತಿಗಳನ್ನು ಬದಲಿಸಬೇಕು, ಜೀವನಾವಶ್ಯಕ ಸಾಮಗ್ರಿಗಳಿಗೆ ನೀಡುವ ಸಬ್ಸಿಡಿಯನ್ನು ಹೆಚ್ಚಿಸಬೇಕು ಹಾಗೂ ರೇಷನ್ ವ್ಯವಸ್ಥೆಯನ್ನು ಚುರುಕಗೊಳಿಸಬೇಕು ಎಂದು ಅವರು ಆಗ್ರಹಪಡಿಸಿದರು.

ಇನ್ನೊಬ್ಬ ಸಿಪಿಐ(ಎಂ) ಸಂಸತ್ ಸದಸ್ಯರಾದ ಪ್ರೊ. ಮಾಲಿನಿ ಭಟ್ಟಾಚಾರ್ಯ ಸರಕಾರವೇ ಜನಸಾಮಾನ್ಯರ ಕೊಳ್ಳುವ ಶಕ್ತಿಯನ್ನು ಕಡಿತಗೊಳಿಸುತ್ತಿರುವುದು ಮನನೋಯಿಸುವ ಸಂಗತಿ ಎಂದರು. ಬೆಲೆಯೇರಿಕೆ ಕ್ಯಾನ್ಸರ್ ಹುಣ್ಣಿನಂತೆ ಹರಡುತ್ತಿದೆ. ಇದರಿಂದ ಜನರಲ್ಲಿ ಹತಾಶೆ ಹಾಗೂ ಭ್ರಮನಿರಸನದ ಭಾವನೆ ಹರಡುತ್ತಿದೆ ಎಂದ ಅವರು ಒಂದು ಬೃಹತ್ ಪ್ರಮಾಣದ 'ಕೆಲಸಕ್ಕಾಗಿ ಆಹಾರ' ಕಾರ್ಯಕ್ರಮ ಆರಂಭಿಸಿ 14 ಜೀವನಾವಶ್ಯಕ ಸರಕುಗಳ ಬೆಲೆಗಳನ್ನು ಹತೋಟಿಯಲ್ಲಿಡಬೇಕು ಎಂದು ಸೂಚಿಸಿದರು.

ಸಿಪಿಐ(ಎಂ) ಸದಸ್ಯರನ್ನು ಬೆಂಬಲಿಸಿ ಮಾತನಾಡಿದ ಜನತಾದಳದ ಶರದ್ ಯಾದವ್ ಗಗನಕ್ಕೇರುತ್ತಿರುವ ಬೆಲೆಗಳಿಂದ ಬಡವರು, ಮಧ್ಯಮ ವರ್ಗದ ಸಂಬಳದಾರ ಜನರು ನರಳುತ್ತಿದ್ದಾರೆ, ಈ ಸರಕಾರ ಮುಂದುವರೆಯಲು ಯಾವುದೇ ಸಮರ್ಥನೆಯಿಲ್ಲ ಎಂದರು.

ಲೋಕಸಭೆಯಲ್ಲಿ ಬಿಜೆಪಿ ಪ್ರಧಾನ ವಿರೋಧ ಪಕ್ಷ ಎನಿಸಿಕೊಂಡರೂ ಜನರ ಈ ಜೀವನ್ಮರಣ ಪ್ರಶ್ನೆಯನ್ನು ಎತ್ತಿಕೊಂಡು ಜನರ ನೋವಿಗೆ ದನಿ ನೀಡಿದ್ದು ಸಿಪಿಐ(ಎಂ) ಎಂಬುದನ್ನು ಇಲ್ಲಿ ಗಮನಿಸಬೇಕು. ಕಾಶ್ಮೀರದ ಜನತೆಗೆ ಮತ್ತೆ ಸ್ವಾಯತ್ತತೆಯ ಭರವಸೆ ನೀಡಿದ ಪ್ರಧಾನಿಗಳ ಮಾತನ್ನು ವಿರೋಧಿಸುವುದೇ ಬಿಜೆಪಿಗೆ ತುರ್ತಿನ ಸಂಗತಿಯಾಗಿತ್ತು. ಆದರೆ ಸಿಪಿಐ(ಎಂ) ಮತ್ತು ಜನತಾದಳ ಈ ಪ್ರಧಾನ ಪ್ರಶ್ನೆಯನ್ನು ಎತ್ತಿಕೊಂಡ ಮೇಲೆ ಬಿಜೆಪಿ ಸದಸ್ಯ ಜಸ್ವಂತ್ ಸಿಂಗ್ ರವರು ಬೆಲೆಯೇರಿಕೆಯ ಬಗ್ಗೆ ತಮ್ಮ ಪಕ್ಷಕೂ ಆತಂಕವಾಗಿದೆ ಎಂದರು.

ಪ್ರಸ್ತುತ

ಧಾರವಾಡ ಜಿಲ್ಲೆಯ ಹಾನಗಲ್ ತಾಲ್ಲೂಕಿನಲ್ಲಿ ಎರಡನೇ ಹಂತದ ಸರಕಾರಿ ಭೂಮಿ ಮರುಆಕ್ರಮಣ ಚಳುವಳಿಯ ಒಂದು ವರದಿ

“ಊರೂರು ತಿರುಗುವುದು ತಪ್ಪಬೇಕು. ನಮ್ಮ ಮಕ್ಕಳೂ ಶಾಲೆಗೆ ಹೋಗ್ಬೇಕು”

ಅಂದು ನವಂಬರ್ ಒಂದು. ಕರ್ನಾಟಕ ರಾಜ್ಯೋತ್ಸವದ ದಿನ. ಕನ್ನಡ ನಾಡಿನ ಅಭಿವೃದ್ಧಿ ಎಂದರೆ ಕನ್ನಡಿಗರು ಕನ್ನಡೇತರರ ಮೇಲೆ ಸವಾರಿ ಮಾಡುವುದೆಂದರ್ಥವಲ್ಲ. ಕನ್ನಡ ನೆಲದಲ್ಲಿ ಬದುಕಿ ಬಾಳುತ್ತಿರುವ ಪ್ರತಿಯೊಂದು ಕುಟುಂಬಕ್ಕೆ ನೆಮ್ಮದಿಯಿಂದ ದಿನ ಕಳೆಯಲು ಸಾಧ್ಯವಾದರೆ ಮಾತ್ರ ನಾಡಿನ ಅಭಿವೃದ್ಧಿ ಅರ್ಥಪೂರ್ಣವಾಗುವುದು. ಕೇವಲ ಕೂಲಿ ಕೆಲಸವನ್ನೇ ಅವಲಂಬಿಸಿ ಊರುರು ತಿರುಗುತ್ತಿರುವ ರಾಜ್ಯದ ಲಕ್ಷಾಂತರ ಕೂಲಿಕಾರರ ಜೀವನ ಪರಿಸ್ಥಿತಿಯಲ್ಲಿ ಬದಲಾವಣೆ ಸಾಧ್ಯವಾಗದೆ ಕನ್ನಡ ನಾಡಿನ ಅಭಿವೃದ್ಧಿ ಸಾಧ್ಯವೇ?

“ಸಾಧ್ಯವಿಲ್ಲ” ಎನ್ನುತ್ತಾರೆ ಧಾರವಾಡ ಜಿಲ್ಲೆಯ ಹಾನಗಲ್ ತಾಲ್ಲೂಕಿನ ಕೃಷಿ ಕೂಲಿಕಾರರು. ಉತ್ತರ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ ಇರುವ ಕೃಷಿ ಕೂಲಿಕಾರರ ಪರಿಸ್ಥಿತಿಯಂತೆ ಇವರು ಸಹ ಪ್ರತಿ ವರ್ಷ ಉದ್ಯೋಗ ಹುಡುಕಿಕೊಂಡು ಕಾಫಿ ಸೀಮೆಗೆ, ದೂರದ ಬೊಂಬಾಯಿ, ಗೋವಾ ಕಡೆಗಳಿಗೆ ಹೋಗುತ್ತಿರುತ್ತಾರೆ. ಕೆಲವೊಮ್ಮೆ ಹೆಂಡತಿ ಮಕ್ಕಳನ್ನು ಊರಿನಲ್ಲೇ ಬಿಟ್ಟು ಹೋಗುತ್ತಾರೆ, ಇನ್ನು ಕೆಲವೊಮ್ಮೆ ಕುಟುಂಬ ಸಮೇತ ಗುಳೇ ಹೋಗುತಾರೆ. ಘುಂಗಳೂರು, ಮೈಸೂರು ನಗರಗಳ ರಸ್ತೆಗಳಲ್ಲಿ ಬೆವರು ಸುರಿಸುವವರು ಇವರೇ. ಬೆಳೆಯುತ್ತಿರುವ ಬೆಂಗಳೂರು ನಗರದಲ್ಲಿ ಕಟ್ಟಡ ನಿರ್ಮಾಣ ಕೆಲಸಕ್ಕೆ ಸಿಗುವವರು ಇವರೇ. ಬೀದಿಗಳಲ್ಲಿ ದುಡಿಯುತ್ತಾರೆ. ಬೀದಿಗಳಲ್ಲಿ ಮಲಗುತ್ತಾರೆ. ಇವರ ಮಕ್ಕಳು ಶಾಲೆಯ ಬಾಗಿಲು ಕಾಣಲಾರರು. ಇವರು ಊರೂರು ಯಾಕೆ ತಿರುಗಬೇಕು? ತಮ್ಮ ಊರಿನಲ್ಲಿಯೇ ಇದ್ದು ತಮ್ಮ ಮಕ್ಕಳನ್ನು ಶಾಲೆಗೆ ಏಕೆ ಕಳುಹಿಸಬಾರದು? ತಂದೆ ತಾಯಿ ಮಕ್ಕಳು ಒಟ್ಟಿಗೆ ಏಕೆ ಬದುಕಬಾರದು?

ನಾವೂ ಊರೂರು ತಿರುಗುವುದು ನಿಲ್ಲಬೇಕು. ನಮ್ಮ ಮಕ್ಕಳೂ ಶಾಲೆಗೆ ಹೋಗಬೇಕು. ಇದು ಹಾನಗಲ್ ತಾಲೂಕಿನ ಪತ್ತಾರು ಹಳ್ಳಿಗಳಲ್ಲಿ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಶಾಖೆಗಳನ್ನು ರಚಿಸಿಕೊಂಡಿರುವ ಕೃಷಿ ಕೂಲಿಕಾರರ ನಿರ್ಧಾರ. ನಾವು ಊರೂರು ಅಲೆಯುವುದು ತಪ್ಪಬೇಕಾದರೆ ನಮಗೆ ಭೂಮಿ ಸಿಗಬೇಕು. ಅಗೋ ಅಲ್ಲಿ! ನಮ್ಮ ಊರ ಪಕ್ಕದಲ್ಲಿ, ಗುಡ್ಡದ ಇಳಿಜಾರಿನಲ್ಲಿ ಫಲವತ್ತಾದ ಭೂಮಿ ಇದೆ. ದಶಕಗಳ ಹಿಂದೆ ವ್ಯವಸಾಯ ಮಾಡಿದ ಭೂಮಿ ಇಂದು ಕಾರಣಾಂತರಗಳಿಂದ ಬೀಳು ಬಿದ್ದು ಸರಕಾರಿ ಭೂಮಿ ಎನಿಸಿಕೊಂಡಿದೆ. ಸಕಾಲಕ್ಕೆ ಮಳೆ ಬಂದರೆ ಅಥವಾ ನೀರಾವರಿ ಯೋಜನೆಗಳು ಕಾರ್ಯಗತವಾದರೆ ಈ ಭೂಮಿಯಲ್ಲಿ ಬಂಗಾರ ಬೆಳೆಯಬಹುದು. ಇಂತಹ ಕೃಷಿಯೋಗ್ಯ ಭೂಮಿಯನ್ನು ಭೂಹೀನ ಬಡವರಿಗೆ ವಿತರಣೆ ಮಾಡಿ ನಾಡಿನ ಅಭಿವೃದ್ಧಿಯನ್ನು ಸಾಧಿಸಲು ಹೊರಡುವ ಬದಲು ಕೃಷಿಯೋಗ್ಯ ಭೂಮಿಯಲ್ಲಿ ಕಾಡು ಬೆಳೆಸುವ ನಾಟಕ ನಡೆಸುತ್ತಿದೆ ಕರ್ನಾಟಕ ಸರಕಾರ! ಕಾಡು ಬೆಳೆಸುವುದಕ್ಕೆ ಕೂಲಿಕಾರರ ವಿರೋಧವಿಲ್ಲ. ಆದರೆ ಕಾಡು ಬೆಳೆಸುವ ಹೆಸರಿನಲ್ಲಿ ನೀಲಗಿರಿ ಮರಗಳನ್ನು ಬೆಳೆಸಿ ಅತ್ಯಂತ ಕಡಿಮೆ ಬೆಲೆಗೆ ಬಿರ್ಲಾ ಕಾರ್ಖಾನೆಗೆ ಪೂರೈಸುವುದನ್ನು ಈ ಭೂಹೀನ ಕೂಲಿಕಾರರು ಪ್ರಶ್ನಿಸುತ್ತಾರೆ. ಇದೇ ಭೂಮಿಯನ್ನು ನಮಗೆ ವಿತರಣೆ ಮಾಡಿದರೆ ನಾವು ಆಹಾರ ಧಾನ್ಯಗಳನ್ನು ಬೆಳೆದು ನಾವೂ ಬದುಕಬಹುದು, ದೇಶವನ್ನೂ ಬದುಕಿಸಬಹುದು ಎನ್ನುತ್ತಾರೆ ಇವರು. ಯೋಗ್ಯ ಬೆಲೆ ನೀಡುವುದಾದರೆ ನೀಲಗಿರಿ ಮರಗಳನ್ನು ಬೆಳೆದುಕೊಡಲು ಇವರು ಸಿದ್ದರಿದ್ದಾರೆ. ಗ್ರಾಮದ ದನಕರುಗಳಿಗೆ ಮೇಯಲು ಬೇಕಾಗುವ ಹುಲ್ಲುಗಾವಲನ್ನು ಬಿಟ್ಟು ಉಳಿದ ಸರಕಾರಿ ಬಂಜರು ಭೂಮಿಯನ್ನು ಭೂಹೀನ ಕೂಲಿಕಾರರಿಗೆ ಹಂಚಬೇಕು ಎಂಬುದು ಇವರ ಬಹುದಿನಗಳ ಬೇಡಿಕೆಯಾಗಿದೆ. ಆದರೆ ಕನ್ನಡ ನಾಡಿನ ಅಭಿವೃದ್ಧಿಯ ಗುತ್ತಿಗೆ ಹಿಡಿದಿರುವ ಕರ್ನಾಟಕ ಸರಕಾರಕ್ಕೆ ಇದು ಯಾವುದೂ ಕೇಳುವುದಿಲ್ಲ. ಮನವಿಗಳನ್ನು ಸಲ್ಲಿಸುತ್ತಾ ಬಂದಿರುವ ಈ ಕೂಲಿಕಾರರು ಸರಕಾರದ ಕ್ರಮಕ್ಕೆ ಇನ್ನು ಕಾಯಲಾರರು. ತಮ್ಮ ಅಭಿವೃಧಿಯ ಜೊತೆಯಲ್ಲಿ ನಾಡಿನ ಅಭಿವೃದ್ಧಿಗಾಗಿ ಸರಕಾರಿ ಬಂಜರು ಭೂಮಿಯನ್ನು ಮರು ಆಕ್ರಮಣ ಮಾಡಲು ಮುಂದಾಗಿದ್ದಾರೆ.

ಎರಡನೇ ಹಂತದ ಭೂಮಿ ಮರು ಆಕ್ರಮಣ ಚಳುವಳಿಯನ್ನು ಸಾಂಕೇತಿಕವಾಗಿ ನವಂಬರ್ 1, ರಾಜ್ಯೋತ್ಸವದ ದಿನದಂದು ಆರಂಭಿಸಲಾಯಿತು. ಗುಂಡೂರು, ಜಾನಗುಂಡಿ, ಜಂಗಿನ ಕೊಪ್ಪ, ಕಾಡಶೆಟ್ಟಿಹಳ್ಳಿ, ಬಾಳಂಬೀಡ್, ಹನುಮನಕೊಪ್ಪ, ಬಾಳೀಹಳ್ಳಿ, ಶ್ಯಾವಿಕೇರಿ, ಬ್ಯಾಗಾದಿ, ಕರೇಕ್ಯಾತನಹಳ್ಳಿ, ಮುಳಥಳ್ಳಿ, ಬ್ಯಾತನಾಳ, ಯಳ್ಳೂರ, ನೆಗುಣ, ಗಾಜೀಪುರ, ಹುಡಾ, ಬದಾಮಗಟ್ಟಿ ಮೊದಲಾದ ಗ್ರಾಮಗಳಲ್ಲಿ ಅಂದು ಸೂರ್ಯ ಉದಯಿಸುವ ಮೊದಲೇ ಸಡಗರ. ಕೈಯಲ್ಲಿ ಕೆಂಪು ಬಾವುಟಗಳು, ಕೊಡಲಿ ಕುಡಗೋಲುಗಳನ್ನು ಹಿಡಿದುಕೊಂಡ ಸ್ತ್ರೀ ಪುರುಷರು ಮಕ್ಕಳು ನಿಗದಿಪಡಿಸಿದ ಭೂಮಿಗೆ ತಲುಪಿದಾಗ ಅಲ್ಪಸ್ವಲ್ಪ ಬೆಳಕಾಗಿತ್ತು. “ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘಕ್ಕೆ ಜಯವಾಗಲಿ” ಎಂದು ಘೋಷಣೆಗಳು ಮೊಳಗುತ್ತಿದ್ದಂತೆ ನೀಲಗಿರಿ ಮರಗಳು ನೆಲಕ್ಕುರುಳತೊಡಗಿದವು. ಅರಣ್ಯ ಇಲಾಖೆಯ ಸಿಬ್ಬಂದಿಯವರು ಪೋಲೀಸರನ್ನು ಸಂಪರ್ಕಿಸಿ ಕರೆ ತರುವ ಒಳಗಾಗಿ ಸಾವಿರಾರು ನೀಲಗಿರಿ ಮರಗಳು ಕೂಲಿಕಾರರ ಆಕ್ರೋಶಕ್ಕೆ ಬಲಿಯಾಗಿದ್ದವು. ನಿಮ್ಮೆಲ್ಲರನ್ನು ಬಂಧಿಸಿದ್ದೇವೆ ಎಂದು ಪೋಲೀಸ್ ಅಧಿಕಾರಿಗಳು ಘೋಷಿಸಿದಾಗ ಪೋಲೀಸ್ ವ್ಯಾನನ್ನು ಹತ್ತಲು ನೂಕು ನುಗ್ಗಲು! ಮಹಿಳೆಯರೂ ಸೇರಿದಂತೆ ನೂರಾರು ಜನರನ್ನು ಅಲ್ಲಿಂದ ಆಡೂರು ಪೋಲೀಸ್ ಸ್ಟೇಷನ್ನಿಗೆ ಸಾಗಿಸಲಾಯಿತು. ಇನ್ನುಳಿದವರನ್ನು ಸಾಗಿಸಲು ಮತ್ತೆ ಬರುವುದಾಗಿ ಹೇಳಿದ ಪೋಲೀಸರು ಮರಳಿ ಬರಲಿಲ್ಲ.

ಹನುಮನಕೊಪ್ಪದ ಕೃಷಿ ಕೂಲಿಕಾರರಿಗೆ ಕಡಿಯಲು ನೀಲಗಿರಿ ಮರಗಳು ಇರಲಿಲ್ಲ. ಕುರುಚಲು ಗಿಡಗಂಟಿಗಳನ್ನು ಕಡಿದು ಹಾಕಿ ನೆಲವನ್ನು ಸ್ವಚ್ಛ ಮಾಡುತ್ತಿದ್ದ ಇವರನ್ನು ಪೋಲೀಸರು ಬಂದು ತಡೆದಾಗ ಸುಮಾರು ಒಂದು ನೂರು ಎಕರೆ ಭೂಮಿ ಅವರ ಕೈವಶವಾಗಿತ್ತು. ಪೋಲೀಸರ ಸಮಕ್ಷಮದಲ್ಲಿ ಮುಖಂಡರಾದ ಫಕ್ಕೀರಪ್ಪ ಹೋತನಹಳ್ಳಿ, ನಿತ್ಯಾನಂದಸ್ವಾಮಿ, ಸಿ.ಆರ್.ಭಟ್, ವ್ಹಿ.ಡಿ. ತುಪ್ಪದ್ ಅವರುಗಳು ಹನುಮನಕೊಪ್ಪದ ಭೂ ಹೋರಾಟಗಾರರನ್ನುದ್ದೇಶಿಸಿ ಮಾತನಾಡುತ್ತಾ ಬಂಧನ, ಜೈಲಿಗೆ ಹೆದರಬೇಕಾಗಿಲ್ಲ ಎಂದು ಹೇಳುತ್ತಿದ್ದಂತ ಊರಲ್ಲಿ ಉಪವಾಸ ಇರುವುದಕ್ಕಿಂತ ಜೈಲಿನಲ್ಲಿ ಊಟ ಮಾಡಿಕೊಂಡು ಇರಲು ನಾವು ಯಾಕೆ ಹೆದರಬೇಕು ಎಂಬ ನೇರ ಪ್ರತಿಕ್ರಿಯೆ ಪೋಲೀಸ್ ಅಧಿಕಾರಿಗಳಿಗೂ ಮುಜುಗರ ಉಂಟು ಮಾಡಿತು. ದಾರಿಯಲ್ಲಿ ಹೋಗುವ ಲಾರಿಗಳನ್ನು ತಂದು ನಿಲ್ಲಿಸಿ ಸುಮಾರು 125 ಜನ ಕೂಲಿಕಾರರನು ಮತು ಅವರ ಮುಖಂಡರನ್ನು ಬಂಧಿಸಿ ಹಾನಗಲ್ ಸ್ಟೇಷನ್ನಿಗೆ ಸಾಗಿಸಿದಾಗ ಸಂಜೆಯಾಗಿತ್ತು. ಕತ್ತಲೆ ಆವರಿಸುತ್ತಿದ್ದಂತೆ “ನಮಗೆ ಊಟ ಬೇಕು” ಎಂದು ಬಂಧಿತ ಮಹಿಳೆಯರೇ ಕೇಳಲಾರಂಭಿಸಿದಾಗ ಪೋಲೀಸ್ ಅಧಿಕಾರಿಗಳು ಬಂಧಿತರನ್ನು ಬೇಷರತ್ ಬಿಡುಗಡೆ ಮಾಡಲು ನಿರ್ಧರಿಸಿ ಮತ್ತೆ ಲಾರಿಗಳಲ್ಲಿ ತುಂಬಿ ವಾಪಸ್ ಊರಿಗೆ ಕಳುಹಿಸಿಕೊಟ್ಟರು.

ಆದರೆ ಗುಂಡೂರು ಗ್ರಾಮದ ಬಂಧಿತರ ಬಗ್ಗೆ ಅವರು ಹಾಗೆ ಮಾಡಲಿಲ್ಲ. ಬಂಧಿತರಲ್ಲಿ ಮಹಿಳೆಯರನ್ನು ಮತ್ತು ಹುಡುಗರನ್ನು ಖಾಸಗಿ ಬಸ್ಸಿನಲ್ಲಿ ತುಂಬಿ ಊರಿಗೆ ಕಳುಹಿಸಿದರು. ಇನ್ನುಳಿದವರನ್ನು ಬಿಡುಗಡೆ ಮಾಡುವುದಾಗಿ ಹೇಳಿಕೊಂಡರೂ ಹಾಗೆ ಮಾಡಲಿಲ್ಲ. ರಾತ್ರಿ ಇಡೀ ಅವರನ್ನು ಪೋಲೀಸ್ ಸ್ಟೇಷನ್ನಿನಲ್ಲಿಯೇ ಇಟ್ಟು ಮರುದಿನ ನ್ಯಾಯಾಲಯಕ್ಕೆ ಹಾಜರು ಪಡಿಸಿದರು. ಪಬ್ಲಿಕ್ ಪ್ರಾಸಿಕ್ಯೂಟರ್ ತಕರಾರು ಮಾಡಿದ ಆಧಾರದಲ್ಲಿ ಬಂಧಿತರನ್ನು 10 ದಿನಗಳವರೆಗೆ ರಿಮಾಂಡ್ ಮಾಡಲಾಯಿತು. ಕೃಷಿ ಕೂಲಿಕಾರರ ಸಂಘದ ಮುಖಂಡರಲ್ಲಿ ಒಬ್ಬರಾದ ಹಕ್ಕಲಗೌಡ ಪಾಟೀಲರ ನೇತೃತ್ವದಲ್ಲಿ ಒಟ್ಟು 86 ಜನ ಕೃಷಿ ಕೂಲಿಕಾರರು ಧಾರವಾಡ ಜೈಲಿಗೆ ರವಾನಿಸಲ್ಪಟ್ಟರು. ಹತ್ತು ದಿನಗಳ ನಂತರ ಜಾಮೀನಿನ ಮೇಲೆ ಇವರು ಹೊರಗೆ ಬಂದಾಗ ಅವರ ಮುಖಗಳಲ್ಲಿ ಚಳುವಳಿಯನ್ನು ಮುನ್ನಡೆಸುವ ದೃಢ ನಿರ್ಧಾರದ ಕಳೆ ಕಂಗೊಳಿಸುತ್ತಿತ್ತು. ಇವರು ಪ್ರತಿ ದಿನ ಪೋಲೀಸ್ ಸ್ಟೇಷನ್ನಿಗೆ ಹಾಜರಿ ಕೊಡಬೇಕೆಂಬ ಷರತ್ತು ವಿಧಿಸಲಾಗಿರುವುದರಿಂದ ತಕ್ಷಣ ಭೂಮಿಗೆ ಹೋಗಲಾಗದಿದ್ದರೂ ಭೂಮಿಯನ್ನು ಕೈಬಿಡುವ ಪ್ರಶ್ನೆಯೇ ಇಲ್ಲವೆಂದು ಇವರು ತೀರ್ಮಾನಿಸಿದ್ದಾರೆ.

ಎರಡನೇ ಹಂತದ ಈ ಚಳುವಳಿಯಲ್ಲಿ ಸುಮಾರು 1500 ಎಕರೆ ಭೂಮಿ ಕೂಲಿಕಾರರ ಕೈವಶಕ್ಕೆ ಬಂದಿದೆ. ಪೋಲೀಸರು ಈಗ ತಮ್ಮ ತಂತ್ರವನ್ನು ಬದಲಾಯಿಸಿದ್ದಾರೆ. ಜಿಲ್ಲಾ ಮುಖಂಡರಾದ ಕಾಮ್ರೇಡ್ ಫಕ್ಕೀರಪ್ಪ ಹೋತನಹಳ್ಳಿ ಮತ್ತು ವಿಶ್ವನಾಥ ತುಪ್ಪದ ಅವರನ್ನು ಬಂಧಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದಾರೆ. ಒಂದೊಂದು ಗ್ರಾಮದ ಕೃಷಿ ಕೂಲಿಕಾರ ಸಂಘದ ಮುಖಂಡರನ್ನು ಬಂಧಿಸುವ, ಅವರ ಮೇಲೆ ಕೇಸುಗಳನ್ನು ದಾಖಲು ಮಾಡುವ ಪ್ರಯತ್ನ ನಡೆದಿದೆ. ಕೂಲಿಕಾರರನ್ನು ಬೆದರಿಸಲಾಗುತ್ತಿದೆ. ಈ ಎಲ್ಲಾ ಕಿರುಕುಳವನ್ನು ಸಾಮೂಹಿಕವಾಗಿ ವಿರೋಧಿಸುವುದರ ಜೊತೆಯಲ್ಲಿ ಚಳುವಳಿಯನ್ನು ಮತ್ತೆ ತೀವ್ರಗೊಳಿಸಲು ಸಿದ್ಧತೆಗಳು ನಡೆದಿವೆ. ಹಾನಗಲ್ ತಾಲ್ಲೂಕಿನ ಈ ಚಳುವಳಿ ಧಾರವಾಡ ದಕ್ಷಿಣದ ಐದಾರು ತಾಲ್ಲೂಕುಗಳಿಗೆ ಹಬ್ಬುವ ಎಲ್ಲಾ ಸಾಧ್ಯತೆಗಳಿವೆ.

- ನಿತ್ಯಾನಂದಸ್ವಾಮಿ

ವಿದ್ಯುತ್ ಕಡಿತ, ಕುಡಿಯುವ ನೀರಿನ ಅವ್ಯವಸ್ಥೆ........

ಪುಟ 1ರಿಂದ

ರೂ. 500 ಕೋಟಿ ಸಿಂಗರೇಣಿ ಕಲ್ಲಿದ್ದಲು ಆಡಳಿತೆಗೆ ಕೊಡಬೇಕಾಗಿದೆ. ಅದರ ಪೈಕಿ ಸಂದಾಯವಾಗಿರುವುದು 50 ಕೋಟಿ ಮಾತ್ರವಂತೆ. ಕೇಂದ್ರ ಗಿಡ್‌ದಿಂದ ರಾಜ್ಯಕ್ಕೆ 11 ದಶಲಕ್ಷ ಯೂನಿಟ್ಟಿನಷ್ಟು ವಿದ್ಯುತ್ ಸಿಗಬೇಕು. ಈಗ ನಮಗೆ ಸಿಗುವುದು ಶೇ. 16ರ ಪೈಕಿ ಶೇ. 9 ಮಾತ್ರ. ಇದರ ಕುರಿತು ಕೇಂದ್ರ ಸರಕಾರದ ಮೇಲೆ ಒತ್ತಾಯ ತರಲು ಎಲ್ಲಾ ರಾಜಕೀಯ ಪಕ್ಷಗಳ ನಿಯೋಗ ದಿಲ್ಲಿಗೆ ಹೋಗಬೇಕೆಂದೂ ಸಿಪಿಐ(ಎಂ) ಶಾಸಕರಾದ ಶ್ರೀರಾಮರೆಡ್ಡಿಯವರು ಮುಖ್ಯಮಂತ್ರಿ ದೇವೇಗೌಡರಿಗೆ ಸೂಚಿಸಿದರೂ ಕೂಡಾ ಅವರು ಅದರತ್ತ ಗಮನ ಹರಿಸಲೇ ಇಲ್ಲ.

ಇದೇನು ತೋರಿಸುತ್ತದೆ? ಕೆಇಬಿ ಮತ್ತು ಕೆಪಿಸಿಯ ಕಾರ್ಯವೈಖರಿ ಕುರಿತಾಗಲೀ ಅವುಗಳ ಸಮಸ್ಯೆಗಳ ಕುರಿತಾಗಲೀ, ರಾಜ್ಯ ಎದುರಿಸುತ್ತಿರುವ ವಿದ್ಯುತ್ ಉತ್ಪಾದನೆ, ಸರಬರಾಜಿನ ಕುರಿತಾಗಲೀ, ಸರಕಾರವಾಗಲೀ, ಸಂಬಂಧಪಟ್ಟ ಮಂತ್ರಿಗಳಾಗಲೀ ಏನೂ ಗಮನ ಹರಿಸಲೇ ಇಲ್ಲ ಎಂಬ ಅಂಶ ಈಗ ಸ್ಪಷ್ಟವಾಗಿ ಕಂಡುಬರುತ್ತಿದೆ. ತಕರಾರುಗಳ ಸುರಿಮಳೆಗಳಿದರೂ ಕೂಡಾ ಜವಾಬ್ದಾರಿಯನ್ನು ಒಬ್ಬರ ಮೇಲೊಬ್ಬರು ಹಾಯಿಸುತ್ತಾ ಜನರನ್ನು ಮೋಸಗೊಳಿಸುತ್ತಾ ಬಂದಿದ್ದಾರೆ. ಅದರಲ್ಲಿ ಮತ್ತೊಂದು ದುರುದ್ದೇಶವನ್ನು ಕಾಣಬಹುದಾಗಿದೆ. ಕೇಂದ್ರ ಸರಕಾರದ ಆರ್ಥಿಕ ನೀತಿ “ಎಲ್ಲವೂ ಖಾಸಗೀಕರಣದತ್ತ” ನಡೆದಿದೆ. ಮುಖ್ಯಮಂತ್ರಿ ದೇವೇಗೌಡರೂ ಕೂಡಾ ನರಸಿಂಹರಾಯರ ಆರ್ಥಿಕ ನೀತಿಯನ್ನು ಒಪ್ಪಿಕೊಂಡಿದ್ದೇನೆಂದು ಸಾರಿದ್ದಾರೆ. ಭೂ ಮಸೂದೆಗೆ ತಿದ್ದುಪಡಿ, ಕಾರ್ಖಾನೆಗಳನ್ನು ರೋಗಗ್ರಸ್ತಗೊಳಿಸುವ ಕ್ರಮಗಳೆಲ್ಲ ಏನು ತೋರಿಸುತ್ತದೆ? “ಎಲ್ಲವೂ ಖಾಸಗೀಕರಣದತ್ತ” ಎಂಬ ಘೋಷಣೆಯನ್ನು ಪುಷ್ಟೀಕರಿಸುತ್ತದೆ. ಈ ಧೋರಣೆಗನುಸಾರವಾಗಿಯೇ ವಿದ್ಯುತ್ ಅಭಾವವನ್ನು ಗುದ್ದವಾಗಿ ಮಾಡಿ, ಕೆಇಬಿಯಲ್ಲಿಯ ಸೋರಿಕೆ, ಕಳವು, ಅವ್ಯವಹಾರಗಳನ್ನು ಸರಿಪಡಿಸಲು ಹಿಂದೇಟು ಹಾಕುತ್ತಾ, ಸರಕಾರಿ ಕ್ಷೇತ್ರದ ಕೈಗಾರಿಕೆಗಳು, ವಿದ್ಯುತ್ ಉತ್ಪಾದನೆ ವಿತರಣೆಗಳಿಂದ ಸಾರ್ವಜನಿಕರೂ, ಕೈಗಾರಿಕೋದ್ಯಮಿಗಳು ಬೇಸತ್ತು, “ಎಲ್ಲವೂ ಖಾಸಗೀಕರಣ”, “ವಿದ್ಯುತ್ ಉತ್ಪಾದನೆ ವಿತರಣೆಯೂ ಖಾಸಗಿಯವರಿಗೆ” ಎಂಬ ಘೋಷಣೆಗೆ ಜನಬೆಂಬಲ ಪಡೆದು ವಿದ್ಯುತ್ ಉತ್ಪಾದನೆ-ವಿತರಣೆಗೆ ನಾವು ಜವಾಬ್ದಾರರಲ್ಲ ಎಂದು ಅದನ್ನೆಲ್ಲಾ ಖಾಸಗಿಯವರಿಗೆ ಒಪ್ಪಿಸುವ ಸುಗಮ ದಾರಿಯತ್ತ ದೇವೇಗೌಡರು ಸಾಗುತ್ತಿದ್ದಾರೆ ಎಂಬ ಅಂಶವನ್ನು ಸಾರ್ವಜನಿಕರು ಅರಿಯುವುದು ಅತ್ಯಗತ್ಯ. ಕೊಜೆಂಟ್ರಿಕ್ಸ್ ವಿದ್ಯುತ್ ಯೋಜನೆಯ ಕುರಿತು ಬಲಿಷ್ಠವಾದ ವಿರೋಧ ವ್ಯಕ್ತವಾದರೂ ಕೂಡಾ ದೇವೇಗೌಡ ಸರಕಾರ ಅದರ ವ್ಯಾಮೋಹ ಬಿಟ್ಟಿಲ್ಲ, ಜುಲೈ ತಿಂಗಳೊಳಗಾಗಿ ಕೊಜೆಂಟ್ರಿಕ್ಸ್‌ಗೆ ಕೇಂದ್ರ ಸರಕಾರದ ಮಂಜೂರಾತಿ ನೀಡದಿದ್ದರೆ ವಿದ್ಯುತ್ ಉತ್ಪಾದನೆಗೆ ಬೇರೆ ಕ್ರಮ ಕೈಗೊಳ್ಳಬೇಕಾಗುತ್ತದೆಂದು ಗರ್ಜಿಸಿದ್ದ ದೇವೇಗೌಡರು ಕಳೆದ 3 ತಿಂಗಳಿಂದಲೂ ಮೌನವಾಗಿರುವುದು ಆಶ್ಚರ್ಯ! ಕಾಂಗ್ರೆ ಸರಕಾರದಂತೆ ಜನತಾದಳದ ದೇವೇಗೌಡರ ಸರಕಾರವೂ ಖಾಸಗೀಕರಣದತ್ತ ಸಾಗುತ್ತಿದೆ. ಸಿಪಿಐ(ಎಂ) ಪಕ್ಷದ ನೇತೃತ್ವದ ಪಶ್ಚಿಮ ಬಂಗಾಳದ ಎಡರಂಗ ಸರಕಾರ ಕಳೆದ ನಾಲ್ಕೈದು ವರ್ಷಗಳಲ್ಲಿ ತಾನು ಎದುರಿಸುತ್ತಿದ್ದ, ಕರ್ನಾಟಕಕ್ಕಿಂತಲೂ ಗಂಭೀರವಾಗಿದ್ದ ವಿದ್ಯುತ್ ಸಮಸ್ಯೆಯನ್ನು ಯಾವ ರೀತಿ ಬಗೆಹರಿಸಿದೆ, ರಾಜ್ಯಕ್ಕೆ ಸಾಕಾಗುವಷ್ಟು ವಿದ್ಯುತ್ ಒದಗಿಸುತ್ತಿರುವುದು ಮಾತ್ರವಲ್ಲ, ನೆರೆರಾಜ್ಯಗಳಿಗೂ ವಿದ್ಯುತ್ತನ್ನು ಪೂರೈಸುತ್ತಿದೆ. ಅದು ಹೇಗೆ ಸಾಧ್ಯವಾಯಿತು ಎಂಬ ಮಹತ್ವದ ಅಂಶವನ್ನು ಅಭ್ಯಾಸ ಮಾಡಿ, ಅವಶ್ಯಕತೆಗಳಿದ್ದರೆ ಪಶ್ಚಿಮ ಬಂಗಾಳ ಸರಕಾರ ಈ ಸಮಸ್ಯೆಯನ್ನು ಯಾವ ರೀತಿ ಪರಿಹರಿಸಿದೆ ಎಂಬ ಅಂಶವನ್ನು ಅಭ್ಯಾಸ ಮಾಡಿ ಅದರ ಆಧಾರದಲ್ಲಿ ಕರ್ನಾಟಕ ರಾಜ್ಯದ ವಿದ್ಯುತ್ ಸಮಸ್ಯೆಗೂ ಪರಿಹಾರ ಒದಗಿಸುವುದರತ್ತ ದೇವೇಗೌಡರಾಗಲೀ, ಅವರ ಸರಕಾರವಾಗಲೀ ಕಿಂಚಿತ್ತೂ ಪ್ರಯತ್ನ ನಡೆಸದಿರುವುದನ್ನು ನೋಡುವಾಗ ನಮ್ಮ ಸರಕಾರ ನರಸಿಂಹರಾಯರ “ಖಾಸಗೀಕರಣ”ವನ್ನು ಬಿಗಿಯಾಗಿ ಅಪ್ಪಿಕೊಂಡಿದೆಂಬುದು ಸ್ಪಷ್ಟವಾಗುತ್ತದೆ.

ಸಂಪನ್ಮೂಲದ ಅಭಾವವಲ್ಲ ಛಲದ ಅಭಾವ

ನಮ್ಮ ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆಗೆ ಸಂಪನ್ಮೂಲಗಳಿಗೇನೂ ಅಭಾವವಿಲ್ಲ. ಸರಕಾರದ ನಿರ್ಧಾರದ, ಛಲದ ಅಭಾವ ಮಾತ್ರ ಎದ್ದು ಕಾಣುತ್ತಿದೆ.

ಇಡೀ ರಾಜ್ಯದ ಜನತೆ ರೈತರು, ಕೈಗಾರಿಕೆಗಳೆಲ್ಲ ಅಸಮರ್ಪಕ ವಿದ್ಯುತ್ ಪೂರೈಕೆಯಿಂದ ತತ್ತರಿಸುತ್ತಿರುವಾಗ ತಮ್ಮ ಜೊತೆಯಲ್ಲಿ 8-10 ಮಂತ್ರಿಗಳನ್ನು ಕೂಡಿ ಹಾಕಿಕೊಂಡು ರಾಜ್ಯದ ಹಲವೆಡೆ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿರುವುದು ಖಂಡನೀಯ. ವಿದ್ಯುತ್ ಕಡಿತ, ಲೋಡ್ ಶೆಡ್ಡಿಂಗ್‌ಗಳೆಲ್ಲ ಸಮಸ್ಯೆ ಅಲ್ಲ ಎಂಬ ರೀತಿಯಲ್ಲಿ ದೇವೇಗೌಡರು ವರ್ತಿಸುತ್ತಿರುವಂತೆ ಕಂಡುಬರುತ್ತಿದೆ.

ಕಾರ್ಖಾನೆಗಳು ನಡೆಯಬೇಕಾದರೆ ದಿನಾಲೂ ಕನಿಷ್ಠ 8-10 ಗಂಟೆಯಾದರೂ ಲೋಡ್ ಶೆಡ್ಡಿಂಗ್ ಇಲ್ಲದೆ ವಿದ್ಯುತ್ ಪೂರೈಕೆ ಆಗಬೇಕು. ಅರ್ಧ ಗಂಟೆಗೊಂದು ಸಲ ವಿದ್ಯುತ್ ಕಡಿತವಾದರೆ ಕಾರ್ಖಾನೆ ನಡೆಸಲು ಸಾಧ್ಯವೇ. ಇದರ ಕುರಿತು ವಿಚಾರ ವಿನಿಮಯ ಮಾಡಲು ಎಲ್ಲಾ ಪಕ್ಷಗಳ ಸಭೆ ಕರೆಯಬೇಕೆಂದು ಮುಖ್ಯಮಂತ್ರಿಯವರನ್ನು ಒತ್ತಾಯಿಸುತ್ತೇವೆ. ಕುಡಿಯುವ ನೀರು ಪೂರೈಕೆಗೆ ಸರಕಾರ ಡೀಜಲ್ ಜನರೇಟರುಗಳ ವ್ಯವಸ್ಥೆ ಮಾಡಬೇಕು.

ರಾಜ್ಯದ ಬೆಳವಣಿಗೆಗೆ, ಕುಡಿಯುವ ನೀರಿಗೆ, ವಿದ್ಯಾರ್ಥಿಗಳ ಅಭ್ಯಾಸಕ್ಕೆ, ರೈತರ ಪಂಪ್‌ಸೆಟ್ಟಿಗೆ ಅತ್ಯವಶ್ಯಕವಾದ ವಿದ್ಯುತ್ ಪೂರೈಕೆಯಲ್ಲಿ ಸರಕಾರದ ಮತ್ತು ಕೆಇಬಿಯ ನಿರ್ಲಕ್ಷವನ್ನು ವಿರೋಧಿಸಲು ಜನರಿಗೆ ವಿದ್ಯುತ್ ಮತ್ತು ನೀರು ಸರಿಯಾಗಿ ಒದಗಿಸುವಂತೆ ಒತ್ತಾಯಿಸಲು 11.12.95ರಂದು ರಾಜ್ಯಾದ್ಯಂತ ಕೆಇಬಿ ಕಛೇರಿಗಳ ಮುಂದೆ ಬೃಹತ್ ಮತ ಪ್ರದರ್ಶನಗಳನ್ನು ನಡೆಸಬೇಕು. ಸರಕಾರ ತನ್ನ ಧೋರಣೆಯನ್ನು ಬದಲಾಯಿಸುವಂತೆ ಮಾಡಬೇಕು. ಎಲ್ಲರಿಗೂ ಸರಿಯಾಗಿ ವಿದ್ಯುತ್ ಲಭಿಸುವಂತಾಗಬೇಕು.

ಸರಕಾರ ತನ್ನ ಧೋರಣೆಯನ್ನು ಬದಲಾಯಿಸುವ ತನಕ ನಿರಂತರ ಹೋರಾಟ ಮುಂದುವರಿಯಲಿ.

-ಎನ್.ಕೆ. ಉಪಾಧ್ಯಾಯ

ಕರ್ನಾಟಕ ಸುದ್ದಿ

ದ.ಕ ಜಿಲ್ಲೆಯಲ್ಲಿ ಬೃಹತ್ ಕೈಗಾರಿಕೆ ಮತ್ತು ಪರಿಸರ

ಸಿಐಟಿಯು ರಾಜ್ಯ ಮಂಡಳಿ ಸಭೆಯ ಒತ್ತಾಯ

ಔದ್ಯಮಿಕವಾಗಿ ಹಿಂದುಳಿದಿರುವ ದ.ಕ. ಜಿಲ್ಲೆಯಲ್ಲಿ ಇದೀಗ ಖಾಸಗೀ ರಂಗದಲ್ಲಿ ಅನೇಕ ಬೃಹತ್ ಕೈಗಾರಿಕೆಗಳು ಸ್ಥಾಪನೆಯಾಗುವ ಸಿದ್ಧತೆ ನಡೆಯುತ್ತಿದ್ದು, ಇದರೊಂದಿಗೆ ಈ ಕೈಗಾರಿಕೆಗಳು ಹೊರಬಿಡುವ ತ್ಯಾಜ್ಯ ವಸ್ತುಗಳಿಂದಾಗಿ ಪರಿಸರದ ಮೇಲೆ ಆಗಬಹುದಾದ ಪ್ರತಿಕೂಲ ಪರಿಣಾಮಗಳ ಕುರಿತು ಜನಸಾಮನ್ಯರಲ್ಲಿ ಆತಂಕದ ಪರಿಸ್ಥಿತಿ ನಿರ್ಮಾಣವಾಗಿದೆ. 1995 ನವಂಬರ್ 11 ಮತ್ತು 12ರಂದು ಮಂಗಳೂರಿನಲ್ಲಿ ಜರುಗಿದ ಸಿಐಟಿಯು ಕರ್ನಾಟಕ ರಾಜ್ಯ ಮಂಡಳಿಯ ಸಭೆಯು ಇದನ್ನು ಗಂಭೀರವಾಗಿ ಪರಿಗಣಿಸಿದೆ.

ದ.ಕ. ಜಿಲ್ಲೆಯ ಮತ್ತು ಕರ್ನಾಟಕ ರಾಜ್ಯದ ಅಭಿವೃದ್ಧಿಯ ಹಿತದೃಷ್ಟಿಯಿಂದ ಮಾತ್ರವಲ್ಲದೆ ಯುವ ಜನರನ್ನು ಬಾಧಿಸುತ್ತಿರುವ ನಿರುದ್ಯೋಗ ಸಮಸ್ಯೆಯು ಸ್ವಲ್ಪಮಟ್ಟಿಗಾದರೂ ಪರಿಹಾರವಾಗಬೇಕಾದರೆ ಬೃಹತ್ ಕೈಗಾರಿಕೆಗಳ ಸ್ಥಾಪನೆಯು ತೀರಾ ಅಗತ್ಯವಾಗಿದೆ ಎಂಬ ಅಭಿಪ್ರಾಯಪಟ್ಟ ಈ ಸಭೆ ಅದೇ ಸಮಯದಲ್ಲಿ ಪರಿಸರ ಮಾಲಿನ್ಯವನ್ನು ತಡೆಗಟ್ಟಲು ವೈಜ್ಞಾನಿಕವಾದ ಕ್ರಮಗಳನ್ನು ಕಟ್ಟುನಿಟ್ಟಾಗಿ ಅಳವಡಿಸುವುದೂ ಅತ್ಯಗತ್ಯವಾಗಿದೆ ಎಂದು ಭಾವಿಸಿದೆ. ಆದರೆ ಪರಿಸರದ ಹೆಸರಿನಲ್ಲಿ ಪ್ರಗತಿಯನ್ನು ತಡೆಗಟ್ಟುವುದು ತಪ್ಪಾಗುತ್ತದೆ ಎಂದು ನಿರ್ಣಯಕ್ಕೆ ಅದು ಬಂದಿದೆ. ಆದ್ದರಿಂದ ಬೃಹತ್ ಕೈಗಾರಿಕೆಗಳು ಪರಿಸರ ಸಂರಕ್ಷಣೆಗೆ ಅಗತ್ಯವಿರುವ ಕ್ರಮಗಳನ್ನು ಕೈಗೊಳ್ಳುವಂತೆ ಸರಕಾರವು ಖಾತ್ರಿಪಡಿಸಬೇಕೆಂದು ಈ ಸಭೆಯು ಒತ್ತಾಯಿಸಿದೆ.

ಕೊಜೆಂಟ್ರಿಕ್ಸ್ ಕುರಿತು

ಅಮೇರಿಕಾದ ಕೊಜೆಂಟ್ರಿಕ್ಸ್ ಸಂಸ್ಥೆ ದ.ಕ. ಜಿಲ್ಲೆಯ ನಂದಿಕೂರಿನಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿರುವ ಉಷ್ಣ ವಿದ್ಯುತ್ ಸ್ಥಾವರದ ಬಗ್ಗೆ ಕರ್ನಾಟಕ ಸರಕಾರವು ಆ ಸಂಸ್ಥೆಯೊಂದಿಗೆ ಮಾಡಿಕೊಂಡ ಒಪ್ಪಂದದ ಪ್ರಕಾರ ವಿದ್ಯುಚ್ಛಕ್ತಿಯ ದರಗಳು ವಿಪರೀತವಾಗಿ ಏರಲಿವೆ. ಒಪ್ಪಂದವು ಪಾರದರ್ಶಕವಾಗಿಲ್ಲದಿರುವುದರಿಂದ ಪರಿಸರ ಮಾಲಿನ್ಯವೇ ಮೊದಲಾದ ಅನೇಕ ಪ್ರಶ್ನೆಗಳ ಕುರಿತು ಆಂತಕಕಾರಿ ಪರಿಸ್ಥಿತಿ ನಿರ್ಮಾಣವಾಗಿದೆ. ದ.ಕ. ಜಿಲ್ಲೆಯ ಅಭಿವೃದ್ಧಿಗೆ ತುರ್ತಾಗಿ ಅಗತ್ಯವಿರುವ ವಿದ್ಯುಚ್ಛಕ್ತಿಯ ಉತ್ಪಾದನೆಗಾಗಿ ವಿದೇಶೀ ಕಂಪನಿಯೊಂದಿಗೆ ಮಾಡಲಾದ ಒಪ್ಪಂದವನ್ನು ಪುನರ್ ವಿಮರ್ಶಿಸಿ ದರಗಳನ್ನು ಕಡಿಮೆ ಮಾಡಬೇಕೆಂದು ಪರಿಸರ ಮಾಲಿನ್ಯದ ತಡೆಗಾಗಿ ಸರಿಯಾದ ಕ್ರಮಗಳನ್ನು ಕೈಗೊಳ್ಳಬೇಕೆಂದೂ ಈ ಸಭೆಯು ಸರಕಾರವನ್ನು ಒತ್ತಾಯಿಸಿದೆ.

ಮಹಿಳಾ ಸಮ್ಮೇಳನ ಜನವರಿಯಲ್ಲಿ

ಗುಲ್ಬರ್ಗ:- ನವಂಬರ್ 18ರಂದು ಜನವಾದಿ ಮಹಿಳಾ ಸಂಘಟನೆಯ ಪ್ರಥಮ ನಗರ ಸಮ್ಮೇಳನವು ಗಂಗಾನಗರದಲ್ಲಿ ಜರುಗಿತು. ಸಮ್ಮೇಳನದ ಉದ್ಘಾಟನೆ ಮಾಡುತ್ತಾ ಶ್ರೀಮತಿ ಶೈಲಜಾ ಉಡುಚಣ ಜನವಾದಿ ಮಹಿಳಾ ಸಂಘಟನೆಯಂಥ ಪ್ರಗತಿಪರ ಸಂಘಟನೆಗಳ ಅವಶ್ಯಕತೆ ಇಂದಿನ ಸಮಾಜಕ್ಕಿದೆ. ಮೂಢನಂಬಿಕೆ ಅವೈಜ್ಞಾನಿಕತೆ ಹೋಗಲಾಡಿಸಿ ಮಹಿಳೆ ಸಂಘಟಿತಳಾಗಿ ಸಮಾಜದ ಕೆಡಕುಗಳ ವಿರುದ್ಧ ಹೋರಾಡಬೇಕೆಂದು ಅವರು ಕರೆ ಕೊಟ್ಟರು. ಮಹಿಳಾ ಸಹಕಾರಿ ಬ್ಯಾಂಕ್ ಮಹಿಳೆಯರ ಅಭಿವೃದ್ಧಿಗಾಗಿಯೇ ಇರುವುದರಿಂದ ಅದರ ಲಾಭ ಪಡೆಯಲು ಹೇಳಿದರು.

ಪ್ರಾರಂಭದಲ್ಲಿ ಪ್ರಾಸ್ತಾವಿಕ ಭಾಷಣವನ್ನು ಜಿಲ್ಲಾ ಸಮಿತಿಯ ಸಹ ಕಾರ್ಯದರ್ಶಿಗಳಾದ ಶ್ರೀಮತಿ ಪದ್ಮಿನಿ ಕಿರಣಗಿ ಮಾಡಿದರು. ರಾಜ್ಯ ಸಮಿತಿಯ ಅಧ್ಯಕ್ಷರಾದ ನೀಲಾ ಕೆ. ಇವರು ಅತಿಥಿಸ್ಥಾನದಿಂದ ಮಾತನಾಡಿ ಮಹಿಳೆಯರ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸುವ ದಿಸೆಯಲ್ಲಿ ಕೆಲಸ ಮಾಡುತ್ತಿರುವ ಜೆಎಂಎಸ್ ಎಲ್ಲಾದುಡಿಯುವ ಜನರ ವಿಮೋಚನೆಯೊಂದಿಗೆ ಮಹಿಳಾ ವಿಮೋಚನೆ ಸಾಧ್ಯ. ಅದ್ದರಿಂದ ನಮ್ಮ ಹಕ್ಕುಗಳಿಗಾಗಿ ಹೋರಾಟಕ್ಕೆ ಮುನ್ನಡೆಯುವುದು ಅನಿವಾರ್ಯವಿದೆ ಎಂದರು.

ಇನ್ನೊಬ್ಬ ಅತಿಥಿಗಳಾದ ಶ್ರೀ ಆರ್.ಕೆ. ಹುಡಗಿಯವರು ಹಲವಾರು ವರ್ಷಗಳಿಂದ ಜೆಎಂಎಸ್ ಗುಲ್ಬರ್ಗಾ ನಗರದಲ್ಲಿ ಅನೇಕ ಸೌಲಭ್ಯಗಳಿಗಾಗಿ ಹೋರಾಡಿ ಯಶಸ್ವಿಯಾಗಿದೆ. ಜೆಎಂಎಸ್ ಬೆಳೆಯುವ ಮೂಲಕ ಮಾತ್ರ ಮಹಿಳೆಯರ ಮೇಲಿನ ದೌರ್ಜನ್ಯ ತಡೆಗಟ್ಟಲು ಸಾಧ್ಯ ಎಂದ ಹೇಳಿದರು.

ಮಹಿಳೆಯರಿಗಾಗಿ ಹಲವಾರು ಕಾನೂನುಗಳಿದ್ದರೂ ಅವುಗಳ ಜಾರಿಯಾಗುತ್ತಿಲ್ಲ, ಜಾರಿಯಾಗಬೇಕೆಂದಲ್ಲಿ ಮಹಿಳೆಯರು ಒಗ್ಗಟ್ಟಾಗಬೇಕೆಂದು ಖ್ಯಾತ ವಕೀಲರಾದ ಸುಭಾಶ್ಚಂದ್ರ ಬಾಣೆಯವರು ಹೇಳಿದರು. ಸಭೆಯ ಅಧ್ಯಕ್ಷತೆಯನ್ನು ಮಹಾದೇವಿ ಮರತೂರ ವಹಿಸಿದ್ದರು. ಪ್ರಾರಂಭದಲ್ಲಿ ಅರುಂಧತಿ ಪಾಟೀಲ್ ಸ್ವಾಗತಿಸಿದರು. ಮುತ್ತಾ ಮಂಜು ಮತ್ತು ಸಂಗಡಿಗರು ಕ್ರಾಂತಿ ಗೀತೆ ಹಾಡಿದರು. ಸಮ್ಮೇಳನಕ್ಕೆ ಶುಭ ಹಾರೈಸಿ ನಾಗಪ್ಪ ಮಾಸ್ತರ ಮಾತನಾಡಿದರು.

ಡಿವೈಎಫ್‌ಐನ ಸ್ಥಾಪನಾ ದಿನಾಚರಣೆ

ದೊಡ್ಡಬಳ್ಳಾಪುರದ ದೇವರಾಜನಗರ ಘಟಕವು 3.11.95ರು ಬೆಳಿಗ್ಗೆ 8 ಗಂಟೆಗೆ ಡಿವೈಎಫ್‌ಐನ ಸ್ಥಾಪನಾ ದಿನಾಚರಣೆಯ ಅಂಗವಾಗಿ ಧ್ವಜಾರೋಹಣವನ್ನು ನಡೆಸಲಾಯಿತು. ದೊಡ್ಡಬಳ್ಳಾಪುರ ತಾಲೂಕು ಸಮಿತಿ ಅಧ್ಯಕ್ಷರಾದ ಬಿ.ಜಿ. ಹೇಮಂತರಾಜರವರು ಮಾತನಾಡಿದರು. ಕೊನೆಯಲ್ಲಿ ಸಿಹಿ ಹಂಚಲಾಯಿತು.

ಚೆಸ್ ಟೂರ್ನಮೆಂಟ್: ತಾಲೂಕು ಸಮಿತಿಯು ದಿನಾಂಕ 11 ಮತ್ತು 12ರಂದು ತಾಲೂಕು ಮಟ್ಟದ ಚೆಸ್ ಟೂರ್ನಮೆಂಟನ್ನು ಮಹಿಳಾ ಸಮಾಜದಲ್ಲಿ ಯಶಸ್ವಿಯಾಗಿ ನಡೆಸಿತು. 48 ಆಟಗಾರರು ಈ ಚೆಸ್ ಟೂರ್ನಮೆಂಟಿನಲ್ಲಿ ಭಾಗವಹಿಸಿದ್ದರು. ತಾಲೂಕು ಸಮಿತಿಯ ಮಾಜಿ ಅಧ್ಯಕ್ಷರಾದ ರುದ್ರಾರಾಧ್ಯ ಚೆಸ್ ಟೂರ್ನಮೆಂಟನ್ನು ಉದ್ಘಾಟಿಸಿದರು. ವಕೀಲರಾದ ಶಿವಪ್ರಸ್ನಾಳ್ಕರ್ ಅವರು ತಾಲೂಕು ಚಾಂಪಿಯನ್ ಆಗಿ ಆಯ್ಕೆಯಾದರು.

ಕರ್ನಾಟಕ ರಾಜ್ಯೋತ್ಸವ: ಕನ್ನಡ ರಾಜ್ಯೋತ್ಸವವನ್ನು ದೊಡ್ಡ ಬಳ್ಳಾಪುರ ಡಿವೈಎಫ್‌ಐ ಸಮಿತಿಯು ನವಂಬರ್ 26ರಂದು ವಿಶಿಷ್ಟ ರೀತಿಯಲ್ಲಿ ಆಚರಿಸಿತು. ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳನ್ನು ಈ ಸಂದರ್ಭದಲ್ಲಿ ನಡೆಸಲಾಯಿತು. ಸೈಕಲ್ ಸ್ಪರ್ಧೆ, ಪ್ರೌಢಶಾಲಾ ಮಕ್ಕಳಿಗಾಗಿ 'ಶಿಕ್ಷಣ ಕ್ಷೇತ್ರದಲ್ಲಿ ಖಾಸಗೀಕರಣ ಬೇಕೇ' ಎಂಬ ವಿಷಯದ ಮೇಲೆ ಚರ್ಚಾ ಸ್ಪರ್ಧೆ ನಡೆಸಿತು. ಎಲ್ಲಾ ವಯೋಮಿತಿಯವರು ಭಾಗವಹಿಸಿದ್ದ ಭಾವಗೀತಗಳ ಸ್ಪರ್ಧೆಯನ್ನು ನಡೆಸಲಾಯಿತು. ದೊಡ್ಡಬಳ್ಳಾಪುರದಲ್ಲಿ ಡಿವೈಎಫ್‌ಐಯನ್ನು ಸ್ಥಾಪನೆ ಮಾಡಿದ ಜಯಶೇಖರ್‌ರವರು ದಿನಾಂಕ 26ರಂದು ಸ್ಪರ್ಧೆಗಳನ್ನು ಉದ್ಘಾಟಿಸಿದರು. ಇದೇ ದಿನ ಸಂಜೆ 5ಕ್ಕೆ ಸಮಾರೋಪ ಸಮಾರಂಭದಲ್ಲಿ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಎಸ್‌ಎಫ್‌ಐನ ರಾಜ್ಯಾಧ್ಯಕ್ಷರಾದ ಶಾಂತಾರಾಮ ನಾಯಕ್ ಬಹುಮಾನಗಳನ್ನು ವಿತರಿಸಿದರು. ಸಿಪಿಐ(ಎಂ)ನ ಮುಖಂಡರು ಹಾಗೂ ಖ್ಯಾತ ವಕೀಲರಾದ ಎಂ.ಕೃಷ್ಣಮೂರ್ತಿಯವರು ಸಭೆಯನ್ನುದ್ದೇಶಿಸಿ ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ತಾಲೂಕು ಸಮಿತಿ ಅಧ್ಯಕ್ಷರಾದ ಬಿ.ಜಿ. ಹೇಮಂತರಾಜುವರು ವಹಿಸಿದ್ದರು. ಸಂಜೀವಪ್ಪ ಮತ್ತು ತಾಲೂಕು ಸಮಿತಿಯ ಕಾರ್ಯದರ್ಶಿ ವೆಂಕಟರೆಡ್ಡಿಯವರು ಕಾರ್ಯಕ್ರಮದ ನಿರ್ವಹಣೆ ಮಾಡಿದರು.

ರಾಜ್ಯ ಸರಕಾರೀ ನೌಕರರ ಧರಣಿ ಸತ್ಯಾಗ್ರಹ

ರಾಜ್ಯ ಸರಕಾರಿ ನೌಕರರು ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಸರಕಾರವನ್ನು ಒತ್ತಾಯಿಸಲು, ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘದ ಆಶ್ರಯದಲ್ಲಿ ನವಂಬರ್ 24ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 5.30ರವರೆಗೆ ಸರಕಾರಿ ನೌಕರರು ರಾಜ್ಯಾದ್ಯಂತ ತಾಲ್ಲೂಕು ಕಚೇರಿ ಜಿಲ್ಲಾಧಿಕಾರಿಗಳ ಕಚೇರಿ ಮತ್ತು ವಿಧಾನಸೌಧದ ಮುಂದೆ ಧರಣಿ ಸತ್ಯಾಗ್ರಹವನ್ನು ನಡೆಸಿದರು. ಸಂಘದ ವತಿಯಿಂದ ತಹಶೀಲ್ದಾರರು, ಜಿಲ್ಲಾಧಿಕಾರಿಗಳು ಮತ್ತು ಸರಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಮನವಿ ಪತ್ರಗಳನ್ನು ಸಲ್ಲಿಸಲಾಯಿತು. ಬೆಂಗಳೂರಿನಲ್ಲಿ ಅಂದು ಮಧ್ಯಾಹ್ನ ವಿರಾಮ ವೇಳೆಯಲ್ಲಿ ವಿಧಾನಸೌಧದ ಮುಂದೆ, ನೌಕರರ ಭಾರೀ ಬಹಿರಂಗ ಸಭೆಯನ್ನು ಏರ್ಪಡಿಸಲಾಗಿತ್ತು.

ಜನವರಿಯಲ್ಲಿ ಜಾನಪದ ಕಲಾ ಉತ್ಸವ

ಮಂಗಳೂರು: ಡಿವೈಎಫ್‌ಐ ಉರ್ವಾ ಸ್ಟೋರ್ಸ್ ಘಟಕದ ವತಿಯಿಂದ ಜನವರಿ ತಿಂಗಳ 28ರಂದು ಒಂದು ದಿನದ ಜಾನಪದ ಕಲಾ ಉತ್ಸವವನ್ನು ನಡೆಸಲು ನಿರ್ಧರಿಸಲಾಗಿದೆ. ದ.ಕ. ಜಿಲ್ಲೆಯ ಜಾನಪದದ ಹಲವು ಪ್ರಕಾರಗಳು ಮತ್ತು ರಾಜ್ಯದ ಇತರೆಡೆಗಳಲ್ಲಿಯ ಜಾನಪದದ ಕಲಾಪ್ರಕಾರಗಳ, ಮಧ್ಯೆ ಸ್ಪರ್ಧೆ, ಪ್ರಾತ್ಯಕ್ಷಿಕೆ, ಪ್ರಬಂಧಗಳನ್ನು ಮಂಡಿಸುವ ವಿಶಿಷ್ಟ ಕಾರ್ಯಕ್ರಮವನ್ನು ಒಳಗೊಂಡಿದೆ.

ಯಶಸ್ವೀ ರಾಜ್ಯಮಟ್ಟದ ವಿದ್ಯಾರ್ಥಿನಿಯರ ಸಮಾವೇಶ

ಬೆಳ್ಳಿ ವರ್ಷದ ಆಚರಣೆಯ ಸಂದರ್ಭದಲ್ಲಿ ರಾಜ್ಯಮಟ್ಟದ ವಿದ್ಯಾರ್ಥಿನಿಯರ ಸಮಾವೇಶವೊಂದನ್ನು ರಾಜ್ಯದಲ್ಲಿಯೇ ಪ್ರಥಮ ಬಾರಿಗೆ ಸಂಘಟಿಸುವ ಮೂಲಕ ಎಸ್‌ಎಫ್‌ಐ ಕರ್ನಾಟಕದಲ್ಲಿ ವಿದ್ಯಾರ್ಥಿನಿಯರನ್ನು ಸಂಘಟಿಸುವಲ್ಲಿ ವಿಶೇಷ ಹೆಜ್ಜೆಯನ್ನಿಟ್ಟಿದೆ.

ಕಡಲ ತೀರಕ್ಕೆ ಅಪ್ಪಳಿಸುವ ಅಲೆಗಳ ಸಿರಿಯನ್ನು ಸವಿಯುವಾಗಲೇ ರಭಸದಿಂದ ಅಪ್ಪಳಿಸುತ್ತಾ ದಿಕ್ಕೆಡಿಸುತ್ತಿರುವ ಕೇಂದ್ರ ಸರಕಾರದ ಹೊಸ ಶೈಕ್ಷಣಿಕ, ಆರ್ಥಿಕ ನೀತಿಗಳ ಬಗೆಗೆ ಚಿಂತನೆ ನಡೆಸುತ್ತಾ ನವಂಬರ್ 18-19ರಂದು ಎರಡು ದಿನಗಳ ಕಾಲ ರಾಜ್ಯದ ಬೇರೆ ಬೇರೆ ಜಿಲ್ಲೆಗಳಿಂದ ಬಂದಿದ್ದ 105 ಜನ ಪ್ರತಿನಿಧಿಗಳು ಉತ್ತರ ಕನ್ನಡ ಜಿಲ್ಲೆಯ ಕಡಲ ತೀರದ ಮುರುಡೇಶ್ವರದಲ್ಲಿ ಒಂದೆಡೆ ಕಲೆತು ತಮ್ಮ ಮುಂದಿರುವ ಸವಾಲುಗಳ ಕುರಿತು ಚರ್ಚಿಸಿದರು.

ಎಸ್‌ಎಫ್‌ಐನ ರಾಜ್ಯ ಸಮಿತಿಯ ಸದಸ್ಯರಾದ ಎನ್.ಪ್ರಭಾ ಧ್ವಜಾರೋಹಣ ಮಾಡುವುದರೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಖ್ಯಾತ ಪತ್ರಕರ್ತೆ ಡಾ.ವಿಜಯ ಸಮಾವೇಶವನ್ನು ಉದ್ಘಾಟಿಸುತ್ತಾ ಭಾರತದಲ್ಲಿ ಹೆಣ್ಣಿನ ಸಮಸ್ಯೆಗಳು ಭ್ರೂಣಾವಸ್ಥೆಯಿಂದಲೇ ಆರಂಭವಾಗಿ ಮರಣಶಯ್ಯೆಯವರೆಗೂ ಹಂತಹಂತವಾಗಿ ಕಾಡುತ್ತದೆ. ಪಾಶ್ಚಾತ್ಯ ಸಂಸ್ಕೃತಿಯ ಅಲೆ ದೇಶದ ಉದಾರೀಕರಣದ ನೀತಿಗಳು ಹೆಣ್ಣನ್ನು ಮತ್ತಷ್ಟು ಅಧೋಗತಿಗೆ ತಳ್ಳುತ್ತಿವೆ ಎಂದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಎಸ್‌ಎಫ್‌ಐನ ಅಖಿಲ ಭಾರತ ಉಪಾಧ್ಯಕ್ಷೆ ಮರಿಯಂ ಧವಳೆಯವರು ಮಾತನಾಡುತ್ತಾ ಕೇಂದ್ರ ಸರಕಾರದ ಒಂದೆಡೆ ಎರಡು ಸಾವಿರ ಇಸ್ವಿಯೊಳಗೆ ಎಲ್ಲರಿಗೂ ಶಿಕ್ಷಣ ನೀಡುವುದಾಗಿ ಘೋಷಿಸುತ್ತಾ ಮತ್ತೊಂದೆಡೆ ಬಜೆಟಿನಲ್ಲಿ ಶಿಕ್ಷಣಕ್ಕಾಗಿ ಹಣಕಸಿನ ತೀವ್ರ ಕಡಿತ ಮಾಡುತ್ತಿದೆ. ಜಗತ್ತಿನ ಶೇ. 54ರಷ್ಟು ಅನಕ್ಷರಸ್ಥರನ್ನು ಹೊಂದಿರುವ ಭಾರತ ಜಾಗತಿಕ ಮಾರುಕಟ್ಟೆಯಲ್ಲಿ ಹೇಗೆ ಸ್ಪರ್ಧಿಸುತ್ತದೆ ಎಂದರು. ಕೇಂದ್ರ ಸರಕಾರ ಶಿಕ್ಷಣ, ಆರ್ಥಿಕ ನೀತಿಯನ್ನು ಖಂಡಿಸುತ್ತಾ ಹಲವು ಉನ್ನತ ಆದರ್ಶಗಳಿಗಾಗಿ ಎಸ್‌ಎಫ್‌ಐ 25 ವರ್ಷಗಳಿಂದ ನಿರಂತರವಾಗಿ ಕೆಲಸ ಮಾಡುತ್ತಿದೆಯೆಂದರು. ಇನ್ನೊಬ್ಬ ಅತಿಥಿಯಾಗಿ ಲಲಿತಾ ಹೆಗಡೆಯವರು ಮಾತನಾಡಿದರು.



ಸಮಾವೇಶದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಎಸ್‌ಎಫ್‌ಐನ ರಾಜ್ಯಾಧ್ಯಕ್ಷರಾದ ಶಾಂತಾರಾಮ ನಾಯಕ್ ವಹಿಸಿದ್ದರು. ಸುಭಾಶ್ ಕೊಪ್ಪೀಕರ ಸ್ವಾಗತಿಸಿದರು. ಶಾಂತಿ ನಾಯ್ಕ ವಂದಿಸಿದರು.

ಪ್ರತಿನಿಧಿ ಅಧಿವೇಶನದಲ್ಲಿ ರಾಜ್ಯ ಕಾರ್ಯದರ್ಶಿ ಪ್ರಕಾಶ್ ಕೆ. ವರದಿ ಮಂಡಿಸಿದರು. ಸಮಾವೇಶಕ್ಕೆ ಶುಭ ಕೋರಿ ಸಿಐಟಿಯು ಮುಖಂಡರಾದ ಟಿ.ಎಸ್. ನಾಯ್ಕ, ಸಮತಾದ ಶಾಂತಿ ನಾಯಕ್, ಬಿಜೆವಿಎಸನ ಶ್ರೀಪಾದ ಭಟ್ಟ, ಚುಟುಕು ಕವಿ ವಿಡಂಬಾರಿ ಮುಂತಾದವರು ಮಾತನಾಡಿದರು.

ಇದೇ ಸಂದರ್ಭದಲ್ಲಿ ವಿದ್ಯಾರ್ಥಿನಿಯರ ರಾಜ್ಯ ಮಟ್ಟದ ಉಪ ಸಮಿತಿ ರಚಿಸಲಾಯಿತು. ಸಂಚಾಲಕಿಯಾಗಿ ಎನ್. ಪ್ರಭಾ(ಬೆಂಗಳೂರು), ಸಹ ಸಂಚಾಲಕರಾಗಿ ಶಾಂತಿ ನಾಯ್ಕ(ಉ.ಕ.), ಲತಾ ಜೆ(ಚಿತ್ರದುರ್ಗ) ಮತ್ತು ಲೀಲಾ ಸಿ.(ಬೆಂಗಳೂರು) ಆಯ್ಕೆಗೊಂಡರು. ಸಮಾವೇಶದ ಕೊನೆಯಲ್ಲಿ ಸಮಾವೇಶದ ಯಶಸ್ವಿಗೆ ಸಹಕರಿಸಿದ ಎಲ್ಲರಿಗೂ ಉ.ಕ. ಜಿಲ್ಲಾ ಉಪಾಧ್ಯಕ್ಷ ಶಂಭು ಭಟ್ ವಂದಿಸಿದರು.

ಡಿಸೆಂಬರ್ 15 ಅಶ್ಲೀಲತೆ ವಿರುದ್ಧ ಜಿಲ್ಲಾ ಕೇಂದ್ರಗಳಲ್ಲಿ ಪ್ರದರ್ಶನ

ಕೇಂದ್ರ ಸರಕಾರದ ಉದಾರೀಕರಣದ ನೀತಿಯಿಂದ ಮಾಧ್ಯಮಗಳಲ್ಲಿ ಹೆಚ್ಚುತ್ತಿರುವ ಅಶ್ಲೀಲತೆ ಹಾಗೂ ಅಶ್ಲೀಲ ಪೋಸ್ಟರ್‌ಗಳ ವಿರುದ್ಧ ಡಿಸೆಂಬರ್ 15ರಂದು ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಮತ ಪ್ರದರ್ಶನ ನಡೆಸಲು ವಿದ್ಯಾರ್ಥಿನಿಯರ ರಾಜ್ಯ ಸಮಾವೇಶದಲ್ಲಿ ನಿರ್ಣಯ ಅಂಗೀಕರಿಸಲಾಯಿತು.

ಜಿಲ್ಲಾಧಿಕಾರಿ ಕಛೇರಿಗೆ ಮೆರವಣಿಗೆ, ಧರಣಿ ಘೇರಾವ್ ಮುಂತಾದವುಗಳ ಮೂಲಕ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಕರೆ ನೀಡಲಾಗಿದೆ.

ಹೆಚ್ಚುತ್ತಿರುವ ರ್‍ಯಾಗಿಂಗ್ ಸಂಸ್ಕೃತಿಯನ್ನು ತೀವ್ರವಾಗಿ ಖಂಡಿಸಿರುವ ಈ ಸಮಾವೇಶ ಕಿರಿಯ ವಿದ್ಯಾರ್ಥಿಗಳ ಮೇಲೆ ರ್‍ಯಾಗಿಂಗ್ ನಡೆಸುವವರ ವಿರುದ್ಧ ಕಠಿಣ ಕ್ರಮಕ್ಕೆ ಆಗ್ರಹಿಸಿ ಇನ್ನೊಂದು ನಿರ್ಣಯ ಅಂಗೀಕರಿಸಿತು.

ಸಮಾವೇಶದ ಎರಡನೇ ದಿನ 'ಮಾಧ್ಯಮ ಮತ್ತು ಮಹಿಳೆ' ವಿಷಯ ಕುರಿತು ವಿಚಾರ ಸಂಕಿರಣ ನಡೆಯಿತು. ಡಾ. ಆರ್.ವಿ. ಭಂಡಾರಿ, ಕೆ.ಎಸ್. ವಿಮಲಾ ಮುಂತಾದವರು ಮಾತನಾಡಿದರು.

ಅಂಬೇಡ್ಕರ್ ಪ್ರತಿಮೆಗೆ ಹಾನಿ ಮತ್ತು ಸಂಬಂಧಿಸಿದ ಚಳುವಳಿ

ಸಿಪಿಐ(ಎಂ) ರಾಜ್ಯ ಸಮಿತಿ ಹೇಳಿಕೆ

ಬೆಂಗಳೂರಿನ ಅಂಬೇಡ್ಕರ್ ಕಾಲೇಜಿನ ಬಳಿ ಕೆಲವು ವಿದ್ಯಾರ್ಥಿಗಳು ಅಂಬೇಡ್ಕರ್ ಪ್ರತಿಮೆಯ ಕನ್ನಡಕ ಕಿತ್ತು ಹಾಕಿ, ಬೀರ್ ಸುರಿದಿರುವ ಹೇಯ ಕೃತ್ಯವನ್ನು ಸಿಪಿಐ(ಎಂ) ರಾಜ್ಯ ಸಮಿತಿಯು ನವಂಬರ್ 25 ಮತ್ತು 26ರಂದು ಸೇರಿದ್ದ ಸಭೆಯು ಖಂಡಿಸಿದೆ. ಈ ಕೃತ್ಯದ ಬಗ್ಗೆ ನಿಷ್ಪಕ್ಷಪಾತವಾದ ತನಿಖೆ ನಡೆಸಿ ತಪ್ಪಿತಸ್ಥರು ಯಾರೇ ಇದ್ದರೂ ಕಠಿಣ ಶಿಕ್ಷೆಗೆ ಗುರಿಪಡಿಸಬೇಕೆಂದು ಅದು ಒತ್ತಾಯಿಸಿದೆ. ಅಂಬೇಡ್ಕರರಂತಹ ರಾಷ್ಟ್ರ ನಾಯಕರ ಪ್ರತಿಮೆಗಳಿಗೆ ಹೀಗೆ ಅವಮಾನ ಮಾಡುವ ಪ್ರವೃತ್ತಿಯನ್ನು ತಡೆಗಟ್ಟಲು ನಿರ್ದಿಷ್ಟ ಕ್ರಮಗಳನ್ನು ಕೈಗೊಳ್ಳುವ ಅವಶ್ಯಕತೆಯಿದೆ ಎಂದು ಅದು ಅಭಿಪ್ರಾಯಪಟ್ಟಿದೆ.

ಆದರೆ, ಇದೇ ಸಮಯದಲ್ಲಿ ದಲಿತರ ಭಾವನೆಗಳಿಗೆ ಆಗಿರುವ ಗಾಯಕ್ಕೆ ಉಪ್ಪೆರಚುವಂತೆ ಕಾಂಗ್ರೆ ಪಕ್ಷ ರಾಜ್ಯದಾದ್ಯಂತ ಗಲಭೆಗಳನ್ನು ಪ್ರಚೋದಿಸುವಲ್ಲಿ ನಿರತವಾಗಿದೆ. ಕೋಲಾರದಲ್ಲಿ ಅದಂತೆ ಜಾತಿ-ಜಾತಿಗಳ ನಡುವಣ ದ್ವೇಷವನ್ನು ಉದ್ರೇಕಿಸಿದೆ. ಇತ್ತೀಚೆಗೆ ಮಂಡ್ಯದಲ್ಲಿಯೂ ರಾಜ್ಯ ರೈತ ಸಂಘದ ಚಳುವಳಿಯನ್ನು ಕಾಂಗ್ರೆ ಇದೇ ರೀತಿ ದುರುಪಯೋಗಪಡಿಸಿಕೊಂಡಿದ್ದನ್ನು ನೆನಪಿಸಿಕೊಳ್ಳಬೇಕಾಗಿದೆ. ಕಾಂಗ್ರೆ ಪಕ್ಷ ತನ್ನ ಸ್ವಾರ್ಥ ಸಾಧನೆಗಾಗಿ ಜನಸಮುದಾಯದ ಹಿತದ ಪರಿಗಣನೆ ಇಲ್ಲದೆ ಕೆಲವ ಮುಂದಿನ ಚುನಾವಣೆಗಾಗಿ ದ್ವೇಷದ ಬೆಂಕಿ ಹಚ್ಚುವ ಕೃತ್ಯದಲ್ಲಿ ನಿರತರಾಗಿರುವುದನ್ನು ರಾಜ್ಯ ಸಮಿತಿ ತೀವ್ರವಾಗಿ ಖಂಡಿಸಿತು. ಬಿಜೆಪಿ ಪಕ್ಷವೂ ಇಂತಹ ಕೃತ್ಯದಲ್ಲಿ ಹಿಂದೆ ಬಿದ್ದಿಲ್ಲ. ಇಂತಹ ಕುತಂತ್ರಕ್ಕೆ ರಾಜ್ಯದ ದಲಿತ ಸಮುದಾಯ ಬಲಿ ಬೀಳಬಾರದೆಂದು ಮಾರ್ಕ್ಸವಾದಿ ಕಮ್ಯುನಿಸ್ಟ ಪಕ್ಷದ ರಾಜ್ಯ ಸಮಿತಿ ಕರೆ ನೀಡಿದೆ.

ಇದೇ ಸಂದರ್ಭದಲ್ಲಿ ರಾಜ್ಯದ ಮಹಿಳಾ ಮತ್ತು ಕನ್ನಡ ಸಂಸ್ಕೃತಿ ಸಚಿವೆ ಬಿ.ಟಿ.ಲಲಿತಾನಾಯಕ್ ರಾಜೀನಾಮೆ ಕೊಡುವ ಅಗತ್ಯವಿಲ್ಲವೆಂದು ರಾಜ್ಯ ಸಮಿತಿ ಭಾವಿಸುತ್ತದೆ.

ಕಾಂಗ್ರೆಸ್ ಪಕ್ಷದ ಸ್ವಾರ್ಥ ಸಾಧನೆಯಿಂದಾಗಿ ಹುಟ್ಟಿಕೊಂಡ ಕಾಶ್ಮೀರ ಸಮಸ್ಯೆ ಕಾಂಗ್ರೆಸ್ ಕೇಂದ್ರ ಸರಕಾ ಗಳ ಸಂಕುಚಿತ ದೃಷ್ಟಿಕೋಣದಿಂದಾಗಿ ಈಗ ಗೋಜಲು ಗೋಜಲಾಗಿದೆ. ಈ ಗೋಜಲಿನಿಂದ ಹೊರಬರು ವುದು ಹೇಗೆ? ಭಾರತದ ಜಾತ್ಯಾತೀತ ಅಡಿಗಟ್ಟಿನ ಪ್ರತೀಕವಾದ ಕಾಶ್ಮೀರಿ ಜನತೆಗಳ ಆಕಾಂಕ್ಷೆಗಳ ಈಡೇ ಹೇಗೆ? ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಗಳು ವಿಶ್ಲೇಷಿಸುತ್ತಾರೆ.

ಕಾಶ್ಮೀರ ಗೋಜಲಿ ಪರಿಹಾರ ಹೇಗೆ?

ಕಾಶ್ಮೀರದ ಪರಿಸ್ಥಿತಿಯ ಬಗ್ಗೆ ಸರಕಾರದ ಅಂದಾಜು ಸರಿಯೇ, ಚುನಾವಣಾ ಆಯೋಗದ ಅಂದಾಜು ಸರಿಯೇ, ಚುನಾವಣಾ ಆಯೋಗ ಬೇಕಾದಕ್ಕಿಂತ ಹೆಚ್ಚು ಜಾಗರೂಕತೆಯ ನಿಲುವು ತಳೆಯಿತೇ ಎಂಬ ಬಗ್ಗೆ ಈಗ ಚರ್ಚೆ ನಡೆದಿದೆ. ಆದರೆ ಒಂದಂತೂ ನಿಜ, ಪಾಕಿಸ್ತಾನ ಕಳೆದ ಕೆಲವು ವರ್ಷಗಳಿಂದ ಅಲ್ಲಿ ತಾನು ಮರೆಯಲ್ಲಿ ನಿಂತು ಯುದ್ಧ ನಡೆಸುತ್ತಿದೆ. ಈಗ ಕಾಶ್ಮೀರಿ ಉಗ್ರಗಾಮಿಗಳ ಬದಲು ಪಾಕಿಸ್ತಾನ ತೂರಿಸಿದ ಬಾಡಿಗೆ ಸೈನಿಕರು, ಅಫಘಾನಿಸ್ತಾನದಲ್ಲಿ ನಜೀಬುಲ್ಲಾ ಸರಕಾರವನ್ನು ಉರುಳಿಸಿದ ಮೇಲೆ ಅಮೇರಿಕಾದ ಶಸ್ತ್ರಾಸ್ತ್ರಗಳಿಂದ ಸಜ್ಜಿತರಾದ ಮುಜಾಹಿದಿನ್ ಗಳು ಕಾಶ್ಮೀರದಲ್ಲಿ ಭಯೋತ್ಪಾದನೆ ನಡೆಸಿದ್ದಾರೆ. ಜನಗಳ ದೈನಂದಿನ ಜೀವನ, ಕೈಗಾರಿಕೆ, ಕೃಷಿ, ಪ್ರವಾಸೋದ್ಯಮ ಎಲ್ಲವನ್ನೂ ತಟ್ಟಿರುವ, 15 ಸಾವಿರ ಕಾಶ್ಮೀರಿಗಳ ಬಲಿ ಪಡೆದಿರುವ, ಜತೆಗೆ ಈಗ ಸಮಾಜಘಾತುಕ ಕೃತ್ಯಗಳಿಂದ ಭಯೋತ್ಪಾದಕರ ಕೃತ್ಯಗಳಿಂದ ಕಾಶ್ಮೀರಿಗಳು ಬೇಸತ್ತಿದ್ದಾರೆ. ಆದರೆ ಭಾರತದ ರಾಜಕೀಯ ವ್ಯವಸ್ಥೆಯಿಂದ ಅವರಿಗೆ ಆಗಿರುವ ಬೇಸರವೂ ಕೊನೆಗೊಂಡಿಲ್ಲ ಎಂಬುದನ್ನು ಗಮನಿಸಬೇಕು.

ಕಾಶ್ಮೀರ ಸಮಸ್ಯೆಗೆ ಪರಿಹಾರ ಬಯಸುವಾಗ ದೇಶದ ಪ್ರಗತಿಪರ ಶಕ್ತಿಗಳು ಯಾವ ಸನ್ನಿವೇಶದಲ್ಲಿ ಕಾಶ್ಮೀರಿಗಳು ಭಾರತವನ್ನು ಸೇರಲು ನಿರ್ಧರಿಸಿದರು ಎಂಬುದನ್ನು ನೆನಪಿಸಿಕೊಳ್ಳಬೇಕು. ಭಾರತಕ್ಕೆ ಸ್ವಾತಂತ್ರ್ಯ ನೀಡುವಾಗ ಪಾಕಿಸ್ತಾನವನ್ನು ರಚಿಸುವುದರೊಂದಿಗೇ ಬ್ರಿಟಿಷ್ ಸಾಮ್ರಾಜ್ಯಶಾಹಿಗಳು ಹೈದರಾಬಾದ್ ಮತ್ತು ಕಾಶ್ಮೀರಿಗಳಿಗೆ ಸ್ವತಂತ್ರ ಸ್ಥಾನಮಾನ ನೀಡುವ ಸಂಚು ನಡೆಸಿದರು-ನಂತರ ಸ್ವತಂತ್ರ ಭಾರತದ ವಿರುದ್ಧ ಮಸಲತ್ತು ನಡೆಸಲು ಅನುವಾಗಲೆಂದು. ಆದರೆ ಕಾಶ್ಮೀರದ ಜನತೆ ಜಾತ್ಯಾತೀತ ಭಾರತವನ್ನು ಸೇರಲು ಯತ್ನಿಸಿದರು. (ನಂತರ ಅಮೇರಿಕನ್ನರೂ ಈ ದಿಕ್ಕಿನಲ್ಲಿ ಪ್ರಯತ್ನಿಸಿದರು) **1953ರಲ್ಲಿ ಸಂವಿಧಾನದ 370ನೇ ಕಲಮು ಇಂತಹ ಕಾಶ್ಮೀರದ ಜನತೆಗೆ ಜಾತ್ಯಾತೀತ ಭಾರತ ನೀಡಿದ ಭರವಸೆಯ ಪ್ರತೀಕ ಹಾಗೂ ಕಾಶ್ಮೀರ ಭಾರತೀಯ ಗಣತಂತ್ರದ ಜಾತ್ಯಾತೀತ ನೆಲೆಗಟ್ಟಿನ ಪ್ರತೀಕ.** ಆದ್ದರಿಂದ 370ನೇ ಕಲಮನ್ನು ಈಗ ಬಿಜೆಪಿ ಹಾಗೂ ಹಿಂದೆ ಇಂತಹ ಇತರ ಅವತಾರಗಳಂತಹ ಬಲಪಂಥೀಯ ಕೋಮುವಾದಿ ಶಕ್ತಿಗಳು ಮಾತ್ರ ವಿರೋಧಿಸುತ್ತಿವೆ. ಉಳಿದೆಲ್ಲಾ ರಾಜಕೀಯ ಪಕ್ಷಗಳು ಬೆಂಬಲಿಸುತ್ತಾ ಬಂದಿವೆ.

ಕಾಶ್ಮೀರಿಗಳೇಕೆ ಬೇಸತ್ತರು?

ಇತರೆಡೆಗಳಂತೆ ಕಾಶ್ಮೀರದಲ್ಲೂ ತನ್ನ ಆಳ್ವಿಕೆಯನ್ನು ಹೇಗಾದರೂ ಮಾಡಿ ಹೇರುವ ಕಾಂಗ್ರೆಸ್ ಪ್ರಯತ್ನದಿಂದಲೇ ಈಗಿನ ತೊಂದರೆ, ಸಮಸ್ಯೆ ಆರಂಭವಾಯಿತು. ಕಾಂಗ್ರೆಸ್ ಒಂದೆಡೆ ಪ್ರಜಾಸತ್ತಾತ್ಮಕವಾಗಿ ಆರಿಸಲ್ಪಟ್ಟ ಸರಕಾರವನ್ನು ಉರುಳಿಸುವುದು, ಇನ್ನೊಂದೆಡೆ ರಾಜ್ಯ ಸರಕಾರದ ಅಧಿಕಾರಗಳನ್ನು ಒಂದೊಂದಗಿ ಕಿತ್ತುಕೊಳ್ಳಲಾರಂಭಿಸಿದಾಗ ಜನ ಸಹಜವಾಗಿಯೇ ಸಿಡಿಮಿಡಿಗೊಂಡರು. ಇದರ ಪರಿಣಾಮವಾಗಿ 1975ರಲ್ಲಿ ಇಂದಿರಾಗಾಂಧಿ ಹಾಗೂ ಶೇಖ್ ಅಬ್ದುಲ್ಲಾರ ನಡುವೆ ಒಂದು ಒಪ್ಪಂದವಾಯಿತು. 1953ರ ನಂತರ 370ನೇ ಕಲಮಿನಲ್ಲಾದ ಹ್ರಾಸವನ್ನು ಸರಿಪಡಿಸುವ ಭರವಸೆಯನ್ನು ಈ ಒಪ್ಪಂದ ನೀಡಿತ್ತು. 1977ರಲ್ಲಿ ನಡೆದ ಚುನಾವಣೆಗಳಲ್ಲಿ ಕಾಶ್ಮೀರಿ ಜನಗಳು ಉತ್ಸಾಹದಿಂದ ಭಾಗವಹಿಸಿ ಈ ಒಪ್ಪಂದಕ್ಕೆ ತಮ್ಮ ಅನುಮೋದನೆ ಸೂಚಿಸಿದರು. ಆದರೆ ಕಾಂಗ್ರೆಸ್ ಸರಕಾರ ಈ ಭರವಸೆ ಈಡೇರಿಸಲಿಲ್ಲ. ತನ್ನ ಆಳ್ವಿಕೆ ಹೇರುವ ಪ್ರಯತ್ನವನ್ನು ನಿಲ್ಲಿಸಲಿಲ್ಲ. 1984ರಲ್ಲಿ ನ್ಯಾಶನಲ್ ಕಾನ್ಫರೆನ್ಸ್ ಸರಕಾರವನ್ನು ವಜಾ ಮಾಡಿ ತನ್ನ ಬೆಂಬಲದ ಕೈಗೊಂಬೆ ಸರಕಾರವನ್ನು ಹೇರಿತು. ಜನಗಳಲ್ಲಿ ಮತ್ತೆ ಭ್ರಮನಿರಸನವಾಯಿತು. ಅವರ ಸಿಟ್ಟನ್ನು ಪಾಕಿಸ್ತಾನ ತನ್ನ ಪ್ರಯೋಜನಕ್ಕೆ ಬಳಸಿಕೊಂಡಿತು. 1989-90ರಲ್ಲಿ ಫಾರುಕ್ ಅಬ್ದುಲ್ಲಾ ಸರಕಾರ ಅಧಿಕಾರ ಕಳಕೊಂಡಾಗ ಪಾಕಿಸ್ತಾನದ ಪ್ರಯತ್ನಗಳು ಇಮ್ಮಡಿಗೊಂಡವು. ಪಾಕಿಸ್ತಾನ ಹೆಚ್ಚೆಚ್ಚು ಮೂಗು ತೂರಿಸಲಾರಂಭಿಸಿತು. ಆಗ ಕೇಂದ್ರ ಸರಕಾರ ಕಾಶ್ಮೀರಿ ಜನಗಳ ನೊಂದ ಮನಕ್ಕೆ ಸಾಂತ್ವನ ನೀಡುವ ಬದಲು, ಅವರ ಸ್ವಂತಿಕೆಯನ್ನು ರಕ್ಷಿಸುವ ಭರವಸೆ ನೀಡುವ ಬದಲು ಕಾಶ್ಮೀರದ ಪ್ರಶ್ನೆಯನ್ನು ಕಾನೂನು-ವ್ಯವಸ್ಥೆಯ ಪ್ರಶ್ನೆಯಾಗಿಯಷ್ಟೇ ನೋಡಲಾರಂಭಿಸಿತು. ಭದ್ರತಾ ಪಡೆಗಳ ಮೂಲಕ ಪರಿಸ್ಥಿತಿಯನ್ನು ಎದುರಿಸಿದರೆ ಸಾಕು ಎನ್ನುವಂತೆ ವರ್ತಿಸಿತು. ಇದರಿಂದ ಪರಿಸ್ಥಿತಿ ಮತ್ತಷ್ಟು ಹದಗೆಟ್ಟಿತು.

ಗರಿಷ್ಟ ಸ್ವಾಯತ್ತತೆಯೊಂದೇ ದಾರಿ

ಜಾತ್ಯಾತೀತ ಪ್ರತಿಪಕ್ಷಗಳು ಈ ಸಮಸ್ಯೆಗೆ ರಾಜಕೀಯ ಪರಿಹಾರ ಕಂಡು ಹಿಡಿಯುವ ಬಗ್ಗೆ ಹಲವು ಬಾರಿ ರಚನಾತ್ಮಕ ಸಲಹೆ-ಸೂಚನೆಗಳನ್ನು ನೀಡಿದರೂ ಕಾಂಗ್ರೆಸ್ ಸರಕಾರ ಕಿವಿಗೆ ಹಾಕಿಕೊಳ್ಳಲಿಲ್ಲ. ನರಸಿಂಹರಾವ್ ಸರಕಾರ ಅಧಿಕಾರಕ್ಕೆ ಬಂದ ಮೇಲೂ ಈ ಬಗ್ಗೆ ನಿರ್ದಿಷ್ಟ ಸಲಹೆ-ಸೂಚನೆಗಳನ್ನು ನೀಡಿದಾಗ ಪ್ರಧಾನಿಗಳು ಅದನ್ನು ಗಂಭೀರವಾಗಿ ಪರಿಗಣಿಸುವುದಾಗಿ ಹೇಳಿದರೂ ಏನೂ ಮಾಡಲಿಲ್ಲ. ಒಂದೆಡೆ ಕಾಂಗ್ರೆಸ್, ಇನ್ನೊಂದೆಡೆ ಬಿಜೆಪಿಯ ತೀವ್ರ ನಿಲುವುಗಳ ನಡುವೆ ಜಾತ್ಯಾತೀತ ಪ್ರತಿಪಕ್ಷಗಳು ಕಾಶ್ಮೀರಕ್ಕೆ ಗರಿಷ್ಠ ಸ್ವಾಯತ್ತತೆ ನೀಡುವುದೇ ಬೇಸತ್ತ ಕಾಶ್ಮೀರಿಗಳ ಮನ ಗೆಲ್ಲಲು ಇರುವ ಏಕೈಕ ದಾರಿ ಎಂದು ಮತ್ತೆ-ಮತ್ತೆ ಹೇಳುತ್ತಾ ಬಂದಿವೆ.

ಹಿಂದೆ ಈ ಅಮೇರಿಕಾ ಕಾಶ್ಮೀರಿ ಜನಗಳ ಅಭಿಪ್ರಾಯವನ್ನು ಕೇಳಬೇಕು ಎಂದು ಹೇಳುತ್ತಾ ವಾಸ್ತ ನ್ನೊಂದು ಸ್ವತಂತ್ರ ದೇಶವನ್ನಾಗಿ ಮಾಡುವ ಸಿತ್ತು. ಈಗ ಐಎಂಎಫ್ ಸಾಲ ಪಡೆದ ಶಾಂಗ ವ್ಯವಹಾರಗಳಲ್ಲೂ ತನ್ನೆದುರು ಹೆಚ್ಚು ರುವ ಸಂದರ್ಭವನ್ನು ತನ್ನ ಉದ್ದೇಶ ಈಡೇರಿ ಅಮೇರಿಕಾ ಪ್ರಯತ್ನಿಸುತ್ತಿದೆ. ಇತ್ತೀಚೆಗೆ ಅಮೆ ರದಲ್ಲಿ ಚುನಾವಣೆ ನಡೆಸುವಂತೆ ನರಸಿಂಹ ರಕ್ಕೆ ಸಲಹೆ ನೀಡಿದೆಯಂತೆ.

ಇಲ್ಲಿ ಕಾಂಗ್ರೆಸ್ ಸರಕಾರ ನಮ್ಮೆಲ್ಲಾ ಸಲ ಮನವಿಗಳನ್ನು ನಿರ್ಲಕ್ಷಿಸುತ್ತಿದ್ದಾಗ ಅತ್ತ ಪಾಕಿಸ್ತಾ ವರ್ಗಗಳ ಪಕ್ಷಗಳು ಕಾಶ್ಮೀರಿಗಳ ಬಗ್ಗೆ ಮ ಪರಸ್ಪರ ಸ್ಪರ್ಧೆಗಳಿದಿದ್ದರು. ಅಂತರ್ರಾಷ್ಟ್ರೀಯ ಪಾಕಿಸ್ತಾನದ ಅಪಪ್ರಚಾರವನ್ನು ಎದುರಿಸಲು ಕಾರ ವಿಫಲವಾಯಿತು. ಇಸ್ಲಾಮಿಕ್ ದೇಶಗ ಈ ವಿಷಯದಲ್ಲಿ ಪಾಕಿಸ್ತಾನ-ಪರ ನಿಲ್ಲ ನಮ್ಮ ಸರಕಾರ ಎಚ್ಚರಗೊಂಡಿದ್ದು.

ಮತ್ತೆ ಹಿಂಜರಿಕೆ

ಭಯೋತ್ಪಾದಕ ಕೃತ್ಯಗಳಿಂದ ಬೇಸತ್ತಿದ್ದಾ ವಾದರೂ ಈಗ ಒಂದು ರಾಜಕೀಯ ಪ ಚುನಾವಣೆ ನಡೆದರೆ ಜನ ಅವಕ್ಕೆ ಸ್ಪಂದಿಸ ಎಷ್ಟೇ ಹೇಳಿದರೂ ಸರಕಾರ ಇತ್ತೀಚಿನವರೆ

ಎಐಕೆಎಸ್‌ನ 28ನೇ ಸಮ್ಮೇಳನ



ಅನುಭವಗಳ, ಸವಾಲುಗಳ ವಿಶ್ಲೇಷಣೆ

ಕಳೆದ ವಾರ ಕಟಕ್‌ನಲ್ಲಿ ನವಂಬರ್ 19ರಿಂದ ನಡೆದ ಅಖಿಲ ಭಾರತ ಕಿಸಾನ್ ಸಭಾದ 28ನೇ ಸಮ್ಮೇಳನದ ಉದ್ಘಾಟನಾ ಅಧಿವೇಶನದ ವರದಿ ಓದಿರುವಿರಿ. ಈ ಬಾರಿ ಸಮ್ಮೇಳನ ಚರ್ಚೆಯ ಬಗ್ಗೆ ಒಂದು ನೋಟ.

ಎಐಕೆಎಸ್‌ನ 28ನೇ ಸಮ್ಮೇಳನಕ್ಕೆ ಎಐಕೆಎಸ್‌ನ ಪ್ರಧಾನ ಕಾರ್ಯದರ್ಶಿ ರಾಮನಾರಾಯಣ ಗೋಸ್ವಾಮಿಯವರು ತಮ್ಮ ವರದಿ ಸಲ್ಲಿಸಿದರು. ಅವರು ಸಂಕ್ಷಿಪ್ತವಾಗಿ ಕೇಂದ್ರ ಸರಕಾರದ ಹೊಸ ನೀತಿಗಳ ಬಗ್ಗೆ ಮಾತನಾಡಿದರು. ಗ್ರಾಮೀಣ ಶ್ರೀಮಂತರಿಗೆ ಮಾತ್ರ ಅನುಕೂಲವಾಗುವ ಬೆಲೆ ನೀತಿ, ಬಡ ರೈತರಿಗೆ ಹಸಿವು, ನಿರುದ್ಯೋಗಗಳ ಕೊಡುಗೆ ಇತ್ಯಾದಿ.ಇದು ದೇಶದಾದ್ಯಂತ ಎಲ್ಲ ಪ್ರದೇಶಗಳ ಜನರ ಅನುಭವ.

ಎಐಕೆಎಸ್ ಈ ಹೊಸ ಆರ್ಥಿಕ ನೀತಿಗಳ ಪರಿಣಾಮಗಳ ಸವಾಲನ್ನು ಎದುರಿಸುವುದಾದರೆ ಅದು ರೈತ ಸಮೂಹವನ್ನು ಜಾತಿ ಕೋಮುವಾದಗಳ ವಿರುದ್ಧ ಹೋರಾಡಲು ಅಣಿಗೊಳಿಸಬೇಕು.ಈ ವಿಷಯದಲ್ಲಿ ಸುಮ್ಮನೆ ಕೂರುವ ಜಾಯಮಾನ ಒಳ್ಳೆಯದಲ್ಲ. ಎಐಕೆಎಸ್‌ನಲ್ಲೂ ಸಹ ಎಲ್ಲಾ ರಾಜ್ಯಗಳವರು ಭೂಮಿ ಪ್ರಶ್ನೆಗೆ ನೀಡಬೇಕಾದ ಗಂಭೀರ ಒತ್ತನ್ನು ನೀಡಿಲ್ಲ. ಇಂದಿಗೂ ಸದಸ್ಯತ್ವದ ಬಹುಪಾಲು ಪ.ಬಂಗಾಳ ಮತ್ತು ಕೇರಳಗಳದ್ದು. ಈ ಸ್ಥಿತಿಯಿಂದ ಹೊರಬರುವುದಾದರೆ ಯಾಂತ್ರಿಕ ಕಾರ್ಯಶೀಲತೆ ಪರಿಣಾಮಕಾರಿಯಾಗುವುದಿಲ್ಲ. ಈ ಸವಾಲುಗಳನ್ನು ಎಲ್ಲ ರೀತಿಯಲ್ಲೂ ಎದುರಿಸುವ ಸಾಹಸ ಮಾಡಬೇಕು.

ಈ ವರದಿಯ ಮೇಲಿನ ಚರ್ಚೆ ಬಹಳ ಮಾಹಿತಿಪೂರ್ಣವಾಗಿಯೂ ಆಳವಾಗಿಯೂ ಇತ್ತು. ಈ ಚರ್ಚೆ ಪ್ರಾರಂಭವಾದದ್ದೇ ಪ.ಬಂಗಾಳದ ಸಮರ್ ತಾರಾ ಅವರು ಎಡರಂಗ ಸರಕಾರ ನೀಡಿದ ಕೊಡುಗೆ ಎಂಬುದು ರೈತ ಕೃಷಿ ಕೂಲಿಕಾರರ ಹೋರಾಟದಿಂದ ಬಂದಿದ್ದು ಎನ್ನುವುದರೊಂದಿಗೆ ಮತ್ತೆ ಈ ಹೋರಾಟಗಳು ವರ್ಗಪ್ರಜ್ಞೆಯುಳ್ಳವರ ನೇತೃತ್ವದಲ್ಲಿ ನಡೆದವು ಎಂಬುದೂ ಮುಖ್ಯ. ಎಲ್ಲೆಲ್ಲಿ ಈ ಚಳುವಳಿಯನ್ನು ಮುಂದಕ್ಕೆ ಕೊಂಡೊಯ್ಯುವ ಸಮಸ್ಯೆಗಳು ಕಂಡು ಬಂದವೋ ಅಲ್ಲೆಲ್ಲಾ ಇದನ್ನು ನೇತಾರರ ವರ್ಗ ಮೂಲಗಳಿಗೇ ಅನ್ವಯಿಸಬಹುದಾಗಿತ್ತು.

ಕೇರಳ: ಕೇರಳದ ವರದಿಯನ್ನು ವಿಶೇಷವಾಗಿ ಮಾಡಿದವರು ಕಾಂ.ಇ.ಎಂ.ಶ್ರೀಧರನ್. ರಬ್ಬರು, ತೆಂಗಿನಂತಹ ರಫ್ತಿನ ವಸ್ತುಗಳನ್ನು ಉತ್ಪಾದಿಸುತ್ತಿದ್ದ ಕೇರಳದ ಆರ್ಥಿಕ ಒಂದು ರೀತಿಯಲ್ಲಿ ಬಹಳ ಹಿಂದೆಯೇ ಜಾಗತೀಕರಣಗೊಂಡಿತ್ತು. ಅಂತರ್ರಾಷ್ಟ್ರೀಯ ಮಾರುಕಟ್ಟೆಯ ಬೆಲೆ ಏರುಪೇರುಗಳನ್ನು ಅನುಭವಿಸುವುದಲ್ಲದೆ ಸರಕಾರ ಆಗಾಗ ಅಸಂಬದ್ಧವಾಗಿ ತೆಂಗಿನ ಎಣ್ಣೆಯಂತಹ ಸರಕನ್ನೂ ಆಮದು ಮಾಡಿಕೊಳ್ಳುವುದನ್ನು ನೋಡಬೇಕಾಗುತ್ತಿತ್ತು. ಇದರಿಂದ ಇಲ್ಲಿ ಉತ್ಪಾದನೆಯಾಗುವ ವಸ್ತುಗಳ ಬೆಲೆ ಕಡಿಮೆ ಆಗುತ್ತಿತ್ತು. ಜನರ ವಲಸೆಯಿಂದಾಗಿ ಕುಟ್ಟನಾಡಿನಲ್ಲಿ ಬೆಳೆದಿದ್ದ ಪೈರು ಕಟಾವಿಗೂ ಜನ ಸಿಗಲಿಲ್ಲ. ಜಾಗತೀಕರಣ ಒಳ್ಳೆಯದು ಎನ್ನುವವರು ಕೇರಳದ ರೈತರ ಈ ಪರಿಯನ್ನು ನೋಡಬಹುದು.

ತ್ರಿಪುರಾ: ಬಾಜುಬಾಂಗ್ ರಿಯಾಂಗರು ತ್ರಿಪುರಾದ ಸಮಸ್ಯೆಗಳ ವಿಶಿಷ್ಟತೆಯನ್ನು ವಿವರಿಸಿದರು. ಬರೇ ಬೋಳುಗುಡ್ಡಗಳಿದ್ದಾಗಿಯೂ ಕೇಂದ್ರ ಸರಕಾರ ಅಲ್ಲಿನ ಭೂಮಿಯ ಶೇ. 66ರಷ್ಟನ್ನು ಅರಣ್ಯವೆಂದು ಘೋಷಿಸಿಬಿಟ್ಟಿದೆ. ಇದೇ ಭೂಮಿಯನ್ನು ಗುಡ್ಡಗಾಡು ಜನಗಳಿಗೆ ಹಂಚಿದರೆ ಭೂಮಿಯ ಉಪಯೋಗ ಹೆಚ್ಚಾಗುತ್ತದೆ.

ಆಂಧ್ರಪ್ರದೇಶ: ಶ್ರೀನಿವಾಸರಾವ್ ಅವರು ಹಿಸ್ಸಾರ್ ಸಮ್ಮೇಳನದ ಕಣ್ಣೋಟವನ್ನು ಹೇಗೆ ಆಂಧ್ರದಲ್ಲಿ ಅನುಷ್ಠಾನಕ್ಕೆ ತರಲಾಗಿದೆಯೆಂದು ವಿವರಿಸಿದರು. ಭೂಮಿ ಆಕ್ರಮಣ ಮತ್ತು ಭೂಮಿತಿಯನ್ನು ತೆಗೆದುಹಾಕುವುದರ ವಿರುದ್ಧ ಹೋರಾಟ ಮಾಡಲಾಗಿದೆ. ಸೀಗಡಿ ಕೃಷಿಕರು ಸರಕಾರದ ಮೇಲೆ ಒತ್ತಡ ತಂದು ಭೂಮಿತಿಯಲ್ಲಿ ಬದಲಾವಣೆ ಮಾಡಿಸಲು ಹವಣಿಸಿದರು. ತೋಟಗಾರರೂ ಇವರ ಜೊತೆ ಸೇರಿದರು.

ಲು ಸಾಧ್ಯವಾಗಿದೆ. ಆದರೂ ದುಷ್ಪಲಗಳಿಂದಾಗಿ ಬಡ ರೈ ಮಾರುವುದನ್ನು ತಪ್ಪಿಸಲಾ

ತಮಿಳುನಾಡು: ಮೀನಿನ ಕೃಷಿಗಾಗಿ ಕಂಪನಿಗ ಸುವುದರ ವಿರುದ್ಧ ಎಐಕೆ ರರ ಸಂಘಟನೆ ಹೋರಾಡು ವನ್ನು ಫಾಣುಗ್ರಂ ವಿವರಿಸಿ ತಳಹದಿ ವಿಶಾಲವಾಗುತ್ತಿದ ವಿಭಾಗದ ಜನ ನಮ್ಮ ಹ ಬರತೊಡಗಿದ್ದಾರೆ ಎಂದ

ಬಿಹಾರ: ಬಿಹಾ ಠಾಗೂರ್‌ರವರು ಆ ಕಾ ನವಿರೇಳಿಸುವ ರೀತಿಯಲ್ಲಿ ಜಿಲ್ಲೆಗಳ 35000 ಎಕರೆಗಳ



ಮತ್ತು ಪಂಜಾಬನ್ನು ಹೋಲಿಸಿ ಚುನಾವಣೆ ನಡೆಸುವ ಬಗ್ಗೆ ಹೇಳಿಕೆಗಳನ್ನಷ್ಟೇ ನೀಡುತ್ತಾ ಬಂತು. ಆದರೆ ಈ ನಡುವೆ ಒಂದು ಮಾತುಕತೆ ಅಗತ್ಯ ಎಂಬ ಅರಿವು ಮೂಡಿ ಚುನಾವಣೆ ನಡೆಸುವಂತಹ ಪರಿಸ್ಥಿತಿ ನಿರ್ಮಿಸುವ ಬಗ್ಗೆ ನ್ಯಾಶನಲ್ ಕಾನ್ಫರೆನ್ಸ್‌ನೊಂದಿಗೆ ಮಾತುಕತೆ ಆರಂಭವಾಯಿತು. ಜಾತ್ಯಾತೀತ ಪ್ರತಿಪಕ್ಷಗಳು ಇದಕ್ಕೆ ಬೆಂಬಲ ನೀಡಿದವು. ಐದು ಅಗತ್ಯ ಅಂಶಗಳನ್ನು ಅವರ ಗಮನಕ್ಕೆ ತಂದವು.

1. ಸಂವಿಧಾನದ 370ನೇ ಕಲಮು ಮುಂದುವರೆಯಬೇಕು
2. 1975ರ ಇಂದಿರಾ-ಶೇಖ್ ಅಬ್ದುಲ್ಲಾ ಒಪ್ಪಂದವನ್ನು ಜ್ಯಾರಿಗೊಳಿಸಬೇಕು
3. ಭಾರತ ಸರಕಾರ ಸಂವಿಧಾನದ ಚೌಕಟ್ಟಿನಲ್ಲಿ ಗರಿಷ್ಠ ಸ್ವಾಯತ್ತತೆ ನೀಡಲು ಮುಂದಾಗಿ ಮಾರ್ಚ್ ತಿಂಗಳಲ್ಲಿ ಪ್ರಧಾನ ಮಂತ್ರಿಗಳು ನೀಡಿದ ಭರವಸೆಯನ್ನು ಈಡೇರಿಸಬೇಕು

ಇಲ್ಲವಾದರೆ ಸುಧಾರಿಸಲೂ ಬಹುದು. ಈಗ ಅಫಘಾನಿಸ್ತಾನದ ಆಡಳಿತದ ವಿರುದ್ಧ ಸೆಣಸುತ್ತಿರುವ ಪಾಕ್ ಪ್ರೇರಿತ ತಾಲೀಬಾನನ್ನು ಕಾಶ್ಮೀರದತ್ತ ತಿರುಗಿಸಲೂ ಬಹುದು ಎಂಬ ಸಂಶಯವೂ ಇದೆ.

ರಾಷ್ಟ್ರಪತಿ ಆಳ್ವಿಕೆಯನ್ನು ಪದೇ ಪದೇ ವಿಸ್ತರಿಸಿ ಅಧಿಕಾರಶಾಹಿಗಳ ಸಹಾಯದಿಂದ ಆಡಳಿತ ನಡೆಸುವುದು ಜನಗಳ ಬೇಸರವನ್ನು ಇನ್ನಷ್ಟು ಹೆಚ್ಚಿಸಬಹುದಷ್ಟೇ. ಅಲ್ಲದೆ ಈಗಿನ ರಾಜ್ಯಪಾಲರ ಬಗ್ಗೆ ಕಾಂಗ್ರೆಸ್ಸಿನ ಒಂದು ವಿಭಾಗದಲ್ಲೂ ಅತೃಪ್ತಿಯಿದೆ. ರಾಜ್ಯಪಾಲರನ್ನು ಅವರ ಸಲಹೆಗಾರರನ್ನು ಬದಲಿಸಿ ಆಡಳಿತ ವ್ಯವಸ್ಥೆಯನ್ನು ಆಮೂಲಾಗ್ರ ಸರಿಪಡಿಸಬೇಕಾಗಿದೆ. ಇನ್ನೊಂದು ಸಂಗತಿ. ಡಿಸೆಂಬರ್ ತಿಂಗಳು ಚುನಾವಣೆಗೆ ಸೂಕ್ತವಲ್ಲ ಎಂಬುದು ಸರಿಯಲ್ಲ. ಕಾಶ್ಮೀರಿಗಳು ಚಳಿಗೆ ಹೊಂದಿಕೊಂಡಂತಹ ಜನ. ಅಲ್ಲದೆ ಈಗ

ಹರ್ಕಿಶನ್ ಸಿಂಗ್ ಸುರ್ಜಿತ್

4. ಕಾಶ್ಮೀರ ಕಣಿವೆಯಿಂದ ಹೊರಹೋಗಬೇಕಾಗಿ ಬಂದ ಜನಗಳಿಗೆ ಪುನರ್ವಸತಿ ಕ್ರಮಗಳನ್ನು ಆರಂಭಿಸಬೇಕು.
5. ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಪಡಿಸಬೇಕು, ನಿರುದ್ಯೋಗ ಪರಿಹಾರ ನೀಡಬೇಕು ಹಾಗೂ ಪ್ರವಾಸೋದ್ಯಮ ಮತ್ತು ಇತರ ಉದ್ದಿಮೆಗಳ ಪುನಶ್ಚೇತನಕ್ಕೆ ಕ್ರಮಗಳನ್ನು ಕೈಗೊಳ್ಳಬೇಕು.

ಈ ಪ್ರಸ್ತಾವಕ್ಕೆ ಕೂಡಾ ಸರಕಾರ ಸ್ಪಂದಿಸಿದ್ದು ಪ್ರಧಾನ ಮಂತ್ರಿಗಳು ಮೂರು ದೇಶಗಳ ಪ್ರವಾಸಕ್ಕೆ ಹೊರಡುವ ದಿನ ಮಾತ್ರ. ಆದರೆ ಸರಕಾರ ರಾಜಕೀಯ ಪಕ್ಷಗಳೊಡನೆ ಚರ್ಚಿಸದೆ ಈ ಪ್ರಸ್ತಾವವನ್ನಿಟ್ಟಿದ್ದರಿಂದ ಗೊಂದಲ ಉಂಟಾಗುವುದು ಸಹಜವೇ ಆಗಿತ್ತು. ಕೇಂದ್ರ ಮಂತ್ರಿಮಂಡಲ ಚುನಾವಣೆ ನಡೆಸಲು ನಿರ್ಧರಿಸಿ ಬೇರೆ ರಾಜ್ಯಗಳಿಂದ ಭದ್ರತಾ ಸಿಬ್ಬಂದಿಯನ್ನು ಕಲೆ ಹಾಕಲಾರಂಭಿಸಿತು. ಆದರೆ ನ್ಯಾಶನಲ್ ಕಾನ್ಫರೆನ್ಸ್‌ನ ಕಾರ್ಯಕಾರಿ ಸಮಿತಿ ಚುನಾವಣೆಯಲ್ಲಿ ಭಾಗವಹಿಸದಿರಲು ನಿರ್ಧರಿಸಿತು. ಈ ನಡುವೆ ಚುನಾವಣಾ ಆಯೋಗದ ಮೂವರೂ ಸದಸ್ಯರು ರಾಜ್ಯಕ್ಕೆ ಭೇಟಿ ನೀಡಿ ಪರಿಸ್ಥಿತಿ ಚುನಾವಣೆ ನಡೆಸಲು ಅನುಕೂಲವಿಲ್ಲವೆಂಬ ತೀರ್ಮಾನಕ್ಕೆ ಬಂದರು.

ಪ್ರಜಾಸತ್ತಾತ್ಮಕ ನಿಲುವು ಅಗತ್ಯ

ಈಗ ಪರಿಸ್ಥಿತಿ ಯಾವ ಸ್ವರೂಪವನ್ನು ಬೇಕಾದರೂ ಪಡೆಯಬಹುದು. ಪಾಕಿಸ್ತಾನದ ಗುಪ್ತಚರ ಸಂಸ್ಥೆ ಐಎಸ್‌ಐನ ಚಟುವಟಿಕೆ ಹೆಚ್ಚಿದರೆ ಪರಿಸ್ಥಿತಿ ಹದಗೆಡಲೂಬಹುದು,

ತೀವ್ರ ಹಿಮಪಾತದಿಂದ ಗಡಿಗಳು ಸೀಲಾಗಿರುವುದರಿಂದ ಗಡಿಯಾಚೆಯಿಂದ ಭಯೋತ್ಪಾದಕರು ತೂರಿ ಬರುವುದೂ ಕಷ್ಟ. ಜನಗಳ ಮನೋಭಾವನೆಯಲ್ಲಿ ಗಮನಾರ್ಹ ಬದಲಾವಣೆಯಾಗಿರುವುದರಿಂದ ಅವರನ್ನು ಚುನಾವಣೆಗೆ ಅಣಿಗೊಳಿಸಬಹುದಾಗಿತ್ತು. ಆದರೆ ಶತ್ರುವಿನ ಕಾರ್ಯತಂತ್ರದ ಬಗ್ಗೆ ಹೇಳುವುದು ಸಾಧ್ಯವಿಲ್ಲ.

ಒಟ್ಟಿನಲ್ಲಿ ಕಾಶ್ಮೀರದಲ್ಲಿ ಉಂಟಾಗಿರುವ ಅವ್ಯವಸ್ಥೆಗೆ ಕಾಂಗ್ರೆಸ್ ಮತ್ತು ಕೇಂದ್ರ ಸರಕಾರ ಮಾತ್ರವೇ ಹೊಣೆ ಎಂದರೆ ತಪ್ಪಲ್ಲ. ಈಗಲಾದರೂ ಸರಕಾರ ಪ್ರತಿಪಕ್ಷಗಳ ಜತೆ ಕೂತು ಸಮಸ್ಯೆಗೆ ಪರಿಹಾರ ಕಂಡು ಹಿಡಿಯುವ ಗಂಭೀರ ಪ್ರಯತ್ನ ನಡೆಸಬೇಕು. ಮುಖ್ಯವಾಗಿ ರಾಜಕೀಯ ಕ್ರಮಗಳ ಮೇಲೆ ಗಮನ ಕೇಂದ್ರೀಕರಿಸಬೇಕು. ಪ್ರಧಾನಿಗಳ ಹೇಳಿಕೆ ಒಂದು ಒಳ್ಳೆಯ ಲಾಭ. ಈ ಬಗ್ಗೆ ಕೇಳಿರುವ ಸ್ಪಷ್ಟೀಕರಣಗಳನ್ನೆಲ್ಲಾ ನೀಡಬೇಕು. ನ್ಯಾಶನಲ್ ಕಾನ್ಫರೆನ್ಸ್ ಕೂಡಾ 1953ರ ಮೊದಲ ಸ್ಥಾನಮಾನವನ್ನು ಮಾತ್ರ ಒಪ್ಪುತ್ತೇವೆಂಬ ಪೂರ್ವ ಶರತ್ತು ಹಾಕದೆ ಮುಂದೆ ಬರಬೇಕು. ಈ ಎಲ್ಲವನ್ನೂ ರಾಷ್ಟ್ರೀಯ ರಾಜಕೀಯ ಪಕ್ಷಗಳೊಂದಿಗೆ ಚರ್ಚಿಸಿ ಪರಿಹಾರ ಪಡೆಯಬಹುದು. ಏಕೆಂದರೆ ಈ ಪಕ್ಷಗಳು ಕೂಡಾ ಕಾಶ್ಮೀರಿ ಜನಗಳ ಸ್ವಂತಿಕೆ ರಕ್ಷಣೆಯ ಆಧಾರದಲ್ಲಿ ಸಮಸ್ಯೆಗೆ ಪರಿಹಾರ ಕಂಡುಹಿಡಿಯಲು ಕಾತುರರಾಗಿದ್ದಾರೆ. ಒಟ್ಟಿನಲ್ಲಿ ಅಮೇರಿಕಾ-ಪಾಕಿಸ್ತಾನದ ಕುತಂತ್ರಗಳನ್ನು ವಿಫಲಗೊಳಿಸಲು ಒಂದು ವಿಸ್ತೃತ ನೆಲೆಯ ಪ್ರಜಾಸತ್ತಾತ್ಮಕ ನಿಲುವು ಅಗತ್ಯ.

...ರ್ಥಿಕ ನೀತಿಯ
...ಭೂಮಿಯನ್ನು
...ದರು.
...ನಲ್ಲಿ ಸೀಗಡಿ
...ನನ್ನು ಖರೀದಿ
...ಕೃಷಿ ಕೂಲಿಕಾ
...ದ ಸಂದರ್ಭ
...ಹೋರಾಟದ
...ರರಂತ ಹೊಸ
...ಪ್ರಭಾವದಲ್ಲಿ
...ಯಕಾಂತ್
...ಹೋರಾಟ ಮೈ
...ರು. ಅಲ್ಲಿ 27
...ಎಸ್‌ನ ನೇತೃತ್ವ

ದಲ್ಲಿ ಕೃಷಿ ಕೂಲಿಕಾರರು ಹಿಡಿದುಕೊಂಡಿದ್ದಾರೆ. ಇದರ ಬಹುತೇಕ ಭಾಗ ಜಮೀನುದಾರರ ಕಬ್ಜದಲ್ಲಿತ್ತು. ಒಟ್ಟು ನಲವತ್ತೈವತ್ತು ಘರ್ಷಣೆಗಳು ಆಗಿವೆ. ಸುಮಾರು ನಲವತ್ತು ಸಂಗಾತಿಗಳು ಮಡಿದಿದ್ದಾರೆ. ಹಲವಾರು ಕಡೆ ಈ ಹೋರಾಟಕ್ಕೆ ಮಹಿಳೆಯರೂ ದುಮುಕಿದ್ದಾರೆ. ಸಿಪಿಐ ನೇತೃತ್ವದ ಎಐಕೆಎಸ್ ಭೂ ಹೋರಾಟದ ಮೊದಲಹಂತ ಮುಗಿದಿದೆ ಎಂದು ಘೋಷಿಸಿದ್ದರಿಂದ ಮತ್ತು ಸಿಪಿಐ(ಎಂಎಲ್) ಪೂರ್ತಿ ಜಮೀನನ್ನು ರಾಷ್ಟ್ರೀಕರಿಸಬೇಕೆಂಬ ಒತ್ತಾಯ ಮಾಡಿದ್ದರಿಂದ ಸ್ವಲ್ಪ ಮಟ್ಟಿಗೆ ಚಳುವಳಿ ವಿಚಲಿತವಾದರೂ ಸಂಘಟನೆ ಪ್ರಗತಿ ಸಾಧಿಸಲು ಸಾಧ್ಯವಾಯಿತು. ಬಿಹಾರದಲ್ಲಿ ಹೋರಾಟವನ್ನು ಬೆಳೆಸಲು ಸಾಕಷ್ಟು ಅವಕಾಶಗಳಿವೆ. ಯಾಕೆಂದರೆ ಇಲ್ಲಿ 46 ದೊಡ್ಡ ಜಮೀನುದಾರರು ಎರಡು ಲಕ್ಷ ಅರವತ್ತೊಂದು ಸಾವಿರ ಎಕರೆ ಜಮೀನನ್ನು ಹೊಂದಿದ್ದಾರೆ.

ಉತ್ತರಪ್ರದೇಶ, ಮಧ್ಯಪ್ರದೇಶ, ರಾಜಸ್ತಾನ: ಈ ಮೂರು ರಾಜ್ಯಗಳಲ್ಲಿ ಭೂ ಹೋರಾಟ ಮಾಡುವ ಅಗತ್ಯ ತೀವ್ರವಾಗಿ ಇದೆ ಎಂಬುದು ದೀನನಾಥ ಸಿಂಗ್(ಉ.ಪ್ರದೇಶ), ಎ.ಎನ್.ಮಿಶ್ರಾ (ಮ.ಪ್ರದೇಶ), ಮತ್ತು ದುಲಿಚಂದ್(ರಾಜಾಸ್ತಾನ್) ಇವರುಗಳ ವರದಿಗಳಿಂದ ಸ್ಪಷ್ಟವಾಯಿತು. ಈ ರಾಜ್ಯಗಳ ಗ್ರಾಮೀಣ ಪ್ರದೇಶಗಳಲ್ಲಿ ರೈತರ ಭೂಮಿಯನ್ನು ಕಸಿದುಕೊಂಡು ಅವರನ್ನು ದಿವಾಳಿಯೆಬ್ಬಿಸಲಾಗುತ್ತಿದೆ.

ಪಂಜಾಬ್ ಮತ್ತು ಹರಿಯಾಣ: ಈ ರಾಜ್ಯಗಳ ಪರವಾಗಿ ಅನುಕ್ರಮವಾಗಿ ಗುರುದೇವ್ ಸಿಂಗ್ ದರ್ದಿ ಮತ್ತು ಕೃಷ್ಣನ್ ಸ್ವರೂಪ್ ವರದಿ ನೀಡಿದರು. ಸಾಕಷ್ಟು ಬಂಡವಾಳಶಾಹಿ ಬೆಳವಣಿಗೆಗಳಾಗಿರುವ ಈ ರಾಜ್ಯಗಳಲ್ಲಿ ಹೊಸ ಆರ್ಥಿಕ ನೀತಿಗಳಿಂದಾಗಿ ಹೊಡುವಳಿಗಳ ಬೆಲೆಗಳು ಅಪಾರವಾಗಿ ಹೆಚ್ಚಿವೆ. ಇಲ್ಲಿ ನೆರೆ ಸಂರಕ್ಷಣಾ ಕ್ರಮಗಳು ಹೆಚ್ಚಬೇಕಾಗಿವೆ. ಈ ಎಲ್ಲಾ ಬೇಡಿಕೆಗಳಿಗಾಗಿ ಹೋರಾಟಗಳು ನಡೆದಿವೆ. ರಸಗೊಬ್ಬರ ವಿದ್ಯುತ್‌ಗಳ ಬೆಲೆ ಏರಿಕೆಯ ವಿರುದ್ಧ ಹೋರಾಟಗಳು ನಡೆದಿವೆ. ಹರಿಯಾಣದಲ್ಲಿ ಎಐಕೆಎಸ್ ಜೀತಕ್ಕಿದ್ದ ಹಲವು ಕುಟುಂಬಗಳನ್ನು ಬಿಡುಗಡೆ ಮಾಡಿಸಿದೆ. ಭಿವಾನಿ ಜಿಲ್ಲೆಯಲ್ಲಿ ರೈತ ಬಂಡಾಯವನ್ನು ಬೆಂಬಲಿಸಿತು. ಇಲ್ಲಿ ಪೋಲೀಸರ ಆಕ್ರಮಣದಿಂದ ಐದು ಜನ ರೈತರು ಸತ್ತರು.


ಸಮ್ಮೇಳನದ ಒಂದು ದೃಶ್ಯ


ಒಗ್ಗಟ್ಟಿನ ಅವಶ್ಯಕತೆ

ಈ ಎಲ್ಲಾ ಚರ್ಚೆಗಳ ಕೊನೆಗೆ ಸಿಪಿಐ(ಎಂ)ನ ಪ್ರಧಾನ ಕಾರ್ಯದರ್ಶಿಗಳಾದ ಹರ್ಕಿಶನ್ ಸಿಂಗ್ ಸುರ್ಜಿತ್ ಭಾಗವಹಿಸಿದ್ದ ಸಂಗಾತಿಗಳನ್ನು ಅವರ ಅಪಾರ ಅನುಭವಗಳಿಗಾಗಿ ಅಭಿನಂದಿಸಿದರು. ಹೊಸ ಆರ್ಥಿಕ ನೀತಿಯ ವಿರುದ್ಧ

ಪುಟ 6 ನೋಡಿ

ಪಾತಾಳಕ್ಕಿಳಿದಿರುವ ಶೇರು ಮಾರುಕಟ್ಟೆ

ಶೇರು ಹಗರಣದ ಕಾಲದಲ್ಲಿ ಶೇರುಗಳ ಬೆಲೆ ಏರುತ್ತಲೇ ಇರುವುದನ್ನು ನೋಡಿದವರಿಗೆ ಶೇರುಗಳನ್ನು ಕೊಂಡು ಕೆಲವೇ ದಿನಗಳಲ್ಲಿ ಕುಬೇರನಾಗುವ ಕನಸು ಕಂಡವರಿಗೆಲ್ಲಾ ಈಗಿನ ದಿನಗಳು ಬಹಳ ನಿರಾಶಾದಾಯಕವಾಗಿದೆ. ಗೂಳಿಯಂತೆ(ಬುಲ್) ಮೇಲೇರುತ್ತಿದ್ದ ಶೇರು ಬೆಲೆಗಳು ಈಗ ಕರಡಿ(ಬೇಯರ್) ಆಗಿ ಇಳಿಯುತ್ತಿವೆ. ದೇಶದ ಮುಖ್ಯ ಶೇರು ಮಾರುಕಟ್ಟೆಯಾದ ಮುಂಬಯಿ ಶೇರು ವಿನಿಮಯ ಕೇಂದ್ರದಲ್ಲಿ ಶೇರು ಸೂಚ್ಯಂಕ 3000ಕ್ಕಿಂತ ಕೆಳಗೆ ಇಳಿದಿದೆ. ಬಹುತೇಕ ಕಂಪನಿಗಳು ಸೆಪ್ಟಂಬರ್‌ಗೆ ಅಂತ್ಯಗೊಂಡ ಅರ್ಧ ವರ್ಷಕ್ಕೆ ಲಾಭ ಗಳಿಸಿದ್ದರೂ ಶೇರು ದರಗಳು ಏರಲೇ ಇಲ್ಲ.


ನರಸಿಂಹರಾವ್ ಸರಕಾರದ 54ನೇ ತಿಂಗಳಲ್ಲಿ

ಶೇರು ದರಗಳಿಗೂ ಕಂಪನಿಗಳ ಆದಾಯಕ್ಕೂ ಏನಾದರೂ ಸಂಬಂಧವಿದೆಯೇ ಎಂಬ ಪ್ರಶ್ನೆ ಕೇಳುವಂತಾಗಿದೆ. ಅಲ್ಪ ಸ್ವಲ್ಪ ಉಳಿತಾಯವನ್ನು ಶೇರು ಮಾರುಕಟ್ಟೆಯಲ್ಲಿ ತೊಡಗಿಸಿದ ಮಧ್ಯಮ ವರ್ಗದವರು ತಪ್ಪು ಮಾಡಿದೆವಲ್ಲಾ ಎಂದು ಹಪಹಪಿಸುತ್ತಿದ್ದಾರೆ.

ಶೇರು ಮಾರುಕಟ್ಟೆ ತಜ್ಞರು ಇಂದಿನ ಸ್ಥಿತಿಗೆ ಹಲವು ಕಾರಣಗಳನ್ನು ನೀಡುತ್ತಿದ್ದಾರೆ.ಒಂದು ವಿವರಣೆಯ ಪ್ರಕಾರ ಉದಾರೀಕರಣದಿಂದ ಹಲವು ಕಂಪನಿಗಳು ಪ್ರಾಥಮಿಕ ಶೇರು ಮಾರುಕಟ್ಟೆಯಿಂದ ಕಡಿಮೆ ಖರ್ಚಿನ ಬಂಡವಾಳ ಪಡೆಯಲು ಶೇರು ನೀಡಿದವು. ಇದರಿಂದ ಈ ಕಂಪನಿಗಳಲ್ಲಿ ಹಲವು ತರಹದ ಮೋಸ ಮಾಡಲು ಹವಣಿಸಿದವು. ಇದು ಮಾರುಕಟ್ಟೆಯ ಮೇಲೆ ದುಷ್ಪರಿಣಾಮ ಬೀರಿ ಮಾರುಕಟ್ಟೆಯಲ್ಲಿ ಇಳಿತ ಉಂಟಾಯಿತು.

ಇನ್ನೊಂದು ಅಭಿಪ್ರಾಯದ ಪ್ರಕಾರ ಮಾರುಕಟ್ಟೆಯಲ್ಲಿ ಈ ಸಾರಿ ಹಣಕಾಸಿನ ಅಭಾವ ಉಂಟಾಗಿರುವುದು. ಡಾಲರಿಗೆದುರು ರೂಪಾಯಿ ಅಪಮೌಲ್ಯೀಕರಣಗೊಳ್ಳುತ್ತಿರುವುದರಿಂದ ವಿದೇಶೀ ಹೂಡಿಕೆದಾರರು ಭಾರತದಲ್ಲಿ ಹಣ ಹೂಡಲು ಮುಂದೆ ಬರುತ್ತಿಲ್ಲ. ಯಾಕೆಂದರೆ ಅವರು ಡಾಲರಿನ ರೂಪದಲ್ಲಿ ಹೂಡಿಕೆ ತಂದರೂ ಅವರಿಗೆ ಪ್ರತಿಫಲ ರೂಪಾಯಿಗಳಲ್ಲಿ ದೊರೆಯುತ್ತದೆ. ಇದನ್ನು ಡಾಲರಿಗೆ ಪರಿವರ್ತಿಸಿದರೆ ಅದು ಕಡಿಮೆ ಆಗುವುದರಿಂದ ಅವರು ಹೂಡಲು ಮುಂದೆ ಬರುತಿಲ.

ಈಗ ಈ ಹಣಕಾಸು ಅಭಾವದಿಂದಾಗಿ ಮಾರುಕಟ್ಟೆಯಲ್ಲಿ ಹಣಕಾಸಿನ ಬಡ್ಡಿ ದರಗಳು ತೀವ್ರವಾಗಿ ಏರಿರುವುದರಿಂದ ಹಣವಿರುವ ಎಲ್ಲಾ ಹಣಕಾಸು ಸಂಸ್ಥೆಗಳು ಹಣವನ್ನು ಹಣಕಾಸು ಮಾರುಕಟ್ಟೆಯಲ್ಲಿ ತೊಡಗಿಸುತ್ತಿದ್ದಾರೆ. ಇದರಿಂದಾಗಿ ಶೇರು ಮಾರುಕಟ್ಟೆಗೆ ಹಣ ಹರಿದು ಬರುತ್ತಿಲ್ಲ.

ಇವೆಲ್ಲ ಶೇರು ಮಾರುಕಟ್ಟೆಯ ಇಳಿತಕ್ಕೆ ಕಾರಣವಾಗಿವೆ. ಉದಾರೀಕರಣದ ಮೂಲಕ ಪಕ್ಕಾ ಬಂಡವಾಳವಾದದತ್ತ ಹೋಗಲು ಹವಣಿಸುವ ನಮ್ಮ ಸರಕಾರಿ ತಜ್ಞರಿಗೆ ಆರ್ಥಿಕದ ಮೇಲೆ ಎಂತಹ ಹಿಡಿತ ಇದೆ ಎಂಬುದನ್ನು ಇದು ತೋರಿಸುತ್ತದೆ.

ಕುಸಿಯುತ್ತಿರುವ ವಿದೇಶೀ ವಿನಿಮಯ ಶಿಲ್ಕು

ಅಂತರ್ರಾಷ್ಟ್ರೀಯ ವ್ಯಾಪಾರಕ್ಕೆ ವಿದೇಶೀ ವಿನಿಮಯ ಶಿಲ್ಕು ಬಹಳ ಮುಖ್ಯ. 1991ರಲ್ಲಿ ವಿದೇಶೀ ವಿನಿಮಯ ಶಿಲ್ಕಿನ ತೀವ್ರ ಕೊರತೆಯುಂಟಾದ್ದರಿಂದ ಆ ಬಿಕ್ಕಟ್ಟನ್ನು ಪರಿಹರಿಸಲೇ ಐಎಂಎಫ್-ವಿಶ್ವಬ್ಯಾಂಕುಗಳಿಗೆ ಶರಣು ಹೋಗಿ ಅವುಗಳ ಶರತ್ತುಗಳನ್ನು ಒಪ್ಪಿಕೊಂಡು ಉದಾರೀಕರಣವನ್ನು ನರಸಿಂಹರಾಯರ ಸರಕಾರ ತಂದಿತು.

ಬ್ಯಾಂಕ್ ಫಂಡ್‌ಗಳು ಹೇರಿದ್ದ ಶರತ್ತುಗಳನ್ನೆಲ್ಲಾ ಜಾರಿಗೆ ತರತೊಡಗಿದ ಸರಕಾರ ಈ ಎರಡು ಸಂಸ್ಥೆಗಳಿಂದ ಅಪಾರ ಪ್ರಮಾಣದ ಸಾಲವನ್ನೂ ಪಡೆಯಿತು. ಹೇಗೇ ಇರಲಿ ಇಲ್ಲದ ಉದಾರೀಕರಣದಿಂದಾಗಿ ಕಳೆದ ವರ್ಷ ದೊಡ್ಡ ಪ್ರಮಾಣದಲ್ಲಿ ವಿದೇಶೀ ಹಣ ಹರಿದು ಬರತೊಡಗಿತು. ಅಂದು ಆಮದಿನ ಮೇಲೆ ಇಂದಿಗಿಂತ ಹೆಚ್ಚು ನಿಬಂಧನೆಗಳಿದ್ದವು. ಆದ್ದರಿಂದ ದೇಶದಲ್ಲಿ ವಿದೇಶೀ ವಿನಿಮಯದ ಶಿಲ್ಕು ಅಪಾರವಾಗಿ ಹೆಚ್ಚತೊಡಗಿತು. ಇದು ಬರೀ ಹಾಟ್ ಮನಿ ಅಂದರೆ ಸಟ್ಟಾ ವ್ಯವಹಾರಕ್ಕಾಗಿ ಬಂದದ್ದು. ಸಟ್ಟಾ ವ್ಯವಹಾರದಲ್ಲಿ ಲಾಭ ಇಲ್ಲದೇ ಹೋದರೆ ಈ ಹಣ ಹಾಗೆ ವಾಪಸ್ಸು ಹೋಗುವಂತಹದ್ದು.

ಆದರೆ ಈ ವರ್ಷದಲ್ಲಿ ಈ ವಿದೇಶೀ ವಿನಿಮಯದ ಪರಿಸ್ಥಿತಿ ಬೇರೆಯೇ ಇದೆ. ಡಾಲರಿಗೆದುರಾಗಿ ರೂಪಾಯಿಯ ಬೆಲೆ ಕುಸಿಯುತ್ತಿರುವುದರಿಂದ ವಿದೇಶೀ ಹೂಡಿಕೆದಾರರು ಹಣ ಹೂಡಲು ಮುಂದೆ ಬರುತ್ತಿಲ್ಲ.

ಇದಲ್ಲದೆ ಆಮದಿನ ಮೇಲೆ ಇದ್ದ ಹಲವು ನಿಬಂಧನೆಗಳನ್ನು ತೆಗೆದು ಹಾಕುವುದರಿಂದ ಈ ಸಾರಿ ಆಮದು ತೀವ್ರವಾಗಿ ಏರಿದೆಯಂತೆ. ಕಳೆದ ವರ್ಷ ಈ ದಿನಗಳಲ್ಲಿ 20809 ದಶಲಕ್ಷ ಡಾಲರುಗಳಷ್ಟು ವಿದೇಶೀ ವಿನಿಮಯ ಶಿಲ್ಕು ಇದ್ದದ್ದು ಈ ಸಾರಿ 17757 ದಶಲಕ್ಷ ಡಾಲರುಗಳಷ್ಟಿದೆ. ಇದಕ್ಕೆ ಇನ್ನೊಂದು ಕಾರಣ ಕಳೆದ ವರ್ಷ ನಿವ್ವಳ ವಿದೇಶೀ ಧನ ಸಹಾಯ 1063 ಕೋಟಿ ರೂಪಾಯಿಗಳಿದ್ದದ್ದು ಈ ಸಾರಿ ಬರೀ 577 ಕೋಟಿ ರೂಪಾಯಿಗಳಷ್ಟು ಮಾತ್ರವಿದೆ.

ಇಷ್ಟೊಂದು ಉದಾರೀಕರಣ ಮಾಡಿದ ಮೇಲೂ ವಿದೇಶೀ ವಿನಿಮಯದ ಶಿಲ್ಕಿನ ಪರಿಸ್ಥಿತಿ ಹೀಗೆ ಏರುಪೇರಾಗುತ್ತಾ ಇರುವುದಾದರೆ ಉದಾರೀಕರಣವಾದರೂ ಏತಕ್ಕೆ? ಇದು ನರಸಿಂಹರಾಯರ ಸರಕಾರ ಉತ್ತರಿಸಬೇಕಾದ ಪ್ರಶ್ನೆ.

ಹಣಕಾಸು ಕೊರತೆ ಭೂತ

ಐಎಂಎಫ್‌ನ ಭಾರತದ ಮೇಲಿನ ವರದಿ ಭಾರತ ಸರಕಾರದ ಹಣಕಾಸು ಕೊರತೆಯ ಬಗ್ಗೆ ಸರಕಾರ ಅದನ್ನು ಕಡಿಮೆ ಮಾಡಲು ವಿಫಲವಾದದ್ದರ ಬಗ್ಗೆ ತೀವ್ರ ಟೀಕೆ ಮಾಡಿದೆ. ಒಟ್ಟುತ್ಪಾದನೆಯ ಶೇ. 55ಕ್ಕೆ ಈ ಕೊರತೆಯನ್ನು ಇಳಿಸುವಲ್ಲಿ ಕೇಂದ್ರ ಸರಕಾರ ವಿಫಲವಾಗಿದೆ. ಇದರಿಂದಾಗಿ ಕೇಂದ್ರ ಸರಕಾರ ಮಾರುಕಟ್ಟೆಯಿಂದ ಸಾಲ ಪಡೆಯುತ್ತಿದೆ. ಈ ಸಾಲದ ಮೇಲೆ ಬಡ್ಡಿ ನೀಡುವುದರಿಂದಲೇ ಈ ಕೊರತೆ ಇನ್ನಷ್ಟು ಹೆಚ್ಚುತ್ತದೆ. ಹೀಗೆ ಇದೊಂದು ವಿಷ ವರ್ತುಲವಾಗಿ ಸರಕಾರಕ್ಕೆ ತಲೆನೋವಿನ ವಿಷಯವಾಗಿ ಹೋಗಿದೆ.

ಐಎಂಎಫ್ ತನ್ನ ಒತ್ತಡವನ್ನು ಇನ್ನೂ ಹೇರುತ್ತಲೇ ಇದೆ.ಈಗ ಐಎಂಎಫ್ ಎಂಬ ಧಣಿ ಹೇಳಿದಂತೆ ಕೇಳಬೇಕಾದ ಸ್ಥಿತಿ ಕೇಂದ್ರ ಸರಕಾರದ್ದು. ಮುಂಬರುವ ವರ್ಷಗಳಲ್ಲಿ ಬಜೆಟ್ಟಿನಲ್ಲಿ ಹೆಚ್ಚಿನ ಆದಾಯವನ್ನು ಕ್ರೋಢೀಕರಿಸಬೇಕು ಎಂಬುದು ಇಂತಹ ಒಂದು ಒತ್ತಾಯ, ಇದನ್ನು ಸಾಧಿಸಲು ಹೆಚ್ಚೆಚ್ಚು ಜನ ತೆರಿಗೆಯ ಬಲೆಯಲ್ಲಿ ಬರುವಂತೆ ಮಾಡಬೇಕು.

ಇದನ್ನು ನಮ್ಮ ಸರಕಾರ ಹೇಗೆ ಮಾಡುತ್ತದೆ. ಕಪ್ಪು ಹಣವನ್ನು ಹೊರಗೆಳೆದು ಅವರಿಗೆ ಸರಿಯಾದ ಶಿಕ್ಷೆ ನೀಡಿ ಅವರ ಹಣವನ್ನು ಹೊರಗೆಳೆಯುವುದರಿಂದಂತೂ ಅಲ್ಲ. ಬದಲಿಗೆ ಸರಕಾರದ ವಿಧಾನ ಇದು. ಹೆಚ್ಚೆಚ್ಚು ಬಡವರ ಮೇಲೆ ಹೊರೆಯಾಗುವಂತಹ ತೆರಿಗೆಗಳನ್ನು ಹೇರುವುದು ಅಥವಾ ಬಡವರು ಬಳಸುವ ವಸ್ತುಗಳ ಮೇಲೆ ತೆರಿಗೆ ಹೇರುವುದು. ಸಹಾಯ ಧನಗಳಲ್ಲಿ ಹೆಚ್ಚು ಕಡಿತ ಉಂಟು ಮಾಡುವುದು ಇತ್ಯಾದಿ.

ಈಗ ಐಎಂಎಫ್‌ನ ಶರತ್ತುಗಳ ಒತ್ತಡ ಹೆಚ್ಚುತ್ತಾದ್ದರಿಂದ ಈ ದೇಶದ ಬಡ ಜನ ಇನ್ನೂ ಹೆಚ್ಚಿನ ನೋವು ಅನುಭವಿಸಲು ಸಿದ್ಧರಾಗಬೇಕೆಂಬುದೇ ಅದರ ಅಥವಾ ಅದೇ ಉದಾರೀಕರಣ.

ಕರ್ನಾಟಕದಲ್ಲಿ ಕತ್ತಲೆಯ ಭೂತ

ಈಗ ಕರ್ನಾಟಕದ ತುಂಬೆಲ್ಲಾ ಕತ್ತಲೆಯ ಭೂತ ಕಾಡತೊಡಗಿದೆ. ಕಾರಣ ವಿದ್ಯುತ್ ಅಭಾವ. ವಿದ್ಯುತ್ ಅಭಾವದಿಂದ ರಾಜ್ಯದಾದ್ಯಂತ ಕತ್ತಲೆ. ಬರೀ ಕತ್ತಲೆ ಬೆಳಕಿನ ಕತ್ತಲೆ ಅಲ್ಲ ಆರ್ಥಿಕ ಕತ್ತಲೆಯೂ ಹೌದು. ಯಾಕೆಂದರೆ ಫ್ಯಾಕ್ಟರಿಗಳು ಪಂಪ್‌ಸೆಟ್ಟುಗಳು ಯಾವುವೂ ನಿರಂತರವಾಗಿ ಓಡುವಂತಿಲ್ಲ.

ಇಂದಿನ ಈ ಪರಿಸ್ಥಿತಿಗೆ ರಾಜ್ಯದಲ್ಲಿ ಅಧಿಕಾರದಲ್ಲಿದ್ದ ಹಿಂದಿನ ಇಂದಿನ ಸರಕಾರಗಳೇ ಜವಾಬ್ದಾರರೇನೋ ಹೌದು. ಅದಕ್ಕಿಂತ ಹೆಚ್ಚಿನ ಜವಾಬ್ದಾರಿ ಕೇಂದ್ರ ಸರಕಾರದ್ದು. ಯಾಕೆಂದರೆ ವಿದ್ಯುತ್ ಯೋಜನೆಗಳು ಸಾಮಾನ್ಯವಾಗಿ ಬೃಹತ್ ಯೋಜನೆಗಳಾದ್ದರಿಂದ ಅವುಗಳಿಗೆ ಹಣ ಒದಗಿಸುವ ಕೆಲಸವನ್ನು ಮಾಡಬೇಕಾಗಿತ್ತು.

ಆದರೆ ರಾಜ್ಯ ಸರಕಾರಗಳೂ ತಮ್ಮ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವಂತಿಲ್ಲ. ಪಶ್ಚಿಮ ಬಂಗಾಳ ಸರಕಾರ ಕೇಂದ್ರದ ಅಸಹಕಾರವಿದ್ದಾಗ್ಯೂ ತನ್ನ ಕೈಯಲ್ಲಿ ಸಾಧ್ಯವಾದಷ್ಟನ್ನು ಪ್ರತಿವರ್ಷವೂ ವಿದ್ಯುತ್ ಉತ್ಪಾದನೆಗೆ ವಿನಿಯೋಗಿಸಿದ್ದರಿಂದ ಇಂದು ವಿದ್ಯುತ್ತಿನ ಅತೀವ ಅಭಾವದ ರಾಜ್ಯವಾಗಿದ್ದ ಪ.ಬಂಗಾಳ ಆ ಅಭಾವದಿಂದ ಹೊರಬಂದಿದೆ. ಆದರೆ ಕರ್ನಾಟಕ ಈ ಅಭಾವ ಪರಿಸ್ಥಿತಿಗೆ ಬಂದು ರಾಜ್ಯದ ಒಟ್ಟು ಆರ್ಥಿಕವನ್ನೇ ಹಾಳುಗೆಡವಿಕೊಳ್ಳುತ್ತಿವೆ. ಬೂರ್ಜ್ವಾ ಪಕ್ಷಗಳ ಸರಕಾರಗಳಿಗೂ ಎಡರಂಗ ಸರಕಾರಗಳಿಗೂ ಇರುವ ಮುಖ್ಯ ವ್ಯತ್ಯಾಸವೇ ಇದು: ಅವುಗಳ ಮನೋವೃತ್ತಿ.



ಪುರಿಯಲ್ಲಿ ಭೀಕರ ಗೋಲೀಬಾರು:

ಜವಾಬ್ದಾರಿಯ ಭಾವನೆಯೇ ಕಾಣದ ಕಾಂಗ್ರೆ ಸರಕಾರ

ನವಂಬರ್ 19. ಒರಿಸ್ಸಾದ ಪುರಿ ಜಗನ್ನಾಥ್ ದೇವಸ್ಥಾನದ ಎದುರು ಸಮುದ್ರ ಚಿಪ್ಪುಗಳ ಹಾರವನ್ನು ಪ್ರವಾಸಿಗರಿಗೆ ಮಾರುತ್ತಿದ್ದ ಹದಿನೆಂಟರ ಹರೆಯದ ಹುಡುಗ ಪ್ರಸನ್ನ ಕಾಂಗ್ರೆ ರಾಜ್ಯ ಸರಕಾರದ ಪೋಲೀಸರ ಗುಂಡಿಗೆ ಬಲಿಯಾದ. ಕೇವಲ ಹಿಂದಿನ ದಿನವಷ್ಟೇ ಕಲ್ಕತ್ತಾದ ಬೀದಿಗಳಲ್ಲಿ ಡಿವೈಎಫ್ಐ ಮೆರವಣಿಗೆಯಲ್ಲಿ ಲಕ್ಷಾಂತರ ಯುವ ಜನರ ಜತೆಗೆ ಭವ್ಯ ಭಾರತದ ನಿರ್ಮಾಣದ ಘೋಷಣೆ ಕೂಗಿದ್ದ ಆತ. ಮರುದಿನವೇ ತನ್ನ ದನಿಯನ್ನು ಹೇಗೆ ಅಡಗಿಸಲಾಗುತ್ತದೆ ಎಂದು ಊಹಿಸಲೂ ಸಾಧ್ಯವಿಲ್ಲ. ಆದರೆ ಜೆ.ಬಿ. ಪಟ್ನಾಯಕರ ಒರಿಸ್ಸಾದಲ್ಲಿ ಅದು ನಿಜವಾಯಿತು. ಪ್ರಸನ್ನರಷ್ಟೇ ಅಲ್ಲ, ಇನ್ನೂ ಮೂವರು ಯುವಜನರು-ಅವರಲ್ಲಿ ಒಬ್ಬ ಮೆಕ್ಯಾನಿಕ್, ಇನ್ನೊಬ್ಬ ಫುಟಪಾತನಲ್ಲಿ ತರಕಾರಿ ಮಾರವವ.

ಒರಿಸ್ಸಾದ ಮುಖ್ಯಮಂತ್ರಿ ಜೆ.ಬಿ.ಪಟ್ನಾಯಕ್ ಹತ್ತಿರದಲ್ಲಿದ್ದ ಲಕ್ಷುರಿ ಹೋಟೆಲಿನಲ್ಲಿ ನಡೆಯಲಿದ್ದ ಒಂದು ಯುನಿಸೆಫ್ ಸಭೆಗೆ ಹೋಗಬೇಕಾಗಿತ್ತು. ನವಂಬರ್ 19ರ ಮುಂಜಾನೆ ಭಕ್ತರು, ಪ್ರವಾಸಿಗರು ಹಾಗೂ ನೂರಾರು ಅಂಗಡಿಯೆದುರು ಹಾಗೂ ಬೀದಿಗಳಲ್ಲಿ ತಮ್ಮ ಸರಕುಗಳನ್ನು ಮಾರಿ ಜೀವನ ನಡೆಸುವವರಿಂದ ತುಂಬಿದ್ದ ಸಮಯ ಇದ್ದಕ್ಕಿದ್ದಂತೆ ಪೋಲೀಸರು ಮುಖ್ಯಮಂತ್ರಿಗಳ ಸವಾರಿಗೆ ದಾರಿ ಮಾಡಿಕೊಡಲು ಯಾವುದೇ ಮುನ್ಸೂಚನೆಯಿಲ್ಲದೆ ಜನಗಳನ್ನು ಅತ್ತಿತ್ತ ತಳ್ಳಲಾರಂಭಿಸಿದರು. ಈ ನೂಕುನುಗ್ಗಲಿನಲ್ಲಿ ಒಂದು ಖಾಸಗಿ ಬಸಗೆ ಸಿಲುಕಿ ಐದು ವರ್ಷದ ಬಾಲಕನೊಬ್ಬ ಜಜ್ಜಿ ಹೋದ. ಇದನ್ನು ಕಂಡು ಸಿಟ್ಟಿಗೆದ್ದ ಜನ ಬಸ್ಸನ್ನು ಸುಟ್ಟು ಹಾಕಿದರು. ಆ ದಾರಿಯಲ್ಲಿ ಹಾದಿ ಹೋಗಲಿದ್ದ ಮುಖ್ಯಮಂತ್ರಿಗಳು ಈ ಹೃದಯವಿದ್ರಾವಕ ಘಟನೆಯ ಬಗ್ಗೆ ಸ್ವಲ್ಪಹೊತ್ತು ನಿಂತು ಸಹಾನುಭೂತಿ ತೋರಿಸಿಯಾದರೂ ಹೋಗಬಹುದು ಎಂದು ಜನ ನಿರೀಕ್ಷಿಸಿದ್ದರು.

ಆದರೆ ಬಹುಶಃ ಒಬ್ಬ ಕಾಂಗ್ರೆಸ್ ಮುಖ್ಯಮಂತ್ರಿಯಿಂದ ಇಂತಹ ಮಾನವೀಯತೆ ನಿರೀಕ್ಷಿಸುವುದೇ ತಪ್ಪು. ಡಿವೈಎಫ್ಐ ಕಾರ್ಯಕರ್ತ ಕಾಂ. ಪ್ರಸನ್ನ ನಾಯಕ್ ಜನಗಳ ಈ ಬೇಡಿಕೆಗಳ ಬಗ್ಗೆ ಪೋಲೀಸ್ ಸೂಪರಿಂಟೆಂಡೆಂಟರೊಂದಿಗೆ ವಾದ ಮಾಡುತ್ತಿದ್ದಂತೆಯೇ ಮುಖ್ಯಮಂತ್ರಿಗಳ ಸವಾರಿ ಧಾವಿಸಿ ಬಂತು, ಜನಗಳ ಮಧ್ಯೆಯಿಂದ ಧಾವಿಸಿ ಹೋಯಿತು. ಒಬ್ಬ ಭದ್ರತಾ ಸಿಬ್ಬಂದಿ ಗುಂಡು ಹಾರಿಸಿದ. ಕಾಮ್ರೇಡ್ ಪ್ರಸನ್ನ ಸ್ಥಳದಲ್ಲಿಯೇ ಕೊಲೆಯಾದ. ಸ್ವಲ್ಪದೂರದಲ್ಲೇ ಇನ್ನೊಬ್ಬ ಹುಡುಗ ಕೃಷ್ಣ ಸಮಂತೆ ಸತ್ತು ಬಿದ್ದ - ಯಾವುದೇ ಮುನ್ನೆಚ್ಚರಿಕೆ, ಲಾಠಿ ಚಾರ್ಜ್ ನಡೆಸದೇ ಪೋಲೀಸರು ಹಾರಿಸಿದ ಗುಂಡಿಗೆ ಬಲಿಯಾದ. ಟೈಲರ್ ಅಂಗಡಿಗೆ ಬಂದಿದ್ದ ಇದ್ದಕ್ಕಿದ್ದಂತೆ ಪೋಲೀಸರ ಹಾರಾಟ ಕಂಡು ಬೆದರಿಕೆಯಿಂದ ಕೈಯೆತ್ತಿ ನಿಂತ ಪೋಲೀಸರು ಅವನಿಗೆ ಗುರಿಯಿಟ್ಟು ಹೊಡೆದು ಹೆಣವನ್ನು ದರದರನೇ ಪೋಲೀಸ್ ಸ್ಟೇಷನಗೆ ಎಳೆದೊಯ್ದರು. ಹಾಗೆ ಎಳೆದೊಯ್ಯುವಾಗಲೇ ಆತ ಅಸು ನೀಗಿದ. ಪೋಲೀಸ್ ಸ್ಟೇಷನ್ನಿನ ಆಚೆಕಡೆಯಲ್ಲಿ ಈ ಹುಡುಗನ ದೇಹವನ್ನು ಕಾಪಾಡಲು ಸ್ಥಳೀಯ ಜನತಾದಳ ಎಂಎಲ್ಎಯೊಂದಿಗೆ ಶಾಂತಿಯುತವಾಗಿ ಸಾಗಿದ್ದ ತರಕಾರಿ ಮಾರುವ ಬುಧಿನಾಥ್ ಸಾಹುವನ್ನೂ ಪೋಲೀಸರು ಗುಂಡಿಟ್ಟು ಕೊಂದರು. ಸ್ವಲ್ಪ ದೂರದಲ್ಲೇ ಒಬ್ಬ ಹೋಟೆಲ್ ಕಾರ್ಮಿಕ ಸನ್ಯಾಸ್ ದಾಸನ ಕೊಲೆಯಾಗಿದ್ದ. ಇಡೀ ಎರಡು ಕಿಲೋಮೀಟರ್ ದಾರಿ ಎಲ್ಲೆಲ್ಲೂ ರಕ್ತದ ಕಲೆಗಳಿಂದ ತುಂಬಿ ಹೋಗಿತ್ತು.

ಇದು ನವಂಬರ್ 19ರಂದು ಪುರಿಯಲ್ಲಿ ನಡೆದ ಅಮಾನುಷ ಘಟನೆಯ ಬಗ್ಗೆ ಸಿಪಿಐ(ಎಂ) ಸಂಸತ್ ಸದಸ್ಯ ಹನ್ನನ್ ಮೊಲ್ಲಾ ನೀಡಿರುವ ವರದಿ. ಅದೇ ರಾಜ್ಯದ ಕಟಕನಲ್ಲಿ ಎಐಕೆಎಸ್ ಸಮ್ಮೇಳನದಲ್ಲಿ ಭಾಗವಹಿಸಲಿಕ್ಕಾಗಿ ಬಂದಿದ್ದ ಹನ್ನನ್ ಮೊಲ್ಲಾ ಈ ಭೀಕರ ಘಟನೆಯ ಸುದ್ದಿ ಕೇಳಿ ಪುರಿಗೆ ಧಾವಿಸಿದರು. ಜತೆಗೆ ಇನ್ನಿಬ್ಬರು ಸಿಪಿಐ(ಎಂ) ಸಂಸತ್ ಸದಸ್ಯರಾದ ಶಿವಾಜಿ ಪಟ್ನಾಯಕ್ ಮತ್ತು ಬಿಪ್ಲವ್ ದಾಸ್ ಗುಪ್ತಾ ಇದ್ದರು. ಪೋಲೀಸರು ಘಟನೆ ನಡೆದ ಸ್ಥಳಕ್ಕೇ ಹೋಗಬೇಡಿ ಎಂದರು. ಆದರೆ ಸಿಪಿಐ(ಎಂ) ಎಂಪಿಗಳು ಹೋಗಿಯೇ ಹೋಗುತ್ತೇವೆ ಎಂದರು. ಮೊದಲು ಮಗು ಜಜ್ಜಿ ಹೋದ ಜಾಗಕ್ಕೆ ತಲುಪಿದಾಗ ನೂರಾರು ಜನರು ಬಂದು ಈ ಭೀಕರ ಘಟನೆಯ ಬಗ್ಗೆ ತಮ್ಮ ನೋವನ್ನು ವ್ಯಕ್ತಪಡಿಸಿದರು. ಆ ವೇಳೆಗೆ ಸಿಪಿಐ(ಎಂ), ಸಿಪಿಐ ಹಾಗೂ ಜನತಾದಳ ಹಾಗೂ ಎಸಜೆಪಿ ಕರೆಯ ಮೇರೆಗೆ ಪುರಿ ಬಂದ್ ನಡೆಯುತ್ತಿದ್ದು, ಅಂಗಡಿಗಳೆಲ್ಲಾ ಮುಚ್ಚಿದ್ದವು. ಉಳಿದ ಮೂವರು ಪೋಲೀಸರ ಗುಂಡಿಗೆ ಬಲಿಯಾದ ಸ್ಥಳಗಳನ್ನು ನೋಡಿದ ಮೇಲೆ ಸಿಪಿಐ(ಎಂ) ಸಂಸತ್ ಸದಸ್ಯರ ತಂಡ ಆಸ್ಪತ್ರೆಗೆ ಹೋಯಿತು. ಅಲ್ಲಿ ಗುಂಡಿನೇಟಿನಿಂದ ಗಾಯಗೊಂಡಿದ್ದವರು ಹಲವರು. ಒಟ್ಟಿಗೆ 14 ಜನರಿಗೆ ಗುಂಡಿನೇಟು ಬಿತ್ತು. ಅವರಲ್ಲಿ ನಾಲ್ವರು ಅಸು ನೀಗಿದರು. ಉಳಿದ 10 ಮಂದಿ ಆಸ್ಪತ್ರೆಯಲ್ಲಿದ್ದಾರೆ. ಅವರಲ್ಲಿ ಒಬ್ಬ ಟಿನ್ ಬಾಕ್ಸ್ ಮಾರುವಾತ, ಇನ್ನೊಬ್ಬ ಪಾನವಾಲಾ, ಮತ್ತೊಬ್ಬ ಪೂಜಾರಿ, ಹೀಗೆ ಕಾಂಗ್ರೆ ರಾಜ್ಯ ಸರಕಾರದ ಪೋಲೀಸರಿಗೆ ಬಂದೂಕುಗಳು ಆಟಿಕೆಗಳಾಗಿದ್ದಂತಿತ್ತು. ಈ ಕಾಂಗ್ರೆ ಮುಖ್ಯಮಂತ್ರಿಗೆ ದಾರಿಬದಿಯಲ್ಲಿ ಬಿದ್ದಿರುವ ಮಗುವಿನ ಹೆಣವ ಪಕ್ಕದಿಂದ ಹಾದು ಹೋಗುವಾಗ ಏನೂ ಅನಿಸಲಿಲ್ಲವೇ ಅಥವಾ ಜನಗಳನ್ನು ಎದುರಿಸುವ ಧೈರ್ಯ ಆತನಲ್ಲಿಲ್ಲವೇ ಎಂದು ಘಟನೆ ನಡೆದ ಸ್ಥಳವನ್ನು ಕಣ್ಣಾರೆ ಕಂಡ ಜನಗಳ ಅಹವಾಲುಗಳನ್ನು ಕಿವಿಯಾರೆ ಕೇಳಿದ ಹನ್ನನ್ ಮೊಲ್ಲಾ ಪ್ರಶ್ನಿಸಿದ್ದಾರೆ. ದಪ್ಪ ಚರ್ಮ ಬೆಳೆಸಿಕೊಂಡ ಜನವಿರೋಧಿ ಸರಕಾರದ ಪೋಲೀಸ್ ಪಡೆ ಕೇವಲ ಅನಾಗರಿಕ, ರಕ್ಕಸ ಪಡೆಯಾಗಿ ಬಿಟ್ಟಿರಬೇಕು, ಅವರ ಬಳಿ ಜನಸಾಮಾನ್ಯರ ಬಗ್ಗೆ ತುಸುವಾರೂ ಆತಂಕವನ್ನು ಬಹುಶಃ ನಿರೀಕ್ಷಿಸಲಾಗದು.

ಸಿಪಿಐ(ಎಂ) ಎಂಪಿಗಳ ತಂಡ ನಂತರ ಕಾಮ್ರೇಡ್ ಪ್ರಸನ್ನನಾಯಕನ ಮನೆಗೆ ಹೋಗಿ ಆತನ ಅಜ್ಜನನ್ನು ಕಂಡು ಸಂತೈಸಿತು. ಪ್ರಸನ್ನ ತನ್ನ ಅಕ್ಕನೊಂದಿಗೆ ಈ ನಗರದಲ್ಲಿ ವಾಸಿಸುತ್ತಿದ್ದು ದೇವಸ್ಥಾನದೆದುರು ಚಿಪ್ಪುಗಳ ಹಾರಗಳನ್ನು ಮಾರುತ್ತಾ ಜೀವನ ನಡೆಸುತ್ತಿದ್ದ ಜತೆಗೆ ಡಿವೈಎಫ್ಐನಲ್ಲಿ ಸಕ್ರಿಯನಾಗಿದ್ದ ಬಾಲಕ.

ಸಿಪಿಐ(ಎಂ) ಎಂಪಿಗಳ ತಂಡ ಈ ಅಮಾನುಷ ಕೊಲೆಗಳನ್ನು ಖಂಡಿಸಿ ಹೈಕೋರ್ಟ್ ನ್ಯಾಯಾಧೀಶರಿಂದ ತನಿಖೆ ನಡೆಸಬೇಕು, ಪೋಲೀಸು ಗುಂಡೇಟಿನಿಂದ ಸತ್ತ, ಗಾಯಗೊಂಡ ಜನಗಳ ಕುಟುಂಬಗಳಿಗೆ ಪರಿಹಾರ ಕೊಡಬೇಕೆಂದು ಒತ್ತಾಯಿಸಿದೆ. ಸ್ವಲ್ಪ ತಾಳ್ಮೆ ಹಾಗೂ ಸಹಾನುಭೂತಿಯಿಂದ ವರ್ತಿಸಿದ್ದರೆ ಈ ದುರ್ಘಟನೆ ನಡೆಯುತ್ತಲೇ ಇರಲಿಲ್ಲ, ಆದರೆ ಕಾಂಗ್ರೆ ಸರಕಾರಕ್ಕೆ ಜವಾಬ್ದಾರಿಯ ಭಾವನೆ ಕೂಡಾ ಇದಂತಿಲ್ಲ ಎಂದು ಹನ್ನನ್ ಮೊಲ್ಲಾ ಖೇದ ವ್ಯಕ್ತಪಡಿಸಿದ್ದಾರೆ.

(ಐ.ಎನ್.ಎಸ್)

ಬಂಗಾಳ: ಮಮತಾರ ಹೋರಾಟದಿಂದ ಕಾಂಗ್ರೆಗೇ ತೊಂದರೆ!

ಪಶ್ಚಿಮ ಬಂಗಾಳದ ಯುವ ಕಾಂಗ್ರೆ ಮುಖಂಡೆ ಮಮತಾ ಬ್ಯಾನರ್ಜಿಯವರ 21 ದಿನಗಳ ಧರಣಿ ನವಂಬರ್ 26ರಂದು ಮುಗಿಯಿತು. "ಈ ಧರಣಿಯಿಂದ ಕಕ್ಕಾಬಿಕ್ಕಿಯಾದದ್ದು ಮುಖ್ಯಮಂತ್ರಿ ಜ್ಯೋತಿ ಬಸುರವರಲ್ಲ, ಪ್ರದೇಶ ಕಾಂಗ್ರೆ ಅಧ್ಯಕ್ಷ ಸೋಮೇನ್ ಮಿತ್ರಾಗೆ" ಎಂದು ಕಮ್ಯುನಿಸ್ಟರ ಬಗ್ಗೆ ಪ್ರೀತಿಯೆಂಬುದು ಎಂದೂ ಇಲ್ಲದ ಬೂರ್ಜ್ವಾ ಪತ್ರಿಕೆಯೊಂದು ವರ್ಣಿಸಿದೆ.

ಪಶ್ಚಿಮ ಬಂಗಾಳದಲ್ಲಿ ಪೋಲೀಸ್ ಕಸ್ಟಡಿಯಲ್ಲಿ ಸಾಯುವ ಜನಗಳ ಕುಟುಂಬದ ಸದಸ್ಯರಿಗೆ ಕೆಲಸ ಹಾಗೂ ಸಾಕಷ್ಟು ಪರಿಹಾರ ಕೊಡಬೇಕು ಎಂದು ಒತ್ತಾಯಿಸಿ ಮಮತಾ ಬ್ಯಾನರ್ಜಿ ಧರಣಿ ಆರಂಭಿಸಿದ್ದರು. ಆದರೆ ದಿನಕಳೆದಂತೆ ಧರಣಿಗೆ ಇದ್ದ ಅಲ್ಪಸ್ವಲ್ಪ ಬೆಂಬಲವೂ ಕ್ಷೀಣವಾಗುತ್ತಾ ಸಾಗಿದ್ದನ್ನು ಕಂಡು ಹೇಗಾದರೂ ಮುಖ ಉಳಿಸಿಕೊಳ್ಳುವ ಪ್ರಯತ್ನ ನಡೆಯಿತು. ಪ್ರಧಾನ ಮಂತ್ರಿಗಳಿಗೆ ಮಧ್ಯಪ್ರವೇಶಿಸಬೇಕೆಂದು ಗೋಗರೆಯಲಾಯಿತು. ಕೊನೆಗೆ ನವಂಬರ್ 26ರಂದು ಪ್ರಧಾನಮಂತ್ರಿ ಕಛೇರಿಯ ಮಂತ್ರಿ ಭುವನೇಶ್ ಚತುರ್ವೇದಿಯವರಿಂದ ಮಮತಾ ಬ್ಯಾನರ್ಜಿಯವರಿಗೆ ಪತ್ರ ಬಂತು - "ಪೋಲೀಸ್ ಕಸ್ಟಡಿಯಲ್ಲಿ ಸಾವಿನ ಎಲ್ಲಾ ಪ್ರಕರಣಗಳ ತನಿಖೆ ನಡೆಸಬೇಕೆಂದು ಪ್ರಧಾನ ಮಂತ್ರಿ ಗೃಹ ಇಲಾಖೆಗೆ ಹೇಳಿದ್ದಾರೆ. ನೀವು ನಿಮ್ಮ ಚಳುವಳಿಯನ್ನು ವಾಪಾಸು ತಗೊಳ್ಳಿ" ಎಂದು ಚಳುವಳಿ ನಿಂತಿತು.

ಇದರಿಂದ ಪ್ರದೇಶ ಕಾಂಗ್ರೆ ಅಧ್ಯಕ್ಷರು ಸಿಡಿಮಿಡಿಗೊಂಡರಂತೆ. "ಆಕೆಗ ಮಾಜಿ ಸಿಪಿಐ(ಎಂ) ಮುಖಂಡರೊಬ್ಬನನ್ನು ಆಹ್ವಾನಿಸಲು ಆಗುತ್ತದೆ. ಪಿ.ಸಿ.ಸಿ. ಅಧ್ಯಕ್ಷ ನನಗೆ ಪತ್ರದ ಮೂಲಕವಾದರೂ ತಿಳಿಸಲು ಆಗುವುದಿಲ್ಲ" ಎಂದು ಕಾಂಗ್ರೆ ಕಾರ್ಯಕರ್ತರ ಸಭೆಯೊಂದರಲ್ಲಿ ತಮ್ಮ ಸಿಟ್ಟನ್ನು ವ್ಯಕ್ತಪಡಿಸಿದರಂತೆ. "ನಾನು ಚುನಾಯಿತ ಅಧ್ಯಕ್ಷ. ಈ ಹುದ್ದೆಯನ್ನು ನಿರ್ಲಕ್ಷ್ಯ ಮಾಡುವುದನ್ನು ನಾನು ಸಹಿಸುವುದಿಲ್ಲ" ಎಂದರಂತೆ.

ಕಾಂಗ್ರೆಗೆ ವೋಟು ಗಿಟ್ಟಿಸುವ ಈ ದೊಂಬರಾಟದಿಂದ ಸಿಪಿಐ(ಎಂ)ಗೆ ಏನೂ ಧಕ್ಕೆ ಬಂದಿಲ್ಲ, ಬದಲಿಗೆ ಕಾಂಗ್ರೆಸ್ ಬಣಗಳ ನಡುವಿನ ವೈಷಮ್ಯ ಮತ್ತಷ್ಟು ಹೆಚ್ಚಾಗಿದೆಯಷ್ಟೇ ಎಂದು ಮೇಲೆ ಹೇಳಿದ ಬೂರ್ಜ್ವಾ ಪತ್ರಿಕೆಗೆ ಪಾಪ ಬೇಸರವಾಗಿದೆ.

ಬಿಜೆಪಿ: ಇಲ್ಲಿ ಪ್ರತಿಭಟನೆ- ಅಲ್ಲಿ ಪ್ರತಿಭಟನೆಗೆ ಧಿಕ್ಕಾರ

"ಅಂಬೇಡ್ಕರ್ ಪ್ರತಿಮೆಯನ್ನು ಅಪವಿತ್ರಗೊಳಿಸಿದ್ದು ಹೇಡಿಗಳ, ತಲೆಕೆಟ್ಟವರ ಕೆಲಸ.. ಕೆಲವು ರಾಜಕೀಯ ಶಕ್ತಿಗಳು ಈ ಭಾವನೆಗಳನ್ನು ತಮ್ಮ ರಾಜಕೀಯ ಲಾಭಕ್ಕೆ ಬಳಸುತ್ತಿದ್ದಾರೆ. ಈ ಮೂಲಕ ನನ್ನ ಸರಕಾರವನ್ನು ಅಸ್ಥಿರಗೊಳಿಸಬಯಸುತ್ತಾರೆ" - ಇದು ಕರ್ನಾಟಕದ ಮುಖ್ಯಮಂತ್ರಿ ದೇವೇಗೌಡರ ಮಾತು ಎಂದು ಭಾವಿಸಿದಿರಾ? ಖಂಡಿತಾ ಅಲ್ಲ. ಇದು ಪಕ್ಕದ ರಾಜ್ಯ ಮಹಾರಾಷ್ಟ್ರದ ಮುಖ್ಯಮಂತ್ರಿ ಮನೋಹರ್ ಜೋಷಿ ನವಂಬರ್ 28ರಂದು ನೀಡಿದ ಹೇಳಿಕೆ.

ಕರ್ನಾಟಕದ ಬೆಂಗಳೂರು, ಮತ್ತಿತರ ಎರಡು ಕಡೆ ಆದಂತೆ ಮರಾಠವಾಡದ ಜಲ್ನಾನದಲ್ಲೂ ಅಂಬೇಡ್ಕರ್ ಪ್ರತಿಮೆಗೆ ಅವಮಾನ ಮಾಡಿರುವ ಘಟನೆ ನಡೆಯಿತು. ಅಲ್ಲಿಯೂ ಈ ಘಟನೆಯ ನಂತರ ಕರ್ನಾಟಕದಲ್ಲಿ ನಡೆದಂತೆ ಹಿಂಸಾಚಾರ ನಡೆದಿದೆ. ಒಂದೇ ವ್ಯತ್ಯಾಸವೆಂದರೆ ಇಲ್ಲಿ ಕಾಂಗ್ರೆಯೊಂದಿಗೆ ಕೈಮಿಲಾಯಿಸಿರುವ ಬಿಜೆಪಿ ಅಲ್ಲಿ ಆಳುವ ಪಕ್ಷವಾದ್ದರಿಂದ ರಾಜಕೀಯ ದುರ್ಲಾಭ ಪಡೆಯುವುದರೊಂದಿಗೆ ಕಠಿಣವಾಗಿ ವರ್ತಿಸುವ ಮಾತನಾಡುತ್ತಿದೆಯಷ್ಟೇ.

ತ್ರಿಪುರಾ: ಉಗ್ರಗಾಮಿ ಯುವಕರ ಮತ್ತೊಂದು ತಂಡದ ಶರಣಾಗತಿ

26 ಉಗ್ರಗಾಮಿಗಳ ಯುವಕರ ಇನ್ನೊಂದು ತಂಡ ನವಂಬರ್ 17ರಂದು ತ್ರಿಪುರಾದಲ್ಲಿ ತನ್ನ ಶಸ್ತ್ರಾಸ್ತ್ರಗಳನ್ನು ಒಪ್ಪಿಸಿ ಶರಣಾಗತವಾಯಿತು. ಪಶ್ಚಿಮ ತ್ರಿಪುರಾದ ಸುಬಾಲ್ ಸಿಂಗ್ ಎಂಬಲ್ಲಿ ಹಾಗೂ ದಕ್ಷಿಣ ತ್ರಿಪುರಾದ ಮಹಾದಾನಿ ಎಂಬಲ್ಲಿ ಇದು ನಡೆಯಿತು. ಒಂದು ಉಗ್ರಗಾಮಿ ಸಂಘಟನೆ ಟಿಟಿಡಿಎಫ್‌ನ 18 ಸದಸ್ಯರು ಒಂದು ತುಫಾಕಿ, 9 ಬಂದೂಕುಗಳು, ಒಂದು ಪೈಪಗನ್ ಹಾಗೂ ಎರಡು 33 ರೈಫಲಗಳನ್ನು ಒಪ್ಪಿಸಿ ಜನಜೀವನದ ಮುಖ್ಯ ಪ್ರವಾಹವನ್ನು ಮತ್ತೆ ಸೇರಿದರು. ಮಹಾದಾನಿ ಎಂಬಲ್ಲಿ ಇನ್ನೂ 8 ಟೈಗರ್ ಫೋರ್ಸ್ ಎಂಬ ಉಗ್ರಗಾಮಿ ಸಂಘಟನೆಯ ಸದಸ್ಯರು 8 ಗನ್‌ಗಳನ್ನು ಒಪ್ಪಿಸಿದರು.

ಮತ್ತೊಬ್ಬ ಸಿಪಿಐ(ಎಂ) ಕಾರ್ಯಕರ್ತನ ಕೊಲೆ

ನವಂಬರ್ 14ರಂದು ಒಬ್ಬ ಎಸ್ಎಫ್ಐ ಕಾರ್ಯಕರ್ತ ಮಬತೇರ್ ದಾಸನ ಅಪಹರಣದ ನಂತರ ನವಂಬರ್ 16ರಂದು ಒಂದು ದುಷ್ಕರ್ಮಿಗಳ ತಂಡ ಬುಡಕಟ್ಟು ವಿದ್ಯಾರ್ಥಿ ಸಂಘದ ಸದಸ್ಯ ಹಾಗೂ ಸಿಪಿಐ(ಎಂ) ಕಾರ್ಯಕರ್ತ ಶರತ್ ದೇಬ್ ಬರ್ಮಾರವರನ್ನು ನಿರ್ದಯ ಹತ್ಯೆ ನಡೆಸಿದ್ದಾರೆ. ಜನಾಂಗ ವೈಷಮ್ಯವನ್ನು ಎಬ್ಬಿಸುವುದು ಈ ಕೃತ್ಯದ ಉದ್ದೇಶ. ಬ್ಲಾಕ್ ಮುಖ್ಯ ಕಛೇರಿಗೆ ಹೊರಟಿದ್ದ ಶರತ್ ದೇಬ್ ಬರ್ಮಾನನ್ನು ಒಂದು ಗುಂಪು ಅಡ್ಡಗಟ್ಟಿ ವಾಹನದಿಂದ ಹೊರಗೆಳೆದು ಎಸ್ಎಫ್ಐ ಕಾರ್ಯಕರ್ತನ ಅಪಹರಣದ ಬಗ್ಗೆ ರೊಚ್ಚಿನ ನಟನೆ ಮಾಡುತ್ತಾ ಕೊಚ್ಚಿ ಹಾಕಿತು.

ಸುದ್ದಿ ತಿಳಿದ ಸಿಪಿಐ(ಎಂ) ಮುಖಂಡರು ಸ್ಥಳಕ್ಕೆ ಧಾವಿಸಿ ಇದೊಂದು ಜನಾಂಗೀಯ ಕಲಹವೆಬ್ಬಿಸುವ ಯೋಜಿತ ಪ್ರಯತ್ನವೆಂಬುದು ಸ್ಪಷ್ಟ. ಇದನ್ನು ಉಪೇಕ್ಷಿಸಿ ಶಾಂತಿ ಕಾಪಾಡಿ ಎಂದು ಜನಗಳಿಗೆ ಮನವಿ ಮಾಡಿದರು.

ಮರು ದಿನ ಈ ಪ್ರದೇಶದಲ್ಲಿ ಸಿಪಿಐ(ಎಂ) ಕರೆಯ ಮೇರೆಗೆ ಬಂದ್ ನಡೆಯಿತು.

ದಿಲ್ಲಿಯಲ್ಲಿ ಕೊಲೆ-ಸುಲಿಗೆಗಳ ಹೆಚ್ಚಳ

ದೇಶದ ರಾಜಧಾನಿ ದಿಲ್ಲಿಯಲ್ಲಿ ಕೊಲೆಗಳ ಸಂಖ್ಯೆ ಕಳೆದ ಕೆಲವು ದಿನಗಳಿಂದ ಆತಂಕಕಾರೀ ರೀತಿಯಲ್ಲಿ ಹೆಚ್ಚುತ್ತಿದೆ, ಇದರಿಂದ ಅಭದ್ರತೆಯ ಭಾವನೆ ಆಳವಾಗಿ ಹರಡಿದೆ ಎಂದು ಸಿಪಿಐ(ಎಂ) ದಿಲ್ಲಿ ರಾಜ್ಯ ಸಮಿತಿ ಹೇಳಿದೆ. ನಗರದಲ್ಲಿ ಈ ರೀತಿ ಗಂಭೀರ ಅಪರಾಧಗಳು ತೀವ್ರವಾಗಿ ಬೆಳೆಯುವಲ್ಲಿ ಒಂದು ಮಹತ್ವದ ಅಂಶವೆಂದರೆ ರಾಜಧಾನಿಯಿಂದ ಎರಡು ಪ್ರಮುಖ ಪಕ್ಷಗಳಾದ ಬಿಜೆಪಿ ಕಾಂಗ್ರೆಸಸಿಂದ ದಿಲ್ಲಿಯಲ್ಲಿ ರಾಜಕೀಯದ ಅಪರಾಧೀಕರಣಕ್ಕೆ ಸಿಗುತ್ತಿರುವ ಪ್ರೋತ್ಸಾಹ ಹಾಗೂ ಬೆಂಬಲ.

ಪೋಲೀಸರು ಪರಿಸ್ಥಿತಿಯನ್ನು ಎದುರಿಸಲು ತುರ್ತು ಕ್ರಮ ಕೈಗೊಳ್ಳಬೇಕು. ಇದಕ್ಕಾಗಿ ಸೂಕ್ಷ್ಮ ಪ್ರದೇಶಗಳಲ್ಲಿ ಪೋಲೀಸ್ ಗಸ್ತು ಹೆಚ್ಚಿಸಬೇಕು, ಸಂಚಾರಿ ಉಸ್ತುವಾರಿ ತಂಡಗಳನ್ನು ರಚಿಸಿ ಈ ಪಿಡುಗನ್ನು ಎದುರಿಸಬೇಕು ಎಂದು ಸಿಪಿಐ(ಎಂ) ರಾಜ್ಯ ಸಮಿತಿ ಆಗ್ರಹಪಡಿಸಿದೆ. ರಾಜಧಾನಿಯಲ್ಲಿ ಪೋಲೀಸ್ ಪಡೆಗಳ ಮೇಲೆ ಅಧಿಕಾರವಿರುವ ಕೇಂದ್ರ ಸರಕಾರ ಈ ಕಾರ್ಯ ನೆರವೇರಿಸಲು ಸಾಕಷ್ಟು ಹಣ ಹಾಗೂ ಸಿಬ್ಬಂದಿಯನ್ನು ಒದಗಿಸಬೇಕು ಎಂದೂ ಸಿಪಿಐ(ಎಂ) ರಾಜ್ಯ ಸಮಿತಿ ಒತ್ತಾಯಿಸಿದೆ.

ಎಐಕೆಎಸ್ ಸಮ್ಮೇಳನ

ಪುಟ 5ರಿಂದ

ಹೋರಾಟಗಳನ್ನು ಅವರೆಲ್ಲಾ ಹೇಗೆ ವಿವರಿಸಿ ಇತರರೊಂದಿಗೆ ಹಂಚಿಕೊಂಡರು ಎಂಬುದನ್ನು ನೆನೆಸುತ್ತಾ ಎಲ್ಲಾ ಕಡೆಗೂ ಒಗ್ಗಟ್ಟು ಇರಬೇಕಾದ ಅವಶ್ಯಕತೆಯನ್ನು ಒತ್ತಿ ಹೇಳಿದರು.

ಆದರೆ ಬಡ ಮತ್ತು ಮಧ್ಯಮ ರೈತರನ್ನು ಒಂದು ಹಂತದವರೆಗೆ ಮಾತ್ರ ರಕ್ಷಿಸಲು ಸಾಧ್ಯ ಎಂದ ಅವರು ಬಂಡವಾಳಶಾಹಿ ಬೆಳವಣಿಗೆ ಕೊನೆಗೆ ಇವರನ್ನು ಭೂರಹಿತರನ್ನಾಗಿಸುತ್ತದೆ ಎಂದರು. ಆದ್ದರಿಂದಲೇ ಬಡ ರೈತ ಕೃಷಿ ಕೂಲಿಕಾರರಲ್ಲ ಒಗ್ಗಟ್ಟಾಗಿ ಹೋರಾಡಬೇಕಾದ ಅವಶ್ಯಕತೆ ಇರುವುದು ಎಂದು ಅವರು ಹೇಳಿದರು.

ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಅಧ್ಯಕ್ಷರಾದ ಪಟುರಾ ರಾಮಯ್ಯನವರು ಮಾತನಾಡುತ್ತಾ ಈಗಿನ ಕೋಮುವಾದ ಜಾತಿವಾದ ಮತ್ತು ವಿಚ್ಛಿದ್ರಕಾರಕ ಶಕ್ತಿಗಳ ವಿರುದ್ಧ ರೈತ ಕೂಲಿಕಾರರು ಹೋರಾಡಬೇಕಾದ ಅವಶ್ಯಕತೆಯ ಬಗ್ಗೆ ಹೇಳಿದರು.

ರಾಮನಾರಾಯಣ ಗೋಸ್ವಾಮಿಯವರು ಈ ಚರ್ಚೆಗೆ ಉತ್ತರಿಸುತ್ತಾ ಪ್ರತಿನಿಧಿಗಳು ಚರ್ಚೆಯನ್ನು ವಿವಿಧ ಅನುಭವಗಳ ವಿವರಣೆಯಿಂದ ಶ್ರೀಮಂತಗೊಳಿಸಿದ್ದಕ್ಕಾಗಿ ಅಭಿನಂದಿಸಿದರು. ಸಂಗಾತಿಗಳು ಸಮತೋಲನದಿಂದ ಸ್ವವಿಮರ್ಶೆಯ ವರದಿ ನೀಡಿದ್ದನ್ನು ಅವರು ಶ್ಲಾಘಿಸಿದರು. ರೈತ ಚಳುವಳಿ ಬೇರೆ ಬೇರೆ ಕಡೆ ಬೇರೆ ಬೇರೆ ಹಂತ

ದಲ್ಲಿ ಇರುವುದನ್ನು ಅವರು ಒಪ್ಪಿಕೊಂಡರು. ಇಲ್ಲಿ ಕೆಲವು ವೈಯಕ್ತಿಕ ಕಾರಣಗಳೂ ಇರಬಹುದು. ಆದ್ದರಿಂದಲೇ ಚಳುವಳಿ ಅಸಮವಾಗಿರುವುದು ಎಂದರು.

ಇಲ್ಲಿಯವರೆಗಿನ ಹೋರಾಟಗಳ ಬಗ್ಗೆ ಎಐಕೆಎಸ್ ಹೆಮ್ಮೆಪಡಬಹುದಾಗಿದ್ದ ಬಿಹಾರದ ಭೂ ಹೋರಾಟಗಳು ಬಾಬ್ರಿ ಮಸೀದಿ-ಬಿಕ್ಕಟ್ಟಿನ ಸಂದರ್ಭದಲ್ಲಿ ಉತ್ತರಪ್ರದೇಶದಲ್ಲಿ ಎಡಶಕ್ತಿಗಳು ಒಡ್ಡಿದ ಪ್ರತಿರೋಧ ಹೊಸ ಆರ್ಥಿಕ ನೀತಿಗಳ ವಿರುದ್ಧ ಬಹುದೊಡ್ಡ ಪ್ರಮಾಣದ ಹೋರಾಟ ಇವೆಲ್ಲವೂ ದೊಡ್ಡ ಸಾಧನೆಗಳು. ಆದರೆ ಮುಂಬರುವ ದಿನಗಳಲ್ಲಿ ಇನ್ನೂ ಹೆಚ್ಚು ಕೆಲಸವಾಗಬೇಕಿದೆ

ಕೊನೆಗೂ ಬೋಸ್ನಿಯಾದಲ್ಲಿ ಶಾಂತಿ ನೆಲೆಸೀತೇ?

ನವಂಬರ್ 21ರಂದು ಬೋಸ್ನಿಯಾ ಸರ್ಬಿಯಾ ಹಾಗೂ ಕ್ರೋಶಿಯಾದ ಅಧ್ಯಕ್ಷರುಗಳು ಸಹಿ ಹಾಕಿರುವ ಒಪ್ಪಂದ ಬೋಸ್ನಿಯಾದಲ್ಲಿ ಕಳೆದ ಹಲವು ವರ್ಷಗಳಿಂದ ನಡೆದ ಬಂದಿರುವ ರಕ್ತಪಾತವನ್ನು ಕೊನೆಗೊಳಿಸಿ ಜನಾಂಗ ಶಾಂತಿಯನ್ನು ಸ್ಥಾಪಿಸಬಲ್ಲುದೇ? ಇದೀಗ ವಿಶ್ವದ ಮುಂದಿನ ಪ್ರಮುಖ ಪ್ರಶ್ನೆ. ಆ ದಿನ ಅಮೇರಿಕಾ ವಿದೇಶಾಂಗ ಮಂತ್ರಿ ವಾರೆನ್ ಕಿಸ್ಟೋಫರ್ ಮಧ್ಯಸ್ಥಿಕೆಯಲ್ಲಿ ಬೋಸ್ನಿಯಾದ ಅಧ್ಯಕ್ಷ ಅಲಿಜಾ ಇಝೆತಬೆಗೇವಿಕ್, ಸರ್ಬಿಯಾದ ಅಧ್ಯಕ್ಷ ಸ್ಲೋಬೊದನ್ ಮಿಲೊಸೊವಿಕ್ ಹಾಗೂ ಕ್ರೋಶಿಯಾದ ಅಧ್ಯಕ್ಷ ಫ್ರಾಂಜೊ ಟ್ರುಡ್ಜಮನ್ ಒಪ್ಪಂದವೊಂದಕ್ಕೆ ಬರಲು ಒಪ್ಪಿದ್ದಾರೆ. ಅಮೇರಿಕಾದ ಒಹಿಯೋದ ಡೇಟನ್‌ನಲ್ಲಿ ಈ ಬಗ್ಗೆ ಸಹಿ ಹಾಕಿದ್ದಾರೆ. ಪ್ಯಾರಿಸನಲ್ಲಿ ಡಿಸೆಂಬರ್‌ನಲ್ಲಿ ಈ ಬಗ್ಗೆ ಒಂದು ಶಾಂತಿ ಸಮ್ಮೇಳನ ನಡೆದು ಒಪ್ಪಂದಕ್ಕೆ ವಿಧ್ಯುಕ್ತವಾಗಿ ಸಹಿ ಹಾಕಲಾಗುವುದು ಎಂದು ತಿಳಿದುಬಂದಿದೆ.

ಆದರೆ ಕಳೆದ 5 ವರ್ಷಗಳಲ್ಲಿ ಎರಡೂವರೆ ಲಕ್ಷ ಮಂದಿಯನ್ನು ಬಲಿ ತೆಗೆದುಕೊಂಡ ಈ ರಕ್ತಪಾತ ನಿಲ್ಲುವುದೇ ಎಂಬ ಬಗ್ಗೆ ಈ ಮೂರು ಜನಾಂಗಗಳ ಬಗ್ಗೆ ಪೂರ್ಣ ಭರವಸೆ ಇನ್ನೂ ಮೂಡಿದಂತಿಲ್ಲ. ಏಕೆಂದರೆ 'ಶಾಂತಿ ಒಪ್ಪಂದ'ಗಳು ಹಲವು ಆಗಿ ಮೂಡಿದ ನೆನಪುಗಳು ಹಚ್ಚಹಸುರಾಗಿದೆ, ಆದರೂ ಈ ಬಾರಿಯ ಒಪ್ಪಂದ ಹಿಂದಿನ ಒಪ್ಪಂದಗಳಿಗಿಂತ ಭಿನ್ನವಾಗಿ ಶಾಂತಿ ನೆಲೆಸುವಂತ ಮಾಡಲು ಸಹಾಯವಾಗಬಹುದು ಎಂದು ನಿರೀಕ್ಷೆಯೂ ಇದೆ.

ಈ ನಿರೀಕ್ಷೆ ಬಹುಮಟ್ಟಿಗೆ ಸಾಮ್ರಾಜ್ಯಶಾಹಿ ದೇಶಗಳ ಮರ್ಜಿಯನ್ನಿ ಅವಲಂಬಿಸಿದೆ. ಏಕೆಂದರೆ ಹಿಂದಿನ ಸಮಾಜವಾದಿ ಯುಗೋಸ್ಲಾವಿಯಾ ಈ ಅತ್ಯಂತ ದುರಂತವನ್ನು, ಅಮಾನವೀಯ ದಿನಗಳನ್ನು ನೋಡಬೇಕಾಗಿ ಬಂದದ್ದು ಸಾಮ್ರಾಜ್ಯಶಾಹಿ ಮಧ್ಯಪ್ರವೇಶದಿಂದಾಗಿ. ಅದು ಐದು ದೇಶಗಳಾಗಿ ಒಡೆದು ಪರಸ್ಪರ ಕಚ್ಚಾಟದಲ್ಲಿ ರಕ್ತ ಹರಿಸಲಾರಂಭಿಸಿದ್ದು ಅಸ್ಥಿರತೆಯನ್ನು ಪ್ರಚೋದಿಸುವ, ಪ್ರೋತ್ಸಾಹಿಸುವ ಸಾಮ್ರಾಜ್ಯಶಾಹಿ ನೀತಿಯಿಂದಾಗಿಯೇ. ಜರ್ಮನಿ, ಫ್ರಾನ್ಸ್, ಯೆಲ್ಟಸಿನ್ ರಶ್ಯಾ ಹಾಗೂ ಅಮೇರಿಕಾಕ್ಕೆ ಇಲ್ಲಿ ತಮ್ಮದೇ ಆದ ಹಿತಾಸಕ್ತಿಗಳಿರುವುದರಿಂದ ಈ ಸಮಸ್ಯೆ ಬಗೆಹರಿಯದೇ ಉಳಿಯಿತು, ದಿನೇ ದಿನೇ ಉಲ್ಬಣಗೊಂಡಿತು ಎಂಬುದನ್ನು ಮರೆಯುವಂತಿಲ್ಲ.

ಸಂಕ್ಷಿಪ್ತ ಸುದ್ದಿಗಳು

ಪಶ್ಚಿಮ ಏಶ್ಯಾದಲ್ಲಿ ಭಾರೀ ಅಮೇರಿಕನ್ ಶಸ್ತ್ರಾಸ್ತ್ರ ಸಂಗ್ರಹ

ಇರಾಕ್, ಇರಾನ್‌ಗಳನ್ನು 'ತಡೆಯುವ' ಹೆಸರಲ್ಲಿ ಅಮೇರಿಕನ್ ಸಾಮ್ರಾಜ್ಯಶಾಹಿ ಪಶ್ಚಿಮ ಏಶ್ಯಾ ಪ್ರದೇಶದಲ್ಲಿ ಕೊಲ್ಲಿ ದೇಶಗಳಲ್ಲಿ 72.5 ಶತಕೋಟಿ ಡಾಲರುಗಳ ಶಸ್ತ್ರಾಸ್ತ್ರ ವ್ಯಾಪಾರ ನಡೆಸಿದೆ, ಜತೆಗೆ ಪುಕ್ಕಟೆ ಶಸ್ತ್ರಾಸ್ತ್ರಗಳನ್ನು ಒದಗಿಸದೆ ಎಂದು ವಾಶಿಂಗಟನ್ ಪೋಸ್ಟ್ ವರದಿ ಮಾಡಿದೆ. 1991ರ ಕೊಲ್ಲಿಯುದ್ಧದೊಂದಿಗೆ ಈ ಶಸ್ತ್ರಾಸ್ತ್ರ ಮಾರಾಟ ಆರಂಭವಾಗಿದ್ದು ಈಗ ಅದು ಅಗಾಧ ಪ್ರಮಾಣವನ್ನು ಮುಟ್ಟಿದೆ. ಕತಾರಾ ದೇಶವಂತೂ ಅಮೇರಿಕನ್ ಪಡೆಗಳಿಗೆ ಯಾವುದೇ ಅಡೆತಡೆಯಿಲ್ಲದೆ ತಮ್ಮ ಅಂತರ್ರಾಷ್ಟ್ರೀಯ ವಿಮಾನ ನಿಲ್ದಾಣಗಳಿಗೆ ಬಂದು ಹೋಗಲು, ತೈಲ, ಉರುವಲು, ಬಾಂಬುಗಳು, ಮದ್ದುಗುಂಡುಗಳನ್ನಿಡಲು ಕೂಡಾ ಅಮೇರಿಕಾಕ್ಕೆ ಅವಕಾಶ ನೀಡಿದೆ. ಅಮೇರಿಕಾದ ಮಿಲಿಟರಿ ಸಿಬ್ಬಂದಿ ಯಾವುದೇ ಪಾಸಪೋರ್ಟ್ ಇಲ್ಲದೆ ಬಂದು ಹೋಗಬಹುದು ಎಂದು ವಾಶಿಂಗ್‌ಟನ್ ಪೋಸ್ಟ್ ತಿಳಿಸಿದೆ.

ಬಾಂಗ್ಲಾ ದೇಶ ಸಂಸತ್ತು ವಿಸರ್ಜನೆ

ನವಂಬರ್ 24ರಂದು ಬಾಂಗ್ಲಾದೇಶದ ಅಧ್ಯಕ್ಷ ಅಬ್ದುಲ್ ರಹಮಾನ್ ಬಿಸ್ವಾತ್ ಸಂಸತ್ತನ್ನು ವಿಸರ್ಜಿಸಿರುವುದಾಗಿ ಘೋಷಿಸಿದ್ದಾರೆ. ಪ್ರಧಾನಮಂತ್ರಿ ಖಾಲಿದಾ ಜಿಯಾರವರ ಕೇಳಿಕೆಯ ಮೇಲೆ ಹೀಗೆ ಮಾಡಲಾಗಿದೆ. ಬಾಂಗ್ಲಾ ದೇಶದ ಪ್ರತಿಪಕ್ಷಗಳು ಸಂಸತ್ತಿಗೆ ರಾಜೀನಾಮೆ ನೀಡಿ ಕಳೆದ ಕೆಲವು ತಿಂಗಳಿಂದ ಸತತ ಪ್ರತಿಭಟನೆಗಳಲ್ಲಿ ತೊಡಗಿದ್ದು ಸಂಸತನ್ನು ವಿಸರ್ಜಿಸಿ ಒಂದು ತಟಸ್ಥ ಸರಕಾರದ ಉಸ್ತುವಾರಿಯಲ್ಲಿ ಹೊಸ ಸಂಸತ್ತನ್ನು ನಡೆಸಬೇಕು ಎಂದು ಒತ್ತಾಯಿಸುತ್ತಿದ್ದರು. ಆದ್ದರಿಂದ ಈ ವಿಸರ್ಜನೆ 'ಜನತೆಯ ವಿಜಯ' ಎಂದು ಪ್ರತಿಪಕ್ಷದ ಮುಖಂಡರಾದ ಅವಾಮಿ ಲೀಗಿನ ಶೇಕ್ ಹಸೀನಾ ಹೇಳಿದ್ದಾರೆ. ಆದರೆ ಬಾಂಗ್ಲಾ ದೇಶದ ಅಧ್ಯಕ್ಷರು ಖಾಲಿದಾ ಜಿಯಾರವರನ್ನು ಪ್ರಧಾನ ಮಂತ್ರಿಯಾಗಿ ಮುಂದುವರಿಯಲು ಹೇಳಿರುವುದು ತಟಸ್ಥ ಸರಕಾರದ ರಚನೆಯ ಪ್ರತಿಪಕ್ಷಗಳ ಬೇಡಿಕೆ ಈಡೇರಿದಂತಾಗಿದೆ. ತಕ್ಷಣ 'ತಟಸ್ಥ ಪಕ್ಷೇತರ' ಸರಕಾರದ ಉಸ್ತುವಾರಿಯಲ್ಲಿ ಚುನಾವಣೆ ನಡೆಸಬೇಕು ಎಂದು ಶೇಕ್ ಹಸೀನಾ ಒತ್ತಾಯಿಸಿದ್ದಾರೆ.

ಇದು ಬಾಂಗ್ಲಾದೇಶದ 5ನೇ ಸಂಸತ್ತು. ಫೆಬ್ರವರಿ 1991ರಲ್ಲಿ ಆರಿಸಲ್ಪಟ್ಟಿತ್ತು. ಬಾಂಗ್ಲಾ ದೇಶದ ಸಂಸತ್ತಿನ ಪ್ರಕಾರ ಸಂಸತ್ತಿನ ವಿಸರ್ಜನೆಯಾದ ಮೇಲೆ 98 ದಿನಗಳೊಳಗೆ ಹೊಸ ಚುನಾವಣೆಗಳು ನಡೆಯಬೇಕು.

ಜರ್ಮನಿ: ಕಮ್ಯುನಿಸ್ಟರ ಬೇಟೆಗೊಂದು ತಡೆ

ಹಿಂದಿನ ಜರ್ಮನ್ ಪ್ರಜಾಸತ್ತಾತ್ಮಕ ಗಣತಂತ್ರ(ಪೂರ್ವ ಜರ್ಮನಿ) ಮುಖಂಡರನ್ನು ವಿಚಾರಣೆಗೊಳಪಡಿಸಿ ಶಿಕ್ಷಿಸುವ ಜರ್ಮನ್ ಬಂಡವಾಳಶಾಹಿಗಳ ಪ್ರಯತ್ನಕ್ಕೆ ಇತ್ತೀಚೆಗೆ ಒಂದು ದೊಡ್ಡ ಸೋಲಾಗಿದೆ. ಹಿಂದಿನ ಜರ್ಮನ್ ಗಣತಂತ್ರದ ಗುಪ್ತಚರ ವಿಭಾಗದ ಮುಖ್ಯಸ್ಥ ಮಾರ್ಕುಸ್ ವೊಲ್ಫರವರ ಮೇಲೆ 1993ರಲ್ಲಿ 'ದೇಶದ್ರೋಹ'ದ ಆಪಾದನೆ ಹಾಕಿ ಆರು ವರ್ಷಗಳ ಕಾರಾಗೃಹವಾಸ ವಿಧಿಸಲಾಗಿತ್ತು. ಇದನ್ನು ಅವರು ಜರ್ಮನ್ ಅಪೀಲು ಕೋರ್ಟಿನಲ್ಲಿ ಪ್ರಶ್ನಿಸಿದರು. ಅದು ಅಕ್ಟೋಬರ್ 18ರಂದು ಒಂದು ತೀರ್ಪು ನೀಡಿ ವೊಲ್ಫರವರ ಚಟುವಟಿಕೆಗಳ ಆಗಿದ್ದ ಜರ್ಮನ್ ಗಣತಂತ್ರದ ಕಾನೂನುಗಳ ಒಳಗೇ ಇತ್ತು ಎಂದು ಹೇಳಿ ಹಿಂದಿನ ಶಿಕ್ಷೆಯನ್ನು ರದ್ದುಪಡಿಸಿತು. ಈ ರೀತಿ ಜರ್ಮನ್ ಗಣತಂತ್ರ ಒಂದು ಸಾರ್ವಭೌಮ ದೇಶವಾಗಿತ್ತು, ಆ ದೇಶದ ಪ್ರಜೆಗಳಿಗೆ ಪಶ್ಚಿಮ ಜರ್ಮನಿಯ ಕಾನೂನುಗಳನ್ನು ಅನ್ವಯಿಸಲಾಗದು ಎಂದು ನ್ಯಾಯಾಲಯ ಒಪ್ಪಿದಂತಾಗಿದೆ. ಆದರೂ ಹಿಂದಿನ ಪೂರ್ವ ಜರ್ಮನಿಯ ಜರ್ಮನ್ ಸಮಾಜವಾದಿ ಐಕ್ಯತಾ ಪಕ್ಷದ ಆರು ಪೊಲಿಟ್ ಬ್ಯೂರೋ ಸದಸ್ಯರ ವಿಚಾರಣೆಯನ್ನು ಇನ್ನೂ ಕೈಬಿಟ್ಟಿಲ್ಲ.

ಶ್ರೀಲಂಕಾ: ಜಾಫ್ನಾ ಸೇನೆಯ ವಶ

ಶ್ರೀಲಂಕಾದ ಸೇನೆ ಜಾಫ್ನಾದೊಳಗೆ ಪ್ರವೇಶಿಸಿ ಅಲ್ಲಿಯ ಆಡಳಿತ ಕಛೇರಿಯನ್ನು ವಶಪಡಿಸಿಕೊಳ್ಳುವುದರೊಂದಿಗೆ ಒಂದು ಮಹತ್ವದ ಮಿಲಿಟರಿ ವಿಜಯ ಪಡೆದಿದೆ. ಆದರೆ ಶ್ರೀಲಂಕಾ ಸಮಸ್ಯೆಗೆ ರಾಜಕೀಯ ಪರಿಹಾರದ ಲಕ್ಷಣಗಳು ಇನ್ನೂ ಕಾಣುತ್ತಿಲ್ಲ, ಐದು ವರ್ಷಗಳ ಹಿಂದೆ ಎಲ್‌ಟಿಟಿಇಯ ವಶಕ್ಕೆ ಹೋದ ಈ ಉತ್ತರ ಶ್ರೀಲಂಕಾದ ಪಟ್ಟಣ ಈಗ ಮತ್ತೆ ಶ್ರೀಲಂಕಾ ಸರಕಾರದ ವಶಕ್ಕೆ ಬಂದಂತಾಗಿದೆ. ಇದಕ್ಕೆ ಸೇನೆ ಬಹಳಷ್ಟು ಶ್ರಮ ಪಡಬೇಕಾಯಿತು. ಹಲವಾರು ಸೈನಿಕರು ಹಾಗೂ ಎಲ್‌ಟಿಟಿಇ ಉಗ್ರಗಾಮಿಗಳು ಇದಕ್ಕೆ ಬಲಿಯಾದರು. ಉಗ್ರಗಾಮಿಗಳು ಪಕ್ಕದ ಕಾಡುಗಳಿಗೆ ಹಿಂದೆ ಸರಿದಿದ್ದು ಗೆರಿಲ್ಲಾ ಯುದ್ಧ ಮುಂದುವರಿಯಬಹುದು ಎಂದು ಕೆಲವು ವೀಕ್ಷಕರು ಅಭಿಪ್ರಾಯಪಟ್ಟಿದ್ದಾರೆ. ಶ್ರೀಲಂಕಾ ಸರಕಾರ ಕೂಡಾ ಮಿಲಿಟರಿ ಕ್ರಮ ಮುಂದುವರಿಯುವುದು ಎಂದು ಹೇಳಿದೆ.

ಯುದ್ಧ ಮುಗಿದರೂ ಶಾಂತಿ ನೆಲೆಸಿತು ಅಥವಾ ಸಮಸ್ಯೆ ಪರಿಹಾರವಾಯಿತು ಎಂದು ಶ್ರೀಲಂಕಾ ಅಧ್ಯಕ್ಷೆ ಚಂದ್ರಿಕಾ ಕುಮಾರ ತುಂಗಾ ಹೇಳಿದ್ದಾರೆ. ಒಂದು ಶಾಶ್ವತ ರಾಜಕೀಯ ಪರಿಹಾರ ಕಂಡು ಹಿಡಿದಾಗ ಮಾತ್ರವೇ ನಮ್ಮ ಜನಗಳಿಗೆ ಶಾಂತಿ ಸಿಗಬಹುದು ಎಂದು ಹೇಳಿದ ಅವರು ಎಲ್‌ಟಿಟಿಇ ಮುಖಂಡರಿಗೆ ಮಾತುಕತೆಯ ಆಹ್ವಾನವನ್ನೂ ಪುನರುಚ್ಚರಿಸಿದ್ದಾರೆ. ಆದರೆ ಬಂದೂಕಿನ ನಳಿಕೆಯೆದುರು ಮಾತುಕತೆ ಸಾಧ್ಯವಿಲ್ಲ ಎಂದು ಎಲ್‌ಟಿಟಿಇ ಮುಖಂಡರು ಹೇಳಿದ್ದಾರೆ. ಆದ್ದರಿಂದ ಶ್ರೀಲಂಕಾದ ತಮಿಳರ ಸಂಕಟಗಳು ಕೊನೆಗೊಳ್ಳಲು ಇನ್ನೂ ಎಷ್ಟು ಸಾವು-ನೋವುಗಳಾಗಬೇಕೋ ಕಾದು ನೋಡಬೇಕು.

ಆರು ದಿನ ಅಮೇರಿಕನ್ ಸರಕಾರೀ ಯಂತ್ರ ಸ್ತಬ್ಧಗೊಂಡಿತೇಕೆ?

ನವಂಬರ್ 14ರಿಂದ 20 ಅಮೇರಿಕಾ ಭಾರೀ ಸುದ್ದಿಯಲ್ಲಿತ್ತು. ಜಗತ್ತಿನ ಅತ್ಯಂತ ಬಲಿಷ್ಠ ದೇಶದ ಸರಕಾರ ಭಾಗಶಃ ಮುಚ್ಚಿರಬೇಕಾಯಿತು. ಈ ಬಲಿಷ್ಠ ದೇಶದ ಒಳಗಿನ ಆಳವಾದ ಬಿರುಕು ಎಷ್ಟೆಂದು ಜಗಜ್ಜಾಹೀರಾಯಿತು.

ಅಧ್ಯಕ್ಷ ಬಿಲ್ ಕ್ಲಿಂಟನ್ ಮತ್ತು ಅಮೇರಿಕನ್ ಸಂಸತ್ತಿನ ನಡುವಿನ ಕಿತ್ತಾಟ ಸಿಡಿದದ್ದು ಎರಡು ಮಸೂದೆಗಳಿಂದಾಗಿ. ವಯಸ್ಸಾದ ವ್ಯಕ್ತಿಗಳಿಗೆ ನೀಡುವ ಆರೋಗ್ಯ ವಿಮೆಗೆ ತೆರಬೇಕಾದ ಹಣವನ್ನು ತಿಂಗಳಿಗೆ 7 ಡಾಲರುಗಳಿಗೆ ಹೆಚ್ಚಿಸಬೇಕೆಂದು ಅಮೇರಿಕನ್ ಸಂಸತ್ತು ಒಂದು ಮಸೂದೆ ಹಾಗೂ ಇನ್ನೊಂದು ಸಾಲದ ಮಿತಿಯನ್ನು ಹೆಚ್ಚಿಸಲು ಸೂಚಿಸುವ ಮಸೂದೆ ಇವೆರಡನ್ನೂ ಅಧ್ಯಕ್ಷ ಕ್ಲಿಂಟನ್ ತಳ್ಳಿ ಹಾಕಿದರು. ಅಮೇರಿಕಾದ ಸರಕಾರಕ್ಕೆ ನವಂಬರ್ 13ರವರೆಗೆ ಹಣ ಖರ್ಚು ಮಾಡುವ ಅಧಿಕಾರವಿತ್ತು. ಈ ಮಸೂದೆಗಳು ಪಾಸಾಗಿದ್ದರೆ ಈ ಅಧಿಕಾರ ಮುಂದುವರಿಯುತ್ತಿತ್ತು. ಆದರೆ ಈ ಮಸೂದೆಗಳು ಅಧ್ಯಕ್ಷರಿಂದ ತಿರಸ್ಕರಿಸಲ್ಪಟ್ಟಿದ್ದರಿಂದ ಆ ಸರಕಾರೀ ಇಲಾಖೆಯಿಂದ ಹಣ ಖರ್ಚು ಮಾಡಲು ಕಾರ್ಯಾಂಗಕ್ಕೆ ಅಂದರೆ ಅಧ್ಯಕ್ಷರಿಗೆ ಶಾಸಕಾಂಗದ ಅನುಮತಿ ಇಲ್ಲದಂತಾಗಿ ಸರಕಾರದ ಹಲವಾರು ಕೆಲಸಗಳು ಸ್ತಬ್ಧಗೊಳ್ಳಬೇಕಾಯಿತು. 8 ಲಕ್ಷ ನೌಕರರು ಒಂದು ವಾರ ಕೆಲಸವಿಲ್ಲದೆ ಸಂಬಳವಿಲ್ಲದೆ ರಜೆ ಪಡೆಯುವಂತಾಯಿತು.

ಈ ರೀತಿ ಅಮೇರಿಕನ್ ಸರಕಾರ ಬಾಗಿಲೆಳೆಯಬೇಕಾಗಿ ಬಂದದ್ದು ಇದೇನು ಮೊದಲ ಬಾರಿಯೇನಲ್ಲ. 1980ರಿಂದ 1991ರ ನಡುವೆ ಹೀಗೆ ಆಗಿತ್ತಂತೆ. ಆದರೆ ಈ ಬಾರಿ ಇದರ ಹಿಂದಿದ್ದ ಸಂಗತಿ ಬಹಳ ಗಂಭೀರವಾದದ್ದು. 2002ರೊಳಗೆ ಅಮೇರಿಕಾದ ಬಜೆಟ್ ಕೊರತೆ ಸೊನ್ನೆಗಿಳಿಸಬೇಕೆಂಬುದು ರಿಪಬ್ಲಿಕನ್ ಪಕ್ಷದ ಅಜೆಂಡಾ. ಇದಕ್ಕೆ ಅದು ಸೂಚಿಸುವ ಕ್ರಮ ಸಾರ್ವಜನಿಕ ಕಾರ್ಯಕ್ರಮಗಳ ಖರ್ಚನ್ನು ಇಳಿಸುವುದು. ಅಂದರೆ ಜನಸಾಮಾನ್ಯರ ಜೀವನದ ಮೇಲೆ ಧಾಳಿ. ಸಂಸತ್ತಿನಲ್ಲಿ ಎರಡೂ ಸದನಗಳಲ್ಲಿ ಬಹುಮತ ಪಡೆದಿರುವ ರಿಪಬ್ಲಿಕನ್ ಪಕ್ಷ ತನ್ನ ಈ ಅಜೆಂಡಾವನ್ನು ಜ್ಯಾರಿಗೊಳಿಸಲು ಅಮೇರಿಕನ್ ಸಮಾಜದಲ್ಲಿ ಅತ್ಯಂತ ಕಡಿಮೆ ಭದ್ರತೆಯಿರುವ ವಯಸ್ಸಾದ ನಾಗರಿಕರಿಗೆ ತೆರಬೇಕಾದ ಹಣವನ್ನು ಹೆಚ್ಚಿಸುವುದು. ಕ್ಲಿಂಟನ್ ಕೂಡಾ ಈ ಬಜೆಟ್ ಕೊರತೆಯನ್ನು ಇಲ್ಲವಾಗಿಸಲು ಸಾಮಾಜಿಕ ಕಲ್ಯಾಣ ಕ್ರಮಗಳಲ್ಲಿ ಕಡಿತ ತರಲು ವಿರೋಧವಿಲ್ಲವಾದರೂ ಇದು ಮಾತ್ರ ಭಾರೀ ನಿರ್ದಯ ಕ್ರಮ ಎಂದು ಹೇಳಬೇಕಾಯಿತು. ಅದರಿಂದಾಗಿ ಈ ಬಗ್ಗೆ ರಿಪಬ್ಲಿಕನ್ನರು ಮುಂದಿಟ್ಟಿದ್ದ ಮಸೂದೆಯನ್ನು ತಮ್ಮ ವಿಶೇಷಾಧಿಕಾರ ಬಳಸಿ ತಿರಸ್ಕರಿಸಿದರು. "ನಮ್ಮ ಮೌಲ್ಯಗಳನ್ನು ಪಣಕ್ಕಿಡುವ ಒಂದು ಆಯ್ಕೆ ನಮ್ಮ ಮುಂದಿದೆ - ಗೆದ್ದವರು ಎಲ್ಲಾ ಬಾಚಿಕೊಳ್ಳುವ ಸಮಾಜ ಬೇಕೋ ಅಥವಾ ಎಲ್ಲರೂ ಒಟ್ಟಿಗೆ ಗೆಲ್ಲುವ ಅವಕಾಶವಿರುವ ಸಮಾಜ ಬೇಕೋ ಎಂಬ ಆಯ್ಕೆ" ಎಂದು ಸಾರಿದರು.

ಆದರೆ ಜನಗಳಿಗೆ ಡೆಮೊಕ್ರಾಟರು ಮತ್ತು ರಿಪಬ್ಲಿಕನ್ನರ ನಡುವಿನ ಈ ಕಿತ್ತಾಟ ಬೇಸರ ತರಿಸಿತು. ಕ್ಲಿಂಟನ್ ಈ ಕಿತ್ತಾಟದಿಂದಾಗಿ APEC ಸಭೆಗೆ ಹೋಗಲೂ ಆಗಲಿಲ್ಲ. ಕೊನೆಗೆ ಎರಡು ಪಕ್ಷಗಳ ನಡುವೆ ಒಂದು ರಾಜಿ ಒಪ್ಪಂದ ಆಯಿತು. ಸಮತೋಲದ ಅಂದರೆ ಕೊರತೆಯಿಲ್ಲದ ಬಜೆಟ್ ರೂಪಿಸಬೇಕೆಂಬ ರಿಪಬ್ಲಿಕನ್ ಪಕ್ಷದ ಧೋರಣೆಯನ್ನು ಕ್ಲಿಂಟನ್ ಒಪ್ಪಿಕೊಂಡು, ಅದಕ್ಕೆ ಪ್ರತಿಯಾಗಿ ಸಾಮಾಜಿಕ ಕಲ್ಯಾಣ ಕಾರ್ಯಕ್ರಮಗಳ ಖರ್ಚಿನಲ್ಲಿ ತೀವ್ರ ಕಡಿತ ಆಗುವುದಿಲ್ಲ ಎಂಬ ಭರವಸೆಯನ್ನು ಪಡೆದರು. ಸರಕಾರೀ ಯಂತ್ರ ಮತ್ತೆ ಕೆಲಸ ಮಾಡಲಾರಂಭಿಸಿತು. 8 ಲಕ್ಷ ನೌಕರರು ಮತ್ತೆ ಕೆಲಸಕ್ಕೆ ಮರಳಿದರು. ಸದ್ಯ ಡಿಸೆಂಬರ್ 5ರವರೆಗೆ ಸಮಸ್ಯೆಯಿಲ್ಲ. ಅಷ್ಟರೊಳಗೆ ರಿಪಬ್ಲಿಕನ್ ಮತ್ತು ಡೆಮೊಕ್ರಾಟರು ಒಂದು ಒಪ್ಪಂದಕ್ಕೆ ಬರಬೇಕು, ಬರದಿದ್ದರೆ ಮತ್ತೆ ಇದೇ ಸಮಸ್ಯೆ.

ಈ ಕದನ ವಿರಾಮವೇನೇ ಇದ್ದರೂ ಭವಿಷ್ಯದಲ್ಲಿ ಅಮೇರಿಕನ್ ಸಮಾಜದೊಳಗಿನ ಈ ವಿಭಜನೆ ಉಲ್ಬಣಗೊಳ್ಳಬಹುದೆಂದು ರಾಜಕೀಯ ವೀಕ್ಷಕರ ಅಭಿಪ್ರಾಯ. ಕ್ಲಿಂಟನ್ ಸದ್ಯ ಗೆದ್ದ ಹಾಗೆ ಕಂಡರೂ ಸರಕಾರದ ಮಧ್ಯಪ್ರವೇಶ ಕಮ್ಮಿಯಾಗಿ ಜೀವನದ ಮೇಲೆ ಧಾಳಿ ಮಾಡಿ ಶ್ರೀಮಂತರಿಗೆ ಕಾಣಿಕೆ ನೀಡುವ ರಿಪಬ್ಲಿಕನ್ ಪಕ್ಷದ ಸೈದ್ಧಾಂತಿಕ ಸವಾಲಿನ ವಿರುದ್ಧ ಹೋರಾಡುವ ಸಾಮರ್ಥ್ಯವನ್ನು ಅವರು ವ್ಯಕ್ತಪಡಿಸಿಲ್ಲ ಎಂದೇ ಹೇಳಬಹುದು. ಏಕೆಂದರೆ ಈ ಬಗ್ಗೆ ಡೆಮೊಕ್ರಾಟಿಕ್ ಪಕ್ಷಕ್ಕೂ ಸ್ಪಷ್ಟ ನಿಲುವಿದ್ದಂತಿಲ್ಲ. ಕ್ಲಿಂಟನ್ ಮತ್ತೆ ಅಧ್ಯಕ್ಷ ಪದವಿ ಪಡೆಯಬೇಕಾದರೆ ದೊಡ್ಡ ಬಂಡವಾಳಗಾರರ(ಹಣ) ಬೆಂಬಲ ಬೇಕೇ ಬೇಕು.

ಇತ್ತೀಚೆಗೆ ಟೆಕ್ಸಾಸ್ ನಗರದಲ್ಲಿ ವ್ಯಾಪಾರಸ್ಥರೊಂದಿಗೆ ಮಾತನಾಡುತ್ತಾ "ನಾನು 1993ರ ಬಜೆಟ್ಟಿನಲ್ಲಿ ನಿಮ್ಮ ಮೇಲೆ ತೆರಿಗೆ ಬಹಳ ಹೆಚ್ಚಿಸಿದ್ದೇನೆಂದು ನಿಮಗನಿಸುತ್ತದೆಯಲ್ಲವೇ? ನನಗೂ ಹಾಗೆ ಅನಿಸುತ್ತದೆ" ಎಂದು ವ್ಯಾಪಾರಸ್ಥರ ಒಲುಮೆ ಗಳಿಸಲು ಪ್ರಯತ್ನಿಸಿದಾಗ ಡೆಮೊಕ್ರಾಟ್ ಪಕ್ಷದೊಳಗಿನ ಕೆಲವರು ಸಿಟ್ಟಿನಿಂದ ಪ್ರತಿಕ್ರಿಯಿಸಿದರಂತೆ. ಈಗ ಅವರನ್ನು ತೃಪ್ತಗೊಳಿಸುವುದಕ್ಕಾಗಿ ರಿಪಬ್ಲಿಕನ್ ಪಕ್ಷದವರೊಂದಿಗೆ ಈ ತಿಕ್ಕಾಟಕ್ಕಿಳಿದರು ಎಂದು ಹೇಳಲಾಗುತ್ತದೆ.

ಏನೇ ಇದ್ದರೂ ಈಗ ಮಾಡಿಕೊಂಡಿರುವ ರಾಜಿಯಿಂದಾಗಿ ಕ್ಲಿಂಟನ್ ಬಜೆಟನ್ನು 'ಸಮತೋಲ'ಗೊಳಿಸುವ ರಿಪಬ್ಲಿಕನ್ ಒತ್ತಾಯಕ್ಕೆ ಮಣಿದಂತಾಯಿತು. ಶ್ರೀಮಂತರ ಮೇಲಿನ ತೆರಿಗೆಯನ್ನು ತಪ್ಪಿಸುವ 'ಸಮತೋಲ' ಮಾಡುವುದೆಂದರೆ ಬಡವರ ಹೊಟ್ಟೆಗೆ ಹೊಡೆದಷ್ಟೇ ಇದನ್ನು ಸಾಧಿಸಬೇಕು ಎಂದಂತಾಯಿತು. ಆ ದೃಷ್ಟಿಯಿಂದ ರಿಪಬ್ಲಿಕನ್ನರಿಗೆ ಜಯ ದೊರೆತಂತಾಗುತ್ತದೆ.

ಬಜೆಟ್ ಕೊರತೆ ತಪ್ಪಿಸಲು ಸಾರ್ವಜನಿಕ ವಸತಿ ಕಾರ್ಯಕ್ರಮ, ಆರೋಗ್ಯ, ಶಿಕ್ಷಣ, ಸಾರಿಗೆ ಹಾಗೆ ವೃದ್ಧರಿಗೆ, ಒಂಟಿ ತಾಯಂದಿರಿಗೆ, ಕರಿಯರಿಗೆ, ಹಿಸ್ಪಾನಿಕ್ ಜನಾಂಗದವರಿಗೆ ಕೊಡುವ ಸಾಮಾಜಿಕ ಭದ್ರತಾ ಕಾರ್ಯಕ್ರಮಗಳಲ್ಲಿ ತೀವ್ರ ಕಡಿತ ತರಬೇಕೆಂದು ರಿಪಬ್ಲಿಕನ್ ಪಕ್ಷದ ಕಾರ್ಯಕ್ರಮ. ಈಗಾಗಲೇ ಅಮೇರಿಕಾ ಅಭಿವೃದ್ಧಿ ಹೊಂದಿದ ದೇಶಗಳಲ್ಲೇ ಬಡವ-ಶ್ರೀಮಂತ ಕಂದರ ವಿಪರೀತ ಹೆಚ್ಚಿರುವ ದೇಶ. ಅಮೇರಿಕಾದ ಜನಗಣತಿಯ ಪ್ರಕಾರ ರಿಪಬ್ಲಿಕನ್ ಪಕ್ಷದ 'ರೇಗನ್ ಯುಗ'ದಲ್ಲಿ 1980ರ ದಶಕದಲ್ಲಿ ಆದ ಆದಾಯ ಹೆಚ್ಚಳದ 75% ಹಾಗೂ ಸಂಪತ್ತಿನ ಹೆಚ್ಚಳದ 100% ಅಮೇರಿಕನ್ ಸಮಾಜದ ಅತ್ಯಂತ ಶ್ರೀಮಂತ 20% ಜನರ ಪಾಲಿಗೆ ಹೋಯಿತು. ಕಳೆದ ವರ್ಷ ಕೂಡಾ ದೊಡ್ಡ ಬಂಡವಾಳಿಗರ ಲಾಭ ಒಂದೇ ವರ್ಷದಲ್ಲಿ 54.3% ಹೆಚ್ಚಿದರೆ ಖಾಸಗೀ ವಲಯದ ನೌಕರರ ಸಂಬಳ 1988ರ ಮಟ್ಟಕ್ಕಿಂತಲೂ 5.5% ರಷ್ಟು ಕಡಿಮೆಯಾಯಿತು.

ಹೀಗಿರುವಾಗ ಕ್ಲಿಂಟನ್ ಈ ಆರು ದಿನಗಳ ಕಚ್ಚಾಟದ ವೇಳೆಗೆ ಹೇಳಿದ 'ಆಯ್ಕೆ'ಯ ಮಾತನ್ನು ಉಳಿಸಿಕೊಳ್ಳಬೇಕಾದರೆ ಅಮೇರಿಕನ್ ಸರಕಾರ ಬಂಡವಾಳದ ವಿಭಾಗದ ಬೊಜ್ಜನ್ನು ಕರಗಿಸುವ ಕ್ರಮ ಕೈಗೊಳ್ಳಬೇಕಾಗುತ್ತದೆ. ಆದರೆ ಕ್ಲಿಂಟನ್ ಅದನ್ನು ಮಾಡಬಲ್ಲರೇ ಎಂಬುದು ಒಂದು ದೊಡ್ಡ ಪ್ರಶ್ನೆ.

(ಐ.ಎನ್.ಎಸ್.)

KRNM/BGS-405 MAG (2) PRB DECR 319-79/79
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ. ರಾಮಚಂದ್ರರಾವ್
ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27
ಫೋನ್ ನಂ. 2236462 ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ಸ್ ರಸ್ತೆ ಬೆಂಗಳೂರು

ಕಾರ್ಖಾನೆಗಳಲ್ಲಿ ಸುರಕ್ಷಿತತೆ; ಕೇಂದ್ರ ಸರಕಾರದ ಅಸಡ್ಡೆ

ಸಿಐಟಿಯು ಟೀಕೆ

ಭಾರತದಲ್ಲಿ ಕಾರ್ಖಾನೆಗಳಲ್ಲಿನ ಅಪಘಾತಗಳಲ್ಲಿ ಪ್ರತಿ ವರ್ಷ 30 ಸಾವಿರ ಕಾರ್ಮಿಕರು ಮರಣವನ್ನಪ್ಪುತ್ತಿದ್ದಾರೆ. ಒಂದು ಲಕ್ಷಕ್ಕೂ ಹೆಚ್ಚು ಕಾರ್ಮಿಕರು ಗಾಯಗೊಳ್ಳುತ್ತಿದ್ದಾರೆ. ಕೆಲಸದ ಜಾಗದಲ್ಲಿನ ಅಪಾಯಗಳಿಗೆ 10 ಲಕ್ಷಕ್ಕೂ ಹೆಚ್ಚು ಮಂದಿ ಒಳಗಾಗಿದ್ದಾರೆ. ಇನ್ನೂ ಲಕ್ಷಾಂತರ ಕಾರ್ಮಿಕರು ವಾಯು, ಜಲ ದೋಷದಿಂದ ನರಳುತ್ತಿದ್ದಾರೆ. ಹೀಗೆ ಕೇಂದ್ರ ಸರಕಾರ ಈ ಬಗ್ಗೆ ಕಾನೂನುಗಳನ್ನು ಮಾಡಿದ್ದೇ ಕಮ್ಮಿ, ಮಾಡಿದ ಕಾನೂನುಗಳನ್ನು ಸರಿಯಾಗಿ ಜಾರಿಗೊಳಿಸುವ ವ್ಯವಸ್ಥೆ ಕೂಡಾ ಅದರ ಬಳಿಯಲ್ಲಿಲ್ಲ ಎಂದು ಸಿಐಟಿಯು ಪ್ರಧಾನ ಕಾರ್ಯದರ್ಶಿ ಡಾ.ಎಂ.ಕೆ. ಫಂದೆ ತೀವ್ರವಾಗಿ ಟೀಕಿಸಿದ್ದಾರೆ. ಅವರ ಉದ್ದಿಮೆಗಳಲ್ಲಿ ಸುರಕ್ಷಿತತೆ ಕುರಿತ APOSHO ಸಮ್ಮೇಳನವನ್ನುದ್ದೇಶಿಸಿ ಮಾತನಾಡುತ್ತಿದ್ದರು. ನವಂಬರ್ 16-18ರವರೆಗೆ ನವದೆಹಲಿಯಲ್ಲಿ ಈ ಸಮ್ಮೇಳನ ನಡೆಯಿತು.

ಭಾರತದಲ್ಲಿ ಸುರಕ್ಷಿತತಾ ಆಂದೋಲನ ಕೇವಲ ಪಂಚತಾರಾ ಹೋಟೆಲುಗಳಲ್ಲಿ ನಡೆಯುವ ವಿಚಾರ ಸಂಕಿರಣಗಳು, ಸುರಕ್ಷಿತತೆ ದಿನಾಚರಣೆಗಳಿಗಷ್ಟೇ ಸೀಮಿತವಾಗಿದೆ. ಇದನ್ನು ಕಾರ್ಖಾನೆಗಳಿಗೆ ಒಯ್ದಾಗಲೇ ಅದಕ್ಕೇನಾದರೂ ಅರ್ಥ ಬರುತ್ತದೆ ಎಂದು ಡಾ. ಫಂದೆ ಹೇಳಿದರು.

ಜಂಟಿ ಸುರಕ್ಷಿತತಾ ಸಮಿತಿಗಳು ಕೇವಲ ಹೆಸರಿಗಷ್ಟೇ ಇರದೆ ಸಕ್ರಿಯ ಸಂಸ್ಥೆಗಳಾಗಬೇಕು, ಕಾರ್ಮಿಕ ಸಂಘಗಳು ಆರೋಗ್ಯ, ಸುರಕ್ಷಿತತೆ ಹಾಗೂ ಪರಿಸರಕ್ಕೆ ಸಂಬಂಧಪಟ್ಟ ಪ್ರಶ್ನೆಗಳಲ್ಲಿ ಹೆಚ್ಚು ಆಸಕ್ತಿ ತೋರಬೇಕು ಎಂದು ಅವರು ಹೇಳಿದರು.

ಆಧುನಿಕ ತಂತ್ರಜ್ಞಾನಗಳೊಂದಿಗೆ ದೇಶದೊಳಗೆ ಹೊಸ ಸುರಕ್ಷಿತತಾ ಸಮಸ್ಯೆಗಳೂ ಬರುತ್ತಿವೆ. ಈ ಬಗ್ಗೆ ಬಹುರಾಷ್ಟ್ರೀಯ ಕಂಪನಿಗಳು ಕಾರ್ಮಿಕ ಸಂಘಗಳಿಗೆ ಏನೂ ಮಾಹಿತಿ ನೀಡುವುದಿಲ್ಲ. ಅವು ತಮ್ಮ ದೇಶದಲ್ಲಿ ಜ್ಯಾರಿ ಮಾಡುವ ಸುರಕ್ಷಿತತಾ ಕ್ರಮಗಳನ್ನು ಇಲ್ಲಿ ಜ್ಯಾರಿ ಮಾಡುವುದಿಲ್ಲ ಎಂದು ಫಂದೆ ಹೇಳಿದರು.

ಮಾಲಕರು ಸುರಕ್ಷಿತತೆ ಕುರಿತ ಆಡಿಟ್ ವರದಿಗಳನ್ನು 'ಗೋಪ್ಯ' ದಸ್ತಾವೇಜು ಎಂದು ಪರಿಗಣಿಸುತ್ತಾರೆ. ಅದರ ಬದಲು ಅದನ್ನು ಕಾರ್ಮಿಕ ಸಂಘಗಳಿಗೆ ನೀಡಿದರೆ ಸುರಕ್ಷಿತತೆ ಕಾಪಾಡಲು ಜಂಟಿ ಪ್ರಯತ್ನ ನಡೆಸಲು ಸಾಧ್ಯ ಎಂದು ಅವರು ಹೇಳಿದರು.

ಕಾರ್ಮಿಕ ಸಂಘಗಳು ಆರ್ಥಿಕ ಬೇಡಿಕೆಗಳೊಂದಿಗೆ ಕಾರ್ಮಿಕರಿಗೆ ಸುರಕ್ಷಿತ ಕೆಲಸದ ವಾತಾವರಣ ಕಲ್ಪಿಸುವ ಬೇಡಿಕೆಗಳತ್ತಲೂ ಗಮನ ಹರಿಸಬೇಕು ಎಂದ ಡಾ. ಫಂದೆ ಸುರಕ್ಷಿತತೆ ನಿಯಮಗಳನ್ನು ಉಲ್ಲಂಘಿಸುವ ಮಾಲಕರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದರು.

(ಐ.ಎನ್.ಎಸ್.)

ಕನಿಷ್ಟ ಕೂಲಿಗೆ ಸಂಬಂಧಪಟ್ಟಂತೆ ಒಂದು ತರ್ಕಬದ್ಧ ಸೂತ್ರ ಸಾಧ್ಯ

ಕೇಂದ್ರ ಸರಕಾರದ ನಿಲುವನ್ನು ಟೀಕಿಸಿ ಸಿಪಿಐ(ಎಂ) ಎಂಪಿಗಳ ಪತ್ರ

ಕನಿಷ್ಟ ಕೂಲಿಯ ಪ್ರಶ್ನೆಯನ್ನು ಪ್ರಥಮ ಆದ್ಯತೆಯ ಪ್ರಶ್ನೆಯಾಗಿ ಕೈಗೆತ್ತಿಕೊಂಡು ಇಡೀ ದೇಶಕ್ಕೆ ಒಂದು ಐಕ್ಯಕ ಕನಿಷ್ಟ ಕೂಲಿಯನ್ನು ರೂಪಿಸುವತ್ತ ಕೆಲಸ ಮಾಡಬೇಕು ಎಂದು ಸಿಪಿಐ(ಎಂ) ಸಂಸತ್ ಸದಸ್ಯ ಜೀವನ್ ರಾಯ್ ಕೇಂದ್ರ ಕಾರ್ಮಿಕ ಮಂತ್ರಿ ಜಿ.ವೆಂಕಟಸ್ವಾಮಿಯವರಿಗೆ ಬರೆದ ಒಂದು ವಿವರವಾದ ಪತ್ರದಲ್ಲಿ ಆಗ್ರಹಪಡಿಸಿದ್ದಾರೆ.

ಈ ವಿಷಯದಲ್ಲಿ ಜೀವನ್ ರಾಯ್ ಪ್ರಧಾನಮಂತ್ರಿಗಳಿಗೆ ಒಂದು ಪತ್ರ ಬರೆದಿದ್ದರು. ಅದಕ್ಕೆ ಕಾರ್ಮಿಕ ಮಂತ್ರಿಗಳಿಂದ ಬಂದ ಉತ್ತರದ ಹಿನ್ನೆಲೆಯಲ್ಲಿ ಈ ಪತ್ರವನ್ನು ಬರೆದಿದ್ದಾರೆ.

ಸದ್ಯ ಇಡೀ ದೇಶಕ್ಕೆ ಅನ್ವಯವಾಗುವ ಕನಿಷ್ಟ ಕೂಲಿಯನ್ನು ರೂಪಿಸುವುದು ಸಾಧ್ಯವಿಲ್ಲ ಎಂಬ ಮಂತ್ರಿಗಳ ಅಭಿಪ್ರಾಯವನ್ನು ಒಪ್ಪಿದರೂ "...ಹಾಗೆಂದ ಮಾತ್ರಕ್ಕೆ ಯಾವುದೇ ನಾಗರಿಕ ಸಮಾಜ ಇಂತಹ ಮೂಲಭೂತ ಸ್ವರೂಪದ ಪ್ರಶ್ನೆಯನ್ನು ಸರಕಾರಗಳ ಮರ್ಜಿಗೇ ಬಿಡಲು ಸಾಧ್ಯವಿಲ್ಲ; ಅದೂ ಜಾಗತೀಕರಣಗೊಂಡ ಒಂದು ಆರ್ಥಿಕದಲ್ಲಿ ಶ್ರಮದ ಖರ್ಚನ್ನು ಇಳಿಸಲು ತೀವ್ರ ಪೈಪೋಟಿ ನಡೆದಿರುವಾಗಲಂತೂ ಸಾಧ್ಯವೇ ಇಲ್ಲ" ಎಂದು ಸಿಪಿಐ(ಎಂ) ಸಂಸತ್ ಸದಸ್ಯರು ತಮ್ಮ ಪತ್ರದಲ್ಲಿ ಹೇಳಿದ್ದಾರೆ.

ರಾಜ್ಯ-ರಾಜ್ಯಗಳ ನಡುವೆಯೂ ರಾಜ್ಯಗಳೊಳಗೂ ಕೂಡಾ ಕೂಲಿ ದರಗಳಲ್ಲಿ ವಿಪರೀತ ಅಸಮತೋಲನವಿದೆ. ಇನ್ನೂ ದುಷ್ಟ ಸಂಗತಿಯೆಂದರೆ ಹೆಚ್ಚಿನ ರಾಜ್ಯ ಸರಕಾರಗಳು ಒಂದು ವ್ಯವಸ್ಥಿತ ರೀತಿಯಲ್ಲಿ ಕಾಲ-ಕಾಲಕ್ಕೆ ಕನಿಷ್ಟ ಕೂಲಿಯ ಪರಿಷ್ಕರಣೆ ನಡೆಸುವುದಿಲ್ಲ ಎಂಬ ಸಂಗತಿಯತ್ತ ಜೀವನ್ ರಾಯ್ ಮಂತ್ರಿಗಳ ಗಮನ ಸೆಳೆದಿದ್ದಾರೆ. ಕೆಲವು ಕಡೆ ಕನಿಷ್ಟ ಕೂಲಿ ಅಧಿಕೃತವಾಗಿ 40ರೂ. ಇದ್ದರೂ ವಾಸ್ತವವಾಗಿ 10 ರೂಗಿಂತ ಹೆಚ್ಚು ಕೂಲಿ ಕೊಡುತ್ತಿಲ್ಲ. ಕೆಲವು ರಾಜ್ಯಗಳಂತೂ ವರ್ಷಾನುಗಟ್ಟಲೆ ಕನಿಷ್ಟ ಕೂಲಿಯನ್ನು ಪರಿಷ್ಕರಿಸುವುದಿಲ್ಲ.

ಈ ದುರದೃಷ್ಟಕರ ಸ್ಥಿತಿಗೆ ಕಾರಣ ಕನಿಷ್ಟ ಕೂಲಿಗೆ ಸಂಬಂಧಪಟ್ಟಂತೆ ಒಂದು ಕಾನೂನು ಪಠೋಟಿ ಇಲ್ಲದಿರುವುದು. 1948ರ ಕನಿಷ್ಟ ಕೂಲಿ ಶಾಸನ ಐದು ವರ್ಷಕ್ಕೊಮ್ಮೆ ಪರಿಷ್ಕರಣೆಯಾಗಬೇಕು ಎಂದು ಹೇಳುತ್ತದೆ. ಕಾಲ-ಕಾಲಕ್ಕೆ ಪರಿಷ್ಕರಣೆ ಮಾಡಲೇಬೇಕು, ಒಂದು ತರ್ಕಬದ್ಧ ರೀತಿಯನ್ನು ಬೆಲೆಯೇರಿಕೆಯನ್ನು ಸರಿಹೊಂದಿಸುವ ವ್ಯವಸ್ಥೆಯೊಂದನ್ನು ತರಬೇಕು ಎಂಬ ಬೇಡಿಕೆಯನ್ನು ಪರಿಶೀಲಿಸಲು ಕೇಂದ್ರ ಸರಕಾರ ನಿರಾಕರಿಸುತ್ತಿದೆ. ಸದ್ಯವೇ ಒಂದು ರಾಷ್ಟ್ರೀಯ ಕನಿಷ್ಟ ಕೂಲಿ ನಿಗದಿಪಡಿಸಲು ಸಾಧ್ಯವಿಲ್ಲವಾದರೂ ಕೇಂದ್ರ ಸರಕಾರ ರಾಜ್ಯ ಸರಕಾರಗಳೊಡನೆ ಸಮಾಲೋಚಿಸಿ ರಾಜ್ಯಗಳೊಳಗೆ ಮತ್ತು ಕೇಂದ್ರ ವ್ಯಾಪ್ತಿಯಲ್ಲಾದರೂ ಕನಿಷ್ಟ ಕೂಲಿಯನ್ನು ತರ್ಕಬದ್ಧಗೊಳಿಸಲು ಒಂದು ಸೂತ್ರವನ್ನು ರೂಪಿಸಲು ಸಾಧ್ಯ ಎಂದು ಜೀವನ್ ರಾಯ್ ತಮ್ಮ ಪತ್ರದಲ್ಲಿ ಹೇಳಿದ್ದಾರೆ.

ಕನಿಷ್ಟ ಕೂಲಿಯನ್ನು ಅನುಷ್ಠಾನಕ್ಕೆ ತರಲು ಒಂದು ವ್ಯವಸ್ಥೆಯನ್ನೂ ರೂಪಿಸಲು ಕೇಂದ್ರ ಸರಕಾರ ನಿರಾಕರಿಸುತ್ತಿದ್ದು ಇದರಿಂದ ಮಾಲಿಕರಿಗೆ ತಪ್ಪಿಸಿಕೊಳ್ಳಲು ಸುಲಭವಾಗಿದೆ. ಕನಿಷ್ಟ ಕೂಲಿಯ ವಿಷಯವನ್ನು ಸಂವಿಧಾನದ 9ನೇ ಶೆಡ್ಯೂಲಿಗೆ ಹಾಕಲು ಸಾಧ್ಯವಿಲ್ಲವಾದರೆ ಮಾಲಿಕರು ಪದೇ ಪದೇ ವಿಷಯದಲ್ಲಿ ಕೋರ್ಟಿಗೆ ಹೋಗಿ ಕನಿಷ್ಟ ಕೂಲಿಯ ಜ್ಯಾರಿಯನ್ನು ತಪ್ಪಿಸಿಕೊಳ್ಳಲು ಅವಕಾಶವಾಗದಂತೆ ಕಾನೂನು ರಚಿಸಲು ಸಾಧ್ಯವೇ ಎಂದು ಸರಕಾರ ಪರಿಶೀಲಿಸಬೇಕು ಎಂದು ಜೀವನ್ ರಾಯ್ ಆಗ್ರಹಪಡಿಸಿದ್ದಾರೆ. ಕಾರ್ಮಿಕ ಸಚಿವಾಲಯ ಎಂದೂ ಮಾಲಿಕರ ಪ್ರತಿನಿಧಿಗಳೊಂದಿಗಾಗಲೀ, ಭಾರತೀಯ ಕಾರ್ಮಿಕ ಸಮ್ಮೇಳನಗಳಲ್ಲಾಗಲೀ ಈ ಬಗ್ಗೆ ಚರ್ಚಿಸಿದ ಬಗ್ಗೆ ಮಾಹಿತಿ ತನಗಿಲ್ಲ ಎಂದು ಅವರು ಖೇದ ವ್ಯಕ್ತಪಡಿಸಿದ್ದಾರೆ.

ಸರಕಾರದ ಹೊಸ ಆರ್ಥಿಕ ನೀತಿಯ ಆಶ್ರಯದಲ್ಲಿ ಕಾರ್ಮಿಕರ ಪರಿಸ್ಥಿತಿ ಹದಗೆಡುತ್ತಿರುವ ಪರಿಸ್ಥಿತಿಯಲ್ಲಿ ಕನಿಷ್ಟ ಕೂಲಿಯ ಪುನರ್ರಚನೆಗೆ ತಕ್ಷಣ ರಾಜಕೀಯ ಕ್ರಮಗಳನ್ನು ರೂಪಿಸುವುದು ಹಾಗೂ ಅವನ್ನು ಜ್ಯಾರಿಗೊಳಿಸುವುದು ಬಹಳ ಮಹತ್ವದ್ದು ಎಂದು ಸಿಪಿಐ(ಎಂ) ಸಂಸತ್ ಸದಸ್ಯ ಜೀವನ್ ರಾಯ್ ಒತ್ತಿ ಹೇಳಿದ್ದಾರೆ.

(ಐ.ಎನ್.ಎಸ್.)



ಡಿವೈಎಫ್‌ಐನ 5ನೇ ಅಖಿಲ ಭಾರತ ಸಮ್ಮೇಳನದ ಕೊನೆಯಲ್ಲಿ ನವಂಬರ್ 18ರಂದು ಒಂದು ಭವ್ಯ ರ್‍ಯಾಲಿ ನಡೆಯಿತು. ಮೂರು ದಿನಗಳಿಂದ ಮಳೆ ಸುರಿಯುತ್ತಿದ್ದರೂ 6 ಲಕ್ಷ ಯುವಜನರು ಇದರಲ್ಲಿ ಭಾಗವಹಿಸಿದ್ದರು. ರ್‍ಯಾಲಿ ನಡೆದ ಬ್ರಿಗೇಡ್ ಪರೇಡ್ ಮೈದಾನ ವರ್ಣರಂಜಿತ ಬಲೂನ್‌ಗಳು, ಕೆಂಪು ನಕ್ಷತ್ರದ ಬಿಳಿ ಬಾವುಟಗಳಿಂದ ತುಂಬಿತ್ತು. ವೇದಿಕೆಯಲ್ಲಿ ಎಂ.ಎ.ಬೇಬಿ, ಎಡರಂಗದ ಅಧ್ಯಕ್ಷ ಶೈಲೇನ್ ದಾಸ್ ಗುಪ್ತಾ, ಸೀತಾರಾಂ ಯೆಚೂರಿ, ಜ್ಯೋತಿ ಬಸು, ಡಿವೈಎಫ್‌ಐನ ನೂತನ ಅಧ್ಯಕ್ಷ ಕೃಷ್ಣದಾಸ್, ಪ್ರಧಾನ ಕಾರ್ಯದರ್ಶಿ ಸಲೀಂ ಮತ್ತಿತರರನ್ನು ಕಾಣಬಹುದು.
ಕೆಳಗಡೆ: ಬೃಹತ್ ಮೆರವಣಿಗೆಯ ಒಂದು ಭಾಗದ ದೃಶ್ಯ



WFDY - ಜಾಗತಿಕ ಪ್ರಜಾಪ್ರಭುತ್ವವಾದಿ ಯುವಜನ ಒಕ್ಕೂಟಕ್ಕೆ 50 ವರ್ಷ

ನವಂಬರ್ 15ರಂದು ಜಾಗತಿಕ ಪ್ರಜಾಪ್ರಭುತ್ವವಾದಿ ಯುವಜನ ಒಕ್ಕೂಟ- WFDY ತನ್ನ ಸುವರ್ಣ ಜಯಂತಿಯನ್ನಾಚರಿಸಿತು. ಕಲ್ಕತ್ತೆಯಲ್ಲಿ ಡಿವೈಎಫ್‌ಐ ಸಮ್ಮೇಳನ ನಡೆದ 'ನಜರುಲ್ ಮಂಚ್'ನಲ್ಲೇ ಈ ಕುರಿತ ಸಮಾರಂಭ ನಡೆಯಿತು - ನಂತರ WFDYನ ಏಶ್ಯಾ-ಶಾಂತ ಸಾಗರ ಪ್ರದೇಶದ ಸಭೆ ನಡೆಯಿತು. ಜ್ಯೋತಿ ಬಸು 50ನೇ ವಾರ್ಷಿಕೋತ್ಸವದ ಉದ್ಘಾಟನೆ ಮಾಡುತ್ತಾ ಪ್ರತಿನಿಧಿಗಳು ಸಾಮ್ರಾಜ್ಯಶಾಹಿಗೆ ಎಲ್ಲಾ ಬಣಗಳ ನವವಸಾಹತುಶಾಹಿಗೆ ವಿರೋಧವನ್ನು ಮತ್ತೊಮ್ಮೆ ದೃಢಪಡಿಸುತ್ತಾ ದೇಶಗಳ ಆಂತರಿಕ ವ್ಯವಹಾರಗಳಲ್ಲಿ ಯಾವುದೇ ನೆವವೊಡ್ಡಿ ಮಧ್ಯಪ್ರವೇಶಿಸಿ ಯಜಮಾನಿಕೆ ನಡೆಸುವುದಕ್ಕೆ ಆಳವಾದ ವಿರೋಧವನ್ನು ಪುನರುಚ್ಛರಿಸಬೇಕು ಎಂದರು. ಸಾಮ್ರಾಜ್ಯಶಾಹಿ ಈಗಲೂ ವಿವಿಧ ಸ್ವರೂಪಗಳಲ್ಲಿ ಕಾರ್ಯಪ್ರವೃತ್ತವಾಗಿದೆ. ಈಗಿನ ಸನ್ನಿವೇಶದಲ್ಲಿ ಯುವಜನರು ರಾಜಕೀಯ ಸ್ವಾತಂತ್ರ್ಯದ ಹೋರಾಟವನ್ನು ಬಲಗೊಳಿಸಲು, ಆರ್ಥಿಕ ನ್ಯಾಯ ಪಡೆಯಲು, ನಾಗರಿಕ ಹಕ್ಕುಗಳು ಹಾಗೂ ಮಾನವ ಹಕ್ಕುಗಳಿಗಾಗಿ ತಮ್ಮ ಶಕ್ತಿಯನ್ನೆಲ್ಲಾ ಕೇಂದ್ರೀಕರಿಸಬೇಕು ಎಂದರು. 1945ರಲ್ಲಿ WFDYನ ಮೊದಲ ಸಮ್ಮೇಳನದಲ್ಲಿ ಭಾಗವಹಿಸಿದ್ದ ಇಬ್ಬರು ಭಾರತೀಯ ಪ್ರತಿನಿಧಿಗಳಾದ ಕಿಟ್ಟಿ ಮೆನನ್ ಹಾಗೂ ವಿದ್ಯಾಮುನ್ನಿಯವರನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು.

ಎರಡನೇ ಮಹಾಯುದ್ಧದ ಸಮಯದಲ್ಲಿ ವಿಶ್ವದ ಯುವಜನರನ್ನು ಒಟ್ಟಿಗೆ ತಂದು ಒಂದು ವಿಶ್ವ ಯುವಜನ ಸಂಘಟನೆ ರಚಿಸುವ ಪ್ರಯತ್ನ ಆರಂಭವಾಯಿತು. ಸೋವಿಯತ್ ಯುವಜನ ಇದರಲ್ಲಿ ಮೊದಲಡಿಯಿಟ್ಟರು. 1943ರಲ್ಲಿ ಸೋವಿಯತ್ ಯುವ ನಿಯೋಗವೊಂದು ಇಂಗ್ಲೆಂಡಿನ ಪ್ರವಾಸ ನಡೆಸಿತು. ನಂತರ ಅಮೇರಿಕಾದಲ್ಲಿ ಆಗಷ್ಟೇ ರಚನೆಗೊಂಡಿದ್ದ ಯುವ ಜನ ಸಂಘಟನೆಯನ್ನು ಸಂಪರ್ಕಿಸಿತು. ನಂತರ ಬೇರೆ ದೇಶಗಳಿಗೂ ಭೇಟಿ ನೀಡಿತು.

ಇದರ ಫಲವಾಗಿ 1944ರಲ್ಲಿ ಲಂಡನ್ನಿನಲ್ಲಿ ಅಂತರ್ರಾಷ್ಟ್ರೀಯ ಯುವಜನ ಸಮಿತಿ ರಚನೆಯಾಯಿತು. ಇಂಗ್ಲೆಂಡ್, ಸೋವಿಯತ್ ಒಕ್ಕೂಟ, ಭಾರತ, ಆಸ್ಟ್ರಿಯಾ, ಡೆನ್ಮಾರ್ಕ್‌ನ ಪ್ರತಿನಿಧಿಗಳು ಇತರ ತಂತಮ್ಮ ದೇಶಗಳ ಕೊನೆಗೆ ಸರಕಾರ ರಚಿಸಿದ್ದ ಯುರೋಪಿಯನ್ ಸರಕಾರಗಳ ಯುವ ಪ್ರತಿನಿಧಿಗಳು, ಅಮೇರಿಕಾ, ಆಸ್ಟ್ರೇಲಿಯಾ, ಟಿಟೋರವರ ಯುಗೋಸ್ಲಾವ್ ವಿಮೋಚನಾ ಸೇನೆಯ ಪ್ರತಿನಿಧಿಗಳು ಈ ಸಂಘಟನೆಯನ್ನು ಸೇರಿದರು. ಯುದ್ಧದಲ್ಲಿ ಫ್ಯಾಸಿಸ್ಟ್-ವಿರೋಧಿ ಮಿತ್ರ ಕೂಟದ ಕೈ ಮೇಲಾಗುತ್ತಿದ್ದಂತೆ ವಿಶೇಷವಾಗಿ ಸ್ಟಾಲಿನ್‌ಗ್ರಾಡ್‌ನ ಉತ್ತೇಜನಕಾರಿ ವಿಜಯದ ನಂತರ ಈ ಸಂಘಟನೆ ಇನ್ನಷ್ಟು ಬಲಪಡೆಯಿತು. ಒಂದು ವಿಶ್ವ ಸಮ್ಮೇಳನಕ್ಕೆ ಸಿದ್ಧತೆ ಆರಂಭವಾಯಿತು. ಕೊನೆಗೆ ನವಂಬರ್ 1945ರಲ್ಲಿ ಸಮ್ಮೇಳನ ನಡೆಯಿತು. 64 ದೇಶಗಳ 3 ಕೋಟಿ ಯುವಜನರನ್ನು ಪ್ರತಿನಿಧಿಸಿದ್ದ 347 ಪ್ರತಿನಿಧಿಗಳು ಈ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಆರು ವರ್ಷಗಳ ಯುದ್ಧದಲ್ಲಿ ಭಾಗವಹಿಸಿದ್ದ, ಗುಪ್ತ ಪ್ರತಿರೋಧ ಆಂದೋಲನದಲ್ಲಿ ಭಾಗವಹಿಸಿದ್ದ, ನಾಝಿಗಳ ಶ್ರಮ ಶಿಬಿರಗಳಿಂದ, ಅನಿಲ ಗೂಡುಗಳಿಂದ ಪಾರಾಗಿ ಬಂದ ಯುವಜನರೂ ಇದರಲ್ಲಿ ಸೇರಿದ್ದರು.

ನವಂಬರ್ 10ರಂದು ತನ್ನ ಪ್ರಖ್ಯಾತ ಪ್ರತಿಜ್ಞೆ ಹಾಗೂ 'ಸ್ವಾತಂತ್ರ್ಯದ ಹಾಡಿ'ನೊಂದಿಗೆ ಜಾಗತಿಕ ಪ್ರಜಾಪ್ರಭುತ್ವವಾದಿ ಯುವಜನ ಒಕ್ಕೂಟ ಅಥವಾ WFDY ಜನ್ಮತಾಳಿತು; ಫ್ಯಾಸಿಸಂನ್ನು ತುಳಿದು ಹಾಕುವ ದೃಢ ನಿರ್ಣಯವನ್ನು, ತಾವು ಬಯಸುವ ಜಗತ್ತನ್ನು ಕಟ್ಟಲು, ಹಸಿವು, ಬಡತನ, ನಿರುದ್ಯೋಗವನ್ನು ನಿರ್ಮೂಲ ಮಾಡಲು ತಮ್ಮ ನಿಪುಣ ಕೈಗಳನ್ನು, ತೀಕ್ಷ್ಣ ಮೆದುಳನ್ನು ಹಾಗೂ ಯೌವ್ವನೋತ್ಸಾಹವನ್ನು ಬಳಸುವ ಪ್ರತಿಜ್ಞೆ ಮಾಡಿದರು ಅಂದಿನ ಯುವ ಪ್ರತಿನಿಧಿಗಳು. 50 ವರ್ಷಗಳ ಹಿಂದೆ ಯುವಜನರ ಪ್ರತಿನಿಧಿಗಳು ಎದುರಿಸಿದ್ದಂತಹ ಸವಾಲುಗಳೇ ಈಗ ಮತ್ತೆ ಈಗಿನ ಯುವಜನರ ಎದುರು ಇದೆ ಎಂದು ಕಿಟ್ಟಿ ಮೆನನ್ ಅಂದಿನ